ಸಂಪಾದಕರು :
ಎಂ.ಎಸ್. ವಿಕಾಸ್

ಮಂಗಳವಾರ, ಜುಲೈ 11, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 58 RNI : 27369/75

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
08192 254736 91642 99999



## ಜೈನ ಮುನಿ ಹತ್ಯೆ: ಕಠಿಣ ಶಿಕ್ಷೆಗೆ ಒತ್ತಾಯ

### ಶ್ರೀ ಮಹಾವೀರ ಸಂಘದ ನೇತೃತ್ವದಲ್ಲಿ ಜೈನ ಸಮಾಜದಿಂದ ನಗರದಲ್ಲಿ ಪ್ರತಿಭಟನೆ

ದಾವಣಗೆರೆ, ಜು. 10- ಜೈನ ಮುನಿಯನ್ನು ಭೀಕರವಾಗಿ ಹತ್ಯೆ ಮಾಡಿದ ಹಂತಕರಿಗೆ ಕಠಿಣ ಶಿಕ್ಷೆ ವಿಧಿಸುವಂತೆ ಒತ್ತಾಯಿಸಿ ಶ್ರೀ ಮಹಾವೀರ ಸಂಘದ ನೇತೃತ್ವದಲ್ಲಿ ಜೈನ ಸಮಾಜದ ವತಿಯಿಂದ ಪ್ರತಿಭಟನೆ ನಡೆಸಿ, ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲಾಯಿತು.

ಇದೇ ವೇಳೆ ಮಾತನಾಡಿದ ಜೈನ ಸಮಾಜದ ಮುಖಂಡ ಗೌತಮ್ ಜೈನ್ ಅವರು, ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕು ಹಿರೇಕೋಡಿ ಗ್ರಾಮದ ನಂದಿ ಪರ್ವತ ಎಂಬ ಆಶ್ರಮದಲ್ಲಿ ದಿಗಂಬರ ಜೈನ ಮುನಿ ಆಚಾರ್ಯ ಶ್ರೀ ಕಾಮಕುಮಾರ ನಂದಿ ಮಹಾರಾಜರನ್ನು ಅಪಹರಿಸಿಕೊಂಡು ಹೋಗಿ ಬರ್ಬರವಾಗಿ ಹತ್ಯೆಗೈದಿರುವುದು ಅತ್ಯಂತ ಖಂಡನೀಯ ಎಂದರು.

ಜೈನ ಮುನಿಗಳ ಶರೀರವನ್ನು ವಿಕೃತಗೊಳಿಸಿ ಕೊಲೆ ಮಾಡಿರುವುದನ್ನು ನಾಗರಿಕ ಸಮಾಜ ತೀವ್ರವಾಗಿ ಖಂಡಿಸಿದೆ. ಘಟನೆ ಕುರಿತಂತೆ ಬೆಳಗಾವಿ ಉನ್ನತ ಮಟ್ಟದ ಪೊಲೀಸ್ ಅಧಿಕಾರಿಗಳು ತ್ವರಿತಗತಿಯಲ್ಲಿ ಕಾರ್ಯಾಚರಣೆ ಮಾಡಿ ಹಂತಕರನ್ನು ಬಂಧಿಸಿ ತನಿಖೆ ಮುಂದುವರೆಸಿದ್ದಾರೆ. ಆದರೆ ತಪ್ಪಿತಸ್ಥರಿಗೆ ಕೂಡಲೇ ಕಠಿಣ ಶಿಕ್ಷೆ ವಿಧಿಸಬೇಕು. ಸೂಕ್ತ ತನಿಖೆಯಾಗಬೇಕೆಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಜೈನ ಸಮುದಾಯದ ಮುಖಂಡರಾದ ಅಜಿತ್ ಕುಮಾರ್, ಸುದರ್ಶನ ಕುಮಾರ್, ಬಿ.ಎಸ್. ಸುನೀಲ್ ಕುಮಾರ್, ಎಸ್.ಟಿ. ಟಾಕಪ್ಪ, ಜಿನದತ್ತ, ಆದಿನಾಥ್, ಎಸ್.ಕೆ. ದೇವೇಂದ್ರಪ್ಪ, ನೇಮಿರಾಜ್, ಚಂದ್ರಪ್ರಭು, ಸುರೇಶ್ ಕುಮಾರ್, ಧನ್ಯಕುಮಾರ್ ಮತ್ತಿತರರು ಪಾಲ್ಗೊಂಡಿದ್ದರು.

### ಅನ್ನಭಾಗ್ಯದ ಅಕ್ಕಿ ಬದಲು ಫಲಾನುಭವಿಗಳ ಖಾತೆಗೆ ಹಣ

## 'ಧನ ಭಾಗ್ಯ' ಯೋಜನೆ ಶುರು

ಬೆಂಗಳೂರು, ಜು.10 - ಅನ್ನ ಭಾಗ್ಯ ಯೋಜನೆಯಡಿ ಎಂದಿನಂತೆ ಅಕ್ಕಿ ಜತೆಗೆ ಹೆಚ್ಚುವರಿಯಾಗಿ ನೀಡಬೇಕಿದ್ದ ಅಕ್ಕಿಯ ಹಣವನ್ನು ಫಲಾನುಭವಿಗಳ ಖಾತೆಗೆ ರಾಜ್ಯ ಸರ್ಕಾರ ವರ್ಗಾಯಿಸಿದೆ.

ವಿಧಾನಸಭಾ ಚುನಾವಣೆಗೂ ಮುನ್ನ ಕಾಂಗ್ರೆಸ್ ನೀಡಿದ್ದ 5 ಭರವಸೆಗಳಲ್ಲಿ ಮೂರನೇ ಭರವಸೆ ಅನ್ನ ಭಾಗ್ಯಯೋಜನೆ ರಾಜ್ಯಾದ್ಯಂತ ಜಾರಿಗೊಂಡಿದೆ.



ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಎಚ್. ಮುನಿಯಪ್ಪ ಅವರು ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಫಲಾನುಭವಿಗಳ ಜತೆ ಸಂವಾದ ನಡೆಸಿ ಅವರ ಖಾತೆಗಳಿಗೆ ಹಣ ವರ್ಗಾವಣೆ ಮಾಡುವುದಕ್ಕೆ ಚಾಲನೆ ನೀಡಿದರು.

ಇದರಿಂದ ಗ್ಯಾರಂಟಿ ಭರವಸೆಗಳಲ್ಲಿ ಶಕ್ತಿ, ಗೃಹಜ್ಯೋತಿ ಹಾಗೂ ಅನ್ನ ಭಾಗ್ಯ ಯೋಜನೆಗಳು ಜನರಿಗೆ ತಲುಪಿದಂತಾಗಿದೆ. ಸಿದ್ದರಾಮಯ್ಯ ಹಿಂದಿನ ಬಾರಿ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಾಗ ಜಾರಿ ಮಾಡಿದ್ದ ಅನ್ನಭಾಗ್ಯ ಯೋಜನೆಗೆ 10 ವರ್ಷಗಳು ಕಳೆದಿವೆ.

ಇದರ ನೆನಪಿನಲ್ಲೇ ಈ ಹಿಂದೆ ನೀಡುತ್ತಿದ್ದ 5 ಕೆ.ಜಿ.ಆಹಾರ ಧಾನ್ಯಗಳ ಜತೆಗೆ ಹೆಚ್ಚುವರಿ 5 ಕೆ.ಜಿ.ಆಹಾರ ಧಾನ್ಯದ ಬದಲು ಪ್ರತಿಯೊಬ್ಬರಿಗೆ ಮಾಸಿಕ 170 ರೂ. ದೊರೆಯಲಿದೆ. ಪ್ರತಿ ಕೆ.ಜಿ.34 ರೂ.ನಂತೆ ಹಣ ನೀಡಲಾಗುತ್ತದೆ. ಸರ್ಕಾರದ ಈ ನಿರ್ಧಾರದಿಂದ ರಾಜ್ಯದ 1.27 ಕೋಟಿ ಕುಟುಂಬದ 4.42 ಕೋಟಿ ಜನರಿಗೆ ಇದರ ಲಾಭ ದೊರೆಯಲಿದೆ.

ಅನ್ನಭಾಗ್ಯ ಯೋಜನೆ ಫಲಾನುಭವಿಗಳಿಗೆ ನೇರ ನಗದು ವರ್ಗಾಯಿಸುವ ಪ್ರಕ್ರಿಯೆ ನಂತರ ಮಾತನಾಡಿದ ನಾಯಕರು, ಹಣ ನೀಡುವುದು ತಾತ್ಕಾಲಿಕ. ನಮಗೆ ಅಗತ್ಯವಿರುವ ಹೆಚ್ಚುವರಿ ಆಹಾರ ಧಾನ್ಯ ದೊರೆತ ನಂತರ ಅಕ್ಕಿ, ರಾಗಿ, ಗೋಧಿ, ಜೋಳ ನೀಡುವುದಾಗಿ ತಿಳಿಸಿದರು.

ನಾವು ನೀಡಿರುವ ಭರವಸೆಗಳಿಗೆ ಮುಂಗಡ ಪತ್ರದಲ್ಲಿ ಹಣ ಒದಗಿಸಿ ನುಡಿದಂತೆ ನಡೆದಿದ್ದೇವೆ. ಈಗಾಗಲೇ ಮೂರು ಯೋಜನೆಗಳು ಜನರ ಮನೆ ಬಾಗಿಲಿಗೆ ತಲುಪಿವೆ. ಮನೆ ಯಜಮಾನಿಗೆ ಮಾಸಿಕ 2 ಸಾವಿರ ರೂ. ನೀಡುವ ಗೃಹಲಕ್ಷ್ಮಿ ಯೋಜನೆ ಆ.17ರಿಂದ ಜಾರಿಗೊಳ್ಳಲಿದೆ ಎಂದು ಹೇಳಿದರು.

ನಿರುದ್ಯೋಗಿ ಪದವೀಧರರಿಗೆ ಮಾಸಿಕ ಮೂರು ಸಾವಿರ ರೂ. ನೀಡುವ ಯುವ ನಿಧಿ ಯೋಜನೆ ನವೆಂಬರ್-ಡಿಸೆಂಬರ್‌ನಲ್ಲಿ ಜಾರಿಗೆ ಬರಲಿದೆ ಎಂದರು.

ಚುನಾವಣೆಗೂ ಮುನ್ನ ಗ್ಯಾರಂಟಿಗಳ ಜತೆಗೆ ನೀಡಿದ್ದ ಇತರೆ ಭರವಸೆಗಳಲ್ಲಿ ಬಹುಪಾಲು ಮುಂಗಡ ಪತ್ರದಲ್ಲೇ ಪ್ರಸ್ತಾಪಿಸಿದ್ದೇವೆ ಎಂದು ಸಿದ್ದರಾಮಯ್ಯ ತಿಳಿಸಿದರು.

ಬಿಪಿಎಲ್ ಮತ್ತು ಅಂತ್ಯೋದಯ ಅನ್ನ ಯೋಜನೆ ಕಾರ್ಡುದಾರರ ಪೈಕಿ ಶೇ.99ರಷ್ಟು ಪಡಿತರ ಚೀಟಿಗಳು ಆಧಾರ್‌ನೊಂದಿಗೆ ಜೋಡಣೆಗೊಂಡಿವೆ. ಇದರಲ್ಲಿ ಶೇ.82ರಷ್ಟು, ಅಂದರೆ, 1.06 ಕೋಟಿ ಕಾರ್ಡುಗಳು ಬ್ಯಾಂಕ್ ಖಾತೆ ಜತೆ ಜೋಡಣೆ ಆಗಿವೆ. (2ನೇ ಪುಟಕ್ಕೆ)

## 289 ಕೋಟಿ ರೂ. ವಂಚನೆ : ಬಂಧನ

ನವದೆಹಲಿ, ಜು. 10 – ಬ್ಯಾಂಕ್‌ಗೆ 289.15 ಕೋಟಿ ರೂ.ಗಳ ವಂಚನೆ ಮಾಡಿದ ಆರೋಪದ ಮೇಲೆ ತಿರುಪತಿ ಇನ್‌ಫ್ರಾ ಪ್ರಾಜೆಕ್ಟ್ಸ್ ಕಂಪನಿಯ ಅಧ್ಯಕ್ಷ ಮೋಹನ್ ಗಾರ್ಗ್‌ನನ್ನು ಬಂಧಿಸಲಾಗಿದೆ.

ಕಂಪನಿ ಸಾಲ ಪಡೆದ ಹಣವನ್ನು ಅಕ್ರಮವಾಗಿ ಬೇರೆಡೆಗೆ ವರ್ಗಾಯಿಸಿದೆ ಎಂದು ಸಿ.ಬಿ.ಐ. ಆರೋಪಿಸಿದೆ. ಆರೋಪಿಯನ್ನು ಸಿಬಿಐ ವಿಶೇಷ ನ್ಯಾಯಾಲಯದ ಎದುರು ಹಾಜರುಪಡಿಸಲಾಗಿದ್ದು, ಜುಲೈ 13ರವರೆಗೆ ಕಸ್ಟಡಿಗೆ ನೀಡಲಾಗಿದೆ.

## ಚೀನಾ ಶಿಶುವಿಹಾರದ ಮೇಲೆ ದಾಳಿ; 6 ಸಾವು

ಬೀಜಿಂಗ್, ಜು. 10- ಚೀನಾದ ಗ್ವಾಂಗ್ ಡಾಂಗ್ ಪ್ರಾಂತ್ಯದಲ್ಲಿ ವ್ಯಕ್ತಿಯೋರ್ವ ಶಿಶುವಿಹಾರದ ಮೇಲೆ ಚಾಕುವಿನಿಂದ ದಾಳಿ ನಡೆಸಿದ್ದು, ಮೂವರು ಮಕ್ಕಳು ಸೇರಿದಂತೆ, 6 ಜನರನ್ನು ಹತ್ಯೆಗೈದಿದ್ದಾನೆ.

ಘಟನೆಗೆ ಕಾರಣವಾದ 25 ವರ್ಷದ ವ್ಯಕ್ತಿಯನ್ನು ಪೊಲೀಸರು ಬಂಧಿಸಿದ್ದಾರೆ. ದಾಳಿಯಲ್ಲಿ ಮೂವರು (2ನೇ ಪುಟಕ್ಕೆ)

**ಭದ್ರಾ ಜಲಾಶಯ**

ಇಂದಿನ ಮಟ್ಟ : 140 ಅಡಿ 9 ಇಂಚು
ಒಳ ಹರಿವು : 4156 ಕ್ಯೂಸೆಕ್ಸ್
ಹೊರ ಹರಿವು : 163 ಕ್ಯೂಸೆಕ್ಸ್
ಹಿಂದಿನ ವರ್ಷದ್ದು : 171.3 ಅಡಿ

## ಹರಿಹರ ನಗರಸಭಾಧ್ಯಕ್ಷರಾಗಿ ನಿಂಬಕ್ಕ, ಸಿದ್ದೇಶ್ ಉಪಾಧ್ಯಕ್ಷ



ಹರಿಹರ, ಜು. 10 - ಇಲ್ಲಿನ ನಗರಸಭೆ ಅಧ್ಯಕ್ಷರಾಗಿ ಜೆಡಿಎಸ್‌ನ ನಿಂಬಕ್ಕ ಚಂದಪೂರ್ ಮತ್ತು ಉಪಾಧ್ಯಕ್ಷರಾಗಿ ಕೆ.ಜಿ. ಸಿದ್ದೇಶ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣೆ ಅಧಿಕಾರಿಯೂ ಆಗಿರುವ ಉಪವಿಭಾಗಧಿಕಾರಿ ಶ್ರೀಮತಿ ಎನ್. ದುರ್ಗಾಶ್ರೀ ಘೋಷಿಸಿದ್ದಾರೆ.


ನಗರಸಭೆಯ 31 ಸದಸ್ಯರು, ಒಬ್ಬರು ಶಾಸಕ ಹಾಗೂ ಸಂಸದ ಮತದಾರರು ಸೇರಿದಂತೆ ಒಟ್ಟು 33 ಸದಸ್ಯರು ಮತದಾನ ಮಾಡುವುದಕ್ಕೆ ಅವಕಾಶ ಕಲ್ಪಿಸಲಾಗಿತ್ತು. ಶಾಹೀನಾಬಾನು ದಾದಾಪೀರ್ ಮತ್ತು ಎ. ವಾಮನಮೂರ್ತಿ ಅವರು ರಾಜೀನಾಮೆ ನೀಡಿದ್ದರಿಂದ ಈ ಹುದ್ದೆಗಳು ತೆರವಾಗಿದ್ದವು. 9ನೇ ವಾರ್ಡಿನ ಸದಸ್ಯರಾದ ನಿಂಬಕ್ಕ ಹಾಗೂ 8ನೇ ವಾರ್ಡಿನ ಸದಸ್ಯ ಸಿದ್ದೇಶ್ ಅವರು ಮಾತ್ರ ನಾಮಪತ್ರಗಳನ್ನು ಸಲ್ಲಿಸಿದರು. ನಂತರ ಉಪವಿಭಾಗಧಿಕಾರಿ ದುರ್ಗಾಶ್ರೀ ಅವರು ಅವಿರೋಧ ಆಯ್ಕೆಯನ್ನು ಘೋಷಣೆ ಮಾಡಿದರು.

ನಗರಸಭೆಯಲ್ಲಿ 15 ಜೆಡಿಎಸ್, 10 ಕಾಂಗ್ರೆಸ್, ನಾಲ್ವರು ಬಿಜೆಪಿ ಹಾಗೂ ಇಬ್ಬರು ಪಕ್ಷೇತರೂ ಸೇರಿ 31 ಸದಸ್ಯರಿದ್ದಾರೆ. ಸ್ಪಷ್ಟ ಬಹುಮತವಿಲ್ಲದ ಕಾರಣ ಜೆಡಿಎಸ್ ಹಾಗೂ ಕಾಂಗ್ರೆಸ್ ಅಧಿಕಾರ ಹಂಚಿಕೆ ಮಾಡಿಕೊಂಡಿವೆ.

ಈ ಬಾರಿ ಅಧ್ಯಕ್ಷ, ಉಪಾಧ್ಯಕ್ಷರ ಪದವಿಯ ಅವಧಿ ಕೂಡ ಅಕ್ಟೋಬರ್ 28 ರವರಿಗೆ ಮಾತ್ರ ಇರುತ್ತದೆ. ನಂತರ ಸರ್ಕಾರದ ಹೊಸದಾದ ಆದೇಶದ ಅನ್ವಯದಂತೆ ಅಧಿಕಾರ ಬದಲಾಗಲಿದೆ.

ಈ ಸಂದರ್ಭದಲ್ಲಿ ಪೌರಾಯುಕ್ತ ಐಗೂರು ಬಸವರಾಜ್, ನಗರಸಭೆ ಸದಸ್ಯರಾದ ಎ. ವಾಮನ ಮೂರ್ತಿ, ಗುತ್ತೂರು ಜಂಬಣ್ಣ, ರತ್ನ ಡಿ. ಉಜ್ಜೇಶ್, ಪಕ್ಕೀರಮ್ಮ, ಉಷಾ ಅಂಗಡಿ ಮಂಜುನಾಥ್, ದಿನೇಶ್ ಬಾಬು, ಪಿ.ಎನ್. ವಿರುಪಾಕ್ಷಪ್ಪ, ಶಂಕರ್ ಖಟಾವ್ಕರ್, ಆರ್.ಸಿ. ಜಾವೇದ್, ಎಂ. ಎಸ್. ಬಾಬುಲಾಲ್, ಎಸ್.ಎಂ. ವಸಂತ್, ಅಬ್ದುಲ್ ಅಲಿಂ, ವಿಜಯಕುಮಾರ್, ಅಶ್ವಿನಿ ಕೃಷ್ಣ, ಹನುಮಂತಪ್ಪ ಸುಮಿತ್ರಮ್ಮ, ನಾಗರತ್ನ, ಲಕ್ಷ್ಮಿ ಮೋಹನ್, ಷಾಯಿನಾಭಾನು, ಶಾಹೀನಾಬಾನು ದಾದಾಪೀರ್, ಅಲ್ತಾಫ್, ಖಲಂದರ್, ಮುಜಾಮಿಲ್ ಬಿಲ್, ಮುಖಂಡರಾದ ಪೂಜಾರ್ ಈರಣ್ಣ, ಜಾಕೀರ್, ಮನಸೂರ್, ಅಡಕಿ ಕುಮಾರ್, ಚೂರಿ ಜಗದೀಶ್, ಬೆಣ್ಣೆ ರೇವಣಸಿದ್ದಪ್ಪ, ಬಸವರಾಜ್, ಕೆ.ಜಿ. ರಾಜು, ನಾಗರಾಜ್ ಗೌಡ ಮತ್ತಿತರರಿದ್ದರು.

## ಮಾನದಂಡ ಆಧರಿಸಿ ಹೊಸ ತಾಲ್ಲೂಕುಗಳ ರಚನೆ



ಬೆಂಗಳೂರು, ಜು.10 - ರಾಜ್ಯದಲ್ಲಿ ಹೊಸ ತಾಲ್ಲೂಕುಗಳ ರಚನೆಗೆ ಮುಂದಿನ ದಿನಗಳಲ್ಲಿ ಸೂಕ್ತ ಮಾನದಂಡಗಳನ್ನು ರೂಪಿಸಲಾಗುವುದು ಮತ್ತು ಅವುಗಳನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡುವುದಾಗಿ ಕಂದಾಯ ಸಚಿವ ಕೃಷ್ಣ ಭೈರೈಗೌಡ ವಿಧಾನಸಭೆಯಲ್ಲಿ ತಿಳಿಸಿದ್ದಾರೆ.

ಪ್ರಶ್ನೋತ್ತರದ ವೇಳೆಯಲ್ಲಿ ಶಾಸಕ ರಘುಮೂರ್ತಿ ಅವರ ಪ್ರಶ್ನೆಗೆ ಉತ್ತರ ನೀಡಿದ ಸಚಿವರು, 2018 ರಿಂದ ಈವರೆಗೆ 63 ಹೊಸ ತಾಲ್ಲೂಕುಗಳನ್ನು ರಚಿಸಲಾಗಿದೆ ಎಂದು ಹೇಳಿದರು.

ಅವುಗಳಲ್ಲಿ ಬಹುತೇಕ ಕಡೆ ಕಟ್ಟಡಗಳಿಲ್ಲ. ಆಡಳಿತಾತ್ಮಕ ಪ್ರಕ್ರಿಯೆ ಶುರುವಾಗಿಲ್ಲ. ನಿರ್ದಿಷ್ಟ ಮಾನದಂಡಗಳನ್ನು ಅನುಸರಿಸದೇ ಹೊಸ ತಾಲ್ಲೂಕುಗಳನ್ನು ರಚಿಸಲಾಗಿದೆ ಎಂದು ಹೇಳಿದರು.

ಎಂ.ಬಿ. ಪಾಟೀಲ್ ಅವರ ಸಮಿತಿ ವೈಜ್ಞಾನಿಕ ಅಧ್ಯಯನ ವರದಿಯನ್ನು ನೀಡಿದೆ. ಮುಂದಿನ ದಿನಗಳಲ್ಲಿ ಅವುಗಳನ್ನು ಪಾಲನೆ ಮಾಡಿಯೇ ಹೊಸ ತಾಲ್ಲೂಕು ರಚಿಸಲಾಗುವುದು ಎಂದು ಹೇಳಿದರು.

## ಮೈಸೂರಿನಲ್ಲಿ ಯುವ ಬ್ರಿಗೇಡ್ ಸದಸ್ಯನ ಹತ್ಯೆ

ಮೈಸೂರು, ಜು. 10 - ಕ್ಷುಲ್ಲಕ ಕಾರಣಕ್ಕೆ 2 ಗುಂಪುಗಳ ನಡುವೆ ಗಲಾಟೆ ನಡೆದು ಯುವ ಬ್ರಿಗೇಡ್ ಸದಸ್ಯನಾಗಿದ್ದ ಯುವಕನೊಬ್ಬನ ಕೊಲೆಯಾಗಿರುವ ಘಟನೆ ಮೈಸೂರು ಜಿಲ್ಲೆಯ ಟಿ. ನರಸೀಪುರ ಪಟ್ಟಣದ ಹೊರವಲಯದಲ್ಲಿ ನಡೆದಿದೆ.

ವೇಣುಗೋಪಾಲ್ ನಾಯಕ್ (32) ಕೊಲೆಯಾದ ಯುವಕ. ಹನುಮ ಜಯಂತಿ ವೇಳೆ 2 ಗುಂಪುಗಳ ನಡುವೆ ಮಾತಿನ ಚಕಮಕಿ ಉಂಟಾಗಿತ್ತು. ಬಳಿಕ ದುಷ್ಕರ್ಮಿಗಳು ಬಾಟಲಿಯಿಂದ ಇರಿದು ವೇಣುಗೋಪಾಲ್‌ನ ಹತ್ಯೆ ನಡೆಸಿದ್ದಾರೆ. ಟಿ. ನರಸೀಪುರ ಪಟ್ಟಣದ ಶ್ರೀರಾಂಪುರ ಕಾಲೋನಿಯ ನಿವಾಸಿಯಾಗಿದ್ದ ವೇಣುಗೋಪಾಲ್, ಯುವ ಬ್ರಿಗೇಡ್‌ನ ಕಾರ್ಯಕರ್ತನಾಗಿ ಕಾರ್ಯ ನಿರ್ವಹಿಸುತ್ತಿದ್ದರು.

ಈ ಬಗ್ಗೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಇದು ಕೋಮು ಘರ್ಷಣೆಯ ಘಟನೆಯಲ್ಲ ಎಂದು ಪೊಲೀಸರು ಹೇಳಿದ್ದಾರೆ.

## ಆಶಾ ಕಾರ್ಯಕರ್ತರ ಸಂಭಾವನೆ ಹೆಚ್ಚಳ ಪ್ರಸ್ತಾಪವಿಲ್ಲ



ಬೆಂಗಳೂರು, ಜು. 10 - ಆಶಾ ಕಾರ್ಯಕರ್ತೆಯರ ಸಂಭಾವನೆ ಹೆಚ್ಚಳ ಮಾಡುವ ಪ್ರಸ್ತಾಪ ಸರ್ಕಾರದ ಮುಂದೆ ಇಲ್ಲ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ.

ವಿಧಾನ ಪರಿಷತ್ ಪ್ರಶ್ನೋತ್ತರ ಕಲಾಪದಲ್ಲಿ ಜೆ.ಡಿ.ಎಸ್.ನ ತಿಪ್ಪೇಸ್ವಾಮಿ ಪ್ರಶ್ನೆಗೆ ಸಚಿವರು ಈ ಉತ್ತರ ನೀಡಿದ್ದಾರೆ. ಆಶಾ ಕಾರ್ಯಕರ್ತೆಯರ ಸಂಭಾವನೆ ಹೆಚ್ಚಳ ಮಾಡುವ ಪ್ರಸ್ತಾಪ ಸರ್ಕಾರದ ಮುಂದೆ ಇಲ್ಲ. ರಾಜ್ಯ ಸರ್ಕಾರದಿಂದ ಈಗಾಗಲೇ 5 ಸಾವಿರ ಗೌರವ ಧನ ನೀಡಲಾಗುತ್ತಿದೆ. ಕೇಂದ್ರದಿಂದ 5-8 ಸಾವಿರ ಗೌರವ ಧನ ಸಿಗುತ್ತಿದೆ. ಒಟ್ಟಾರೆ 10-13 ಸಾವಿರ ಗೌರವ ಧನ ಸಿಗುತ್ತಿದೆ. ಸದ್ಯ ಅವರ ಗೌರವ ಧನ ಹೆಚ್ಚಳ ಸಾಧ್ಯವಿಲ್ಲ ಎಂದು ಹೇಳಿದರು.

ಆಶಾ ಕಾರ್ಯಕರ್ತೆಯರಿಗೆ ಪಿಂಚಣಿ ವ್ಯವಸ್ಥೆ ಸಾಧ್ಯವಿಲ್ಲ. ಅವರು ಸರ್ಕಾರಿ ಉದ್ಯೋಗಿಗಳು ಆಗಿದ್ದರೆ ಸಿಗುತ್ತಿತ್ತು. ಆದರೆ ನಿಯಮದ ಪ್ರಕಾರ ಅವರಿಗೆ ಪಿಂಚಣಿ ಕೊಡಲು ಸಾಧ್ಯವಿಲ್ಲ. ಆಶಾ ಕಾರ್ಯಕರ್ತೆಯರು ಗ್ಯಾರಂಟಿ ಯೋಜನೆಗೆ ಅರ್ಜಿ ಹಾಕಬಹುದು. ಸರ್ಕಾರ ಅದಕ್ಕೆ ಅವಕಾಶ ಕೊಟ್ಟಿದೆ. ಹೀಗಾಗಿ ಪರೋಕ್ಷವಾಗಿ ಅವರಿಗೆ ಅನುಕೂಲ ಆಗಿದೆ. ಸದ್ಯ ಗೌರವ ಧನ ಹೆಚ್ಚಳ ಮಾಡಲು ಸಾಧ್ಯವಿಲ್ಲ ಎಂದು ತಿಳಿಸಿದರು.

**HSRB Global Foundation (R.)**

BOSSE SIKKIM BOARD 10TH, 12TH

Last Date : 15.07.2023

UGC Recognised University
one sitting course offered

| UG | PG | Technical |
|---|---|---|
| BA / BCom | MA/M.Com | Diploma |
| BSc / BBA | MSc/MBA | B.Tech |
| BCA/B.Ed | MCA | M,Tech |

ADMISSION OPEN
CONTACT FOR DETAILS

# 650/2 Pisale Complex, 8th main, P.J. Extn., Davangere-577 002. Mobi. : 76194 56109

## ಏರುವ ಬಿಸಿಲು, ಇಳಿದ ಮಳೆ, ತಾಳಿಕೊಂಡೀತೆ ಅಡಿಕೆ ಬೆಳೆ

ಎಸ್. ಎ. ಶ್ರೀನಿವಾಸ್

ದಾವಣಗೆರೆ, ಜು. 10 - ಅಡಿಕೆಗೆ ಹೋದ ಮಾನ ಆನೆ ಕೊಟ್ಟರೂ ಬರಲ್ಲ ಎಂಬ ಮಾತಿತ್ತು. ಆದರೆ, ಆಧುನಿಕ ಕಾಲದಲ್ಲಿ ಅಡಿಕೆಗೇ ದೊಡ್ಡ ಮಾನ ದಕ್ಕಿದೆ. ಅದರಲ್ಲೂ ಮಾಜಿ ಶಾಸಕರೊಬ್ಬರು ಅಡಿಕೆ ಬೆಳೆಗಾರರ ಮನೆಯಲ್ಲಿ 2-3 ಕೋಟಿ ರೂ. ನಗದು ಇರುತ್ತದೆ ಎಂದು ಹೇಳುವ ಮೂಲಕ ಅಡಿಕೆ ಮಾನವನ್ನು ಇನ್ನೊಂದು ಹಂತಕ್ಕೆ ತಲುಪಿಸಿದ್ದೂ ಆಗಿದೆ.

ಇತ್ತೀಚಿನ ವರ್ಷಗಳಲ್ಲಿ ಅಡಿಕೆ ಬೆಳೆಯುವ ಪ್ರದೇಶ ಸಾಕಷ್ಟು ವಿಸ್ತಾರಗೊಳ್ಳುತ್ತಿದೆ. ಕಳೆದ ಕೆಲ ವರ್ಷಗಳಲ್ಲಿ ಮಳೆರಾಯ ತುಸು ಅತಿಯಾಗಿಯೇ ಕೃಪೆ ತೋರಿದ್ದ. ಹೀಗಾಗಿ ಅಡಿಕೆ ಬೆಳೆಗಾರರಿಗೆ ಅನುಕೂಲವೂ ಆಗಿತ್ತು. ಆದರೆ, ಈ ವರ್ಷ ಎಲ್ - ನೀನೋ ಕಾಣಿಸಿಕೊಂಡಿದ್ದು, ಮಳೆಯ ಮೇಲೆ ಪರಿಣಾಮ ಬೀರುತ್ತಿದೆ. ಕಳೆದ ಜೂನ್ ತಿಂಗಳು ದಕ್ಷಿಣ ಭಾರತದಲ್ಲಿ ಕಳೆದ 120 ವರ್ಷಗಳಲ್ಲೇ ಅತ್ಯಂತ ಹೆಚ್ಚಿನ ತಾಪಮಾನದ್ದಾಗಿತ್ತು ಹಾಗೂ ಕಡಿಮೆ ಮಳೆ ತಂದಿತ್ತು.

ಇದೊಂದೇ ತಿಂಗಳ ಹೊಡೆತದಿಂದ ಜಿಲ್ಲೆಯಲ್ಲಿ ಅಂತರ್ಜಲ ತೀವ್ರವಾಗಿ ಕುಸಿದಿದೆ. ಕಳೆದ ವರ್ಷ ಅಂತರ್ಜಲ ಮಟ್ಟ 5.76 ಮೀಟರ್ ಇದ್ದದ್ದು, ಈ ವರ್ಷ 9.99 ಮೀಟರ್‌ಗಳಿಗೆ ತಲುಪಿದೆ. ಜಗಳೂರಿನಲ್ಲಂತೂ ಅಂತರ್ಜಲ ಮಟ್ಟ 15.64 ಮೀಟರ್‌ವರೆಗೆ ಕುಸಿದಿದೆ.

ಎರಡರಿಂದ ಏಳು ವರ್ಷಗಳಿಗೆ ಒಮ್ಮೆ ಬರುವ ಎಲ್ - ನೀನೋ ವಾಯುಗುಣ ಚಕ್ರವಾಗಿದೆ. ಪೆಸಿಫಿಕ್ ಮಹಾಸಾಗರದಲ್ಲಿ ನೀರು ಬಿಸಿಯಾದಾಗ ಎಲ್ - ನೀನೋ ಉಂಟಾಗುತ್ತದೆ. ಇದರಿಂದ ಭಾರತದಲ್ಲಿ ಬರ ಪರಿಸ್ಥಿತಿ ಉಂಟಾಗುತ್ತದೆ. ಎಲ್ - ನೀನೋ ಸಾಮಾನ್ಯವಾಗಿ 9ರಿಂದ 12 ತಿಂಗಳ ಕಾಲ ಇರುತ್ತದೆ.

ಅಲ್ಲದೇ ತಾಪಮಾನ ಹೆಚ್ಚಳವೂ ನಿರಂತರ ಸಮಸ್ಯೆ ತರುತ್ತಿದೆ. ಈ ಎಲ್ಲದರ ನಡುವೆ ಸಾಂಪ್ರದಾಯಿಕವಾಗಿ ತಮ್ಮ ಪ್ರದೇಶದ್ದಲ್ಲದ ಬೆಳೆ, ಅದರಲ್ಲೂ ದೀರ್ಘಾವಧಿಯ ತೋಟಗಾರಿಕೆ ಬೆಳೆಗೆ ಮುಂದಾದಾಗ ಸಾಕಷ್ಟು ಎಚ್ಚರಿಕೆ ವಹಿಸುವ ಅಗತ್ಯವಿದೆ.

ಅಡಿಕೆ ಬೆಳೆ ಈಗಾಗಲೇ ಅತಿಯಾಗಿದೆ. ಬೇಳೆ ಹಾಗೂ ಖಾದ್ಯ ತೈಲಕ್ಕಾಗಿ ವಿದೇಶಗಳನ್ನು ಅವಲಂಬಿಸಿದ್ದೇವೆ. ಬೇಳೆ ಬೆಲೆ ಗಗನಕ್ಕೆ ಮುಟ್ಟಿದೆ. ಕೆಲ ತಿಂಗಳ ಹಿಂದೆ ಖಾದ್ಯ ತೈಲದ ಬೆಲೆ ದುಬಾರಿಯಾಗಿತ್ತು. ಇಂತಹ ಪರಿಸ್ಥಿತಿಯಲ್ಲಿ, ದೇಶದ ಸ್ವಾವಲಂಬನೆಗೆ ಅನುಕೂಲವಾಗುವ ಬೆಳೆ ಬೆಳೆಯದೇ, ಅಡಿಕೆ ಪ್ರದೇಶವನ್ನು ಹೆಚ್ಚಿಸುವುದು ಸರಿಯಲ್ಲ ಎಂದು ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ತೋಟಗಾರಿಕಾ ವಿಜ್ಞಾನಿ ಎಂ.ಜಿ. ಬಸವನಗೌಡ ಅಭಿಪ್ರಾಯ ಪಡುತ್ತಾರೆ.

ಮಳೆ ಕೈ ಕೊಟ್ಟ ಸಂದರ್ಭದಲ್ಲಿ ಅಡಿಕೆ ಕಾಪಾಡಿಕೊಳ್ಳುವುದು ಕಠಿಣವಾಗಲಿದೆ. ಅದರಲ್ಲೂ ಬಯಲು ಪ್ರದೇಶಗಳಲ್ಲಿ ಬಿಸಿಲು ಸಾಮಾನ್ಯಕ್ಕಿಂತ ಒಂದು ಡಿಗ್ರಿಯಷ್ಟು ಹೆಚ್ಚಾದರೂ ಅಡಿಕೆ ತಾಳದು ಎಂದವರು ಹೇಳುತ್ತಾರೆ.

ಈ ಹಿಂದೆ ಬೋರ್‌ಗಳಲ್ಲಿ ನೀರು ನಿಧಾನವಾಗಿ ಕಡಿಮೆಯಾಗುತ್ತಿತ್ತು. ಕಳೆದ ತಿಂಗಳು ಕೆಲವೆಡೆ ಬೋರ್‌ಗಳಲ್ಲಿ ಹಠಾತ್ತನೆ ನೀರು ನಿಂತಿದೆ. ಈಗ ಅಂತರ್ಜಲ ಬಳಕೆದಾರರ ಸಂಖ್ಯೆ ಅತಿಯಾಗಿರುವುದೇ, ಹಠಾತ್ ನಿಲುಗಡೆಗೆ ಕಾರಣ ಎಂದು ಬಸವನಗೌಡ ತಿಳಿಸುತ್ತಾರೆ.

ಅಡಿಕೆ ಬೆಳೆಗಾರರು ಈ ಎಲ್ಲ ಪರಿಸ್ಥಿತಿಗಳನ್ನು ಗಮನಿಸಬೇಕಿದೆ. ಒಂದು ವೇಳೆ ಅಡಿಕೆ ಬೆಳೆ ಬೆಳೆಯುವುದೇ ಆದರೆ, ಅದನ್ನು ಕಡಿಮೆ ನೀರಿಗೆ ಒಗ್ಗಿಸಿಕೊಳ್ಳಬೇಕಿದೆ. ಇದಕ್ಕೆ ಅಗತ್ಯ ಕ್ರಮಗಳಿಗಾಗಿ ತಜ್ಞ ಪರಿಣಿತರಿಂದ ಸಲಹೆಗಳನ್ನು ಪಡೆಯಬೇಕಿದೆ ಎಂದವರು ಹೇಳಿದ್ದಾರೆ.



**ಅಂತರ್ಜಲ 4.14 ಮೀಟರ್ ಇಳಿಕೆ**

**ಕಳೆದ ಜೂನ್ ತಿಂಗಳಲ್ಲಿ ಜಿಲ್ಲೆಯಲ್ಲಿ ಅಂತರ್ಜಲ ಮಟ್ಟ ಸರಾಸರಿ 4.14 ಮೀಟರ್‌ಗಳಷ್ಟು ಕುಸಿದಿದೆ. ಜೂನ್ 2022ರಲ್ಲಿ ಸರಾಸರಿ ಅಂತರ್ಜಲ ಮಟ್ಟ 5.76 ಮೀಟರ್ ಆಗಿತ್ತು, ಅದು ಈ ವರ್ಷ 9.99 ಮೀಟರ್‌ಗೆ ಇಳಿದಿದೆ.**
**ದಾವಣಗೆರೆ ತಾಲ್ಲೂಕಿನಲ್ಲಿ 5.75 ಮೀಟರ್‌ನಿಂದ 11.90 ಮೀಟರ್‌ಗೆ, ಹರಿಹರದಲ್ಲಿ 2.90 ರಿಂದ 6.69 ಮೀಟರ್‌ಗೆ, ಚನ್ನಗಿರಿಯಲ್ಲಿ 4.69 ರಿಂದ 8.63 ಮೀಟರ್‌ಗೆ, ಹೊನ್ನಾಳಿಯಲ್ಲಿ 2.66 ರಿಂದ 4.42 ಮೀಟರ್‌ಗೆ, ನ್ಯಾಮತಿಯಲ್ಲಿ 5.73 ರಿಂದ 12.67 ಮೀಟರ್ ಹಾಗೂ ಜಗಳೂರಿನಲ್ಲಿ 12.85 ರಿಂದ 15.64 ಮೀಟರ್‌ಗೆ ಇಳಿಕೆಯಾಗಿದೆ.**

**ಹರಡಿದ ಅಡಿಕೆ, ಕುಸಿದ ಬಾಳೆ**

**2011-12ರ ವರ್ಷದಲ್ಲಿ ಜಿಲ್ಲೆಯಲ್ಲಿ 3,201 ಹೆಕ್ಟೇರ್ ಪ್ರದೇಶದಲ್ಲಿ ಬಾಳೆ, 3,286 ಹೆಕ್ಟೇರ್ ಪ್ರದೇಶದಲ್ಲಿ ಮಾವು ಹಾಗೂ 30,022 ಹೆಕ್ಟೇರ್ ಪ್ರದೇಶದಲ್ಲಿ ಅಡಿಕೆ ಬೆಳೆಯಲಾಗುತ್ತಿತ್ತು. 2021-22ರ ವೇಳೆಗೆ ಮಾವು ಬೆಳೆಯುವ ಪ್ರದೇಶ 1,283 ಹೆಕ್ಟೇರ್, ಬಾಳೆ 1,175 ಹೆಕ್ಟೇರ್‌ಗೆ ಕುಸಿತ ಕಂಡಿದೆ. ಇದೇ ವೇಳೆ ಅಡಿಕೆ ಬೆಳೆ ವಿಸ್ತೀರ್ಣ 76,796 ಹೆಕ್ಟೇರ್‌ಗಳಿಗೆ ಹರಡಿದೆ.**

**ನಿಟ್ಟೂರು ಗ್ರಾಮದ ಹುರುಳಿ ಹನುಮಂತಪ್ಪ ನಿಧನ**




ಹರಿಹರ ತಾಲ್ಲೂಕು ನಿಟ್ಟೂರು ಗ್ರಾಮದ ಕಾಂಗ್ರೆಸ್ ಮುಖಂಡರೂ, ಸರ್ಕಾರಿ ಪ್ರೌಢಶಾಲೆಯ ಎಸ್‌ಡಿಎಂಸಿ ಹಾಲಿ ಅಧ್ಯಕ್ಷರೂ ಹಾಗೂ ಕುಂಬಳೂರು ಗ್ರಾ.ಪಂ. ಮಾಜಿ ಉಪಾಧ್ಯಕ್ಷರೂ ಆದ

**ಶ್ರೀ ಹುರುಳಿ ಹನುಮಂತಪ್ಪ**

(71 ವರ್ಷ) ಅವರು ದಿನಾಂಕ 10-07-2023ರ ಸೋಮವಾರ ರಾತ್ರಿ 9.30ಕ್ಕೆ ಹೃದಯಾಘಾತದಿಂದ ನಿಧನರಾದರು. ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 11-07-2023ರ ಮಂಗಳವಾರ ಮಧ್ಯಾಹ್ನ 1 ಗಂಟೆಗೆ ನಿಟ್ಟೂರಿನಲ್ಲಿ ನೆರವೇರಿಸಲಾಗುವುದು.

ದುಃಖತಪ್ತರು :
ಹುರುಳಿ ವಂಶಸ್ಥರು ಹಾಗೂ ಬಂಧು-ಮಿತ್ರರು.
ನಿಟ್ಟೂರು, ಹರಿಹರ ತಾಲ್ಲೂಕು.

## ಭರಮಸಾಗರ ಸಾಯಿ ಮಂದಿರದಲ್ಲಿ ಗುರು ಪೂರ್ಣಿಮೆ ಆಚರಣೆ



ಭರಮಸಾಗರ, ಜು. 10- ಸ್ಥಳೀಯ ಬಿಳಿಚೋಡು ರಸ್ತೆಯಲ್ಲಿರುವ ಶ್ರೀ ಶಿರಡಿ ಸಾಯಿಬಾಬಾ ಮಂದಿರದಲ್ಲಿ ಗುರು ಪೂರ್ಣಿಮೆಯನ್ನು ವಿಶೇಷವಾಗಿ ಆಚರಿಸಲಾಯಿತು. ಮಾನಿಹಳ್ಳಿ ಪುರವರ್ಗ ಮಠದ ಶ್ರೀ ಮಳೆಯೋಗೀಶ್ವರ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ಎಸ್ ಎಂ ಎಲ್ ಮನೆಯವರು, ನಾಗರತ್ನ, ಗುರುಮೂರ್ತಿ, ಬಿ.ಸಿ. ಪಾಟೀಲ್, ನಂದಿಹಳ್ಳಿ ತಿಪ್ಪೇಸ್ವಾಮಿ, ನಟರಾಜ, ಸಾಯಿ ದೀಪ, ರೇಣುಕಮ್ಮ ಮತ್ತಿತರರಿದ್ದರು. ಸಾಯಿ ಮಂದಿರದ ವ್ಯವಸ್ಥಾಪಕ ಚಂದ್ರಶೇಖರ್ ಅವರು ಕಾರ್ಯಕ್ರಮದ ನೇತೃತ್ವ ವಹಿಸಿದ್ದರು.

## ಕ್ಯಾಂಪಸ್‌ನಲ್ಲಿ ಡಾ. ಸಿ.ವಿ ರಾಮನ್ ಕಾಲೇಜ್ ವಿದ್ಯಾರ್ಥಿಗಳ ಆಯ್ಕೆ

ದಾವಣಗೆರೆ, ಜು.10- ನಗರದ ಡಾ. ಸಿ.ವಿ. ರಾಮನ್ ಕಾಲೇಜ್ ಆಫ್ ಅಡ್ಮಿನಿಸ್ಟ್ರೇಷನ್ ಅಂಡ್ ನೆಟ್‌ವರ್ಕ್ ಸೈನ್ಸಸ್ ಕಾಲೇಜಿನಲ್ಲಿ ಕ್ಯಾಂಪಸ್ ಸೆಲೆಕ್ಷನ್ ಹಮ್ಮಿಕೊಳ್ಳಲಾಗಿತ್ತು. ಅನೇಕ ಪ್ರವೇಶ ಪರೀಕ್ಷೆಗಳ ನಂತರ ಬಿಕಾಂ, ಬಿಸಿಎ, ಸಾಫ್ಟ್‌ವೇರ್ ಡೆವಲಪರ್ಸ್ ವಿಭಾಗದಿಂದ ಒಟ್ಟು 15 ವಿದ್ಯಾರ್ಥಿಗಳು ಟೆಕ್ ಮಹಿಂದ್ರಾ ಅಂಡ್ ಆಸ್ಪಿರ್ ಐಟಿ ಸಲ್ಯೂಶನ್ಸ್ ಕಂಪನಿಗೆ ಆಯ್ಕೆಯಾಗಿರುತ್ತಾರೆ. ಕಾಲೇಜಿನ ಪ್ರಾಂಶುಪಾಲರು, ಆಡಳಿತ ಮಂಡಳಿ ಮತ್ತು ಬೋಧಕ ವರ್ಗ ಅಭಿನಂದಿಸಿದೆ.

## ಕೃಷಿ ಪಂಡಿತ ಪ್ರಶಸ್ತಿ ಹಾಗೂ ಶ್ರೇಷ್ಠ ಕೃಷಿಕ ಪ್ರಶಸ್ತಿಗೆ ಅರ್ಜಿ

ದಾವಣಗೆರೆ, ಜು.10- 2023-24ನೇ ಸಾಲಿನ ಕೃಷಿ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಜಿಲ್ಲೆಯ ಆಸಕ್ತ ರೈತರಿಂದ ರಾಜ್ಯ ಮಟ್ಟದ 'ಕೃಷಿ ಪಂಡಿತ ಪ್ರಶಸ್ತಿ'ಗೆ ಹಾಗೂ ತಾಲ್ಲೂಕು ಮಟ್ಟ, ಜಿಲ್ಲಾ ಮಟ್ಟದ 'ಶ್ರೇಷ್ಠ ಕೃಷಿಕ' ಪ್ರಶಸ್ತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಕೃಷಿ ಪಂಡಿತ ಪ್ರಶಸ್ತಿಗೆ ಅರ್ಜಿ ಸಲ್ಲಿಸುವ ರೈತರು ಕೃಷಿಯಲ್ಲಿ ಸಮಗ್ರ ಕೃಷಿ ಪದ್ಧತಿ, ಬೆಳೆ ಪದ್ಧತಿಗಳು ಮತ್ತು ಬೆಳೆ ವೈವಿಧ್ಯೀಕರಣ, ಸಾವಯವ ಕೃಷಿ, ಕೃಷಿ ಯಂತ್ರೋಪಕರಣ ಅಭಿವೃದ್ಧಿ, ನೀರಿನ ಸಮರ್ಥ ಬಳಕೆ, ಇನ್ನಿತರೆ ಯಾವುದಾದರು ಕೃಷಿ ಕ್ಷೇತ್ರದಲ್ಲಿ ಸಾಧನೆ ಮಾಡಿರಬೇಕು.

ರೈತ ಮಹಿಳೆಯರಿಂದ ಪ್ರತ್ಯೇಕವಾಗಿ ಹಾಗೂ ಆತ್ಮ ಯೋಜನೆಯಡಿ ಕೃಷಿಯಲ್ಲಿ ಸಮಗ್ರ ಬೆಳೆ ಪದ್ಧತಿ, ಸಮಗ್ರ ನೀರು ನಿರ್ವಹಣೆ, ಸಾವಯವ ಕೃಷಿ, ವೈಜ್ಞಾನಿಕ ಯಂತ್ರೋಪಕರಣಗಳ ಬಳಕೆ, ತೋಟಗಾರಿಕೆ, ಹೈನುಗಾರಿಕೆ, ಕೋಳಿ ಸಾಕಾಣಿಕೆ, ಮೀನುಗಾರಿಕೆ, ರೇಷ್ಮೆಬೇಸಾಯ, ಹೈಟೆಕ್ ಹಸಿರು ಮನೆ ಅಳವಡಿಕೆ, ಕೃಷಿ ಸಂಸ್ಕರಣೆ, ಅರಣ್ಯ ಕೃಷಿ, ಆಡು, ಕುರಿ, ಮೊಲ ಸಾಕಾಣಿಕೆ ಚಟುವಟಿಕೆಯಲ್ಲಿ ಸಾಧನೆ ಮಾಡಿದವರು ತಾಲ್ಲೂಕು ಮಟ್ಟ, ಜಿಲ್ಲಾ ಮಟ್ಟದ ಶ್ರೇಷ್ಠ ಕೃಷಿಕ ಪ್ರಶಸ್ತಿಗೆ ಮತ್ತು ಜಿಲ್ಲಾ ಮಟ್ಟದ ಆಸಕ್ತ ಗುಂಪು ಪ್ರಶಸ್ತಿಗೆ ಅರ್ಹರಾಗಿರುತ್ತಾರೆ.

ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರ ಕಛೇರಿಗೆ ಸಲ್ಲಿಸಲು ಜುಲೈ 24 ಕೊನೆಯ ದಿನಾಂಕವಾಗಿದೆ.

ಹೆಚ್ಚಿನ ಮಾಹಿತಿಗಾಗಿ ದಾವಣಗೆರೆ ಜಿಲ್ಲೆಯ ಎಲ್ಲಾ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರು ಹಾಗೂ ರೈತ ಸಂಪರ್ಕ ಕೇಂದ್ರದ ಅಧಿಕಾರಿಗಳನ್ನು ಕಛೇರಿಯ ವೇಳೆಯಲ್ಲಿ ಸಂಪರ್ಕಿಸಿ, ಮಾಹಿತಿ ಪಡೆಯಬಹುದೆಂದು ಜಂಟಿ ಕೃಷಿ ನಿರ್ದೇಶಕರು ಹಾಗೂ ಯೋಜನಾ ನಿರ್ದೇಶಕರು ತಿಳಿಸಿದ್ದಾರೆ.

# ದುಸ್ಥಿತಿಯಲ್ಲಿರುವ ಕೊಠಡಿಗಳಿಂದ ಶಿಕ್ಷಣಕ್ಕೆ ಅಡ್ಡಿ

### ತಹಶೀಲ್ದಾರ್‌ಗೆ ಹೊನ್ನಾಳಿ ತಾಲ್ಲೂಕು ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಸಮನ್ವಯ ವೇದಿಕೆ ಮನವಿ



ಹೊನ್ನಾಳಿ, ಜು.10- ತಾಲ್ಲೂಕಿನ ಮಾದಾಪುರ ಸರ್ಕಾರಿ ಶಾಲೆಯಲ್ಲಿ ಕೊಠಡಿ ಇಲ್ಲದೇ ದೇವಸ್ಥಾನ ಉಗ್ರಾಣಗಳಲ್ಲಿ ಪಾಠ ಪ್ರವಚನ ಮಾಡುತ್ತಿದ್ದು, ಇದೇ ರೀತಿ ಅನೇಕ ಶಾಲೆಗಳು ದುಸ್ಥಿತಿಯಲ್ಲಿದ್ದು, ಮಕ್ಕಳ ಶಿಕ್ಷಣಕ್ಕೆ ತೊಂದರೆಯಾಗುತ್ತಿದೆ ಎಂದು ಹೊನ್ನಾಳಿ ತಾಲ್ಲೂಕು ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಸಮನ್ವಯ ವೇದಿಕೆ ಅಧ್ಯಕ್ಷ ಎ.ಎಸ್. ಶಿವಲಿಂಗಪ್ಪ ಹುಣಸಘಟ್ಟ ಹೇಳಿದರು.

ಅವರು ಸೋಮವಾರ ತಾಲ್ಲೂಕಿನ ಸರ್ಕಾರಿ ಶಾಲೆಗಳ ದುಸ್ಥಿತಿ ಹಾಗೂ ಕೆಲವಾರು ಶಿಕ್ಷಕರ ಕರ್ತವ್ಯದ ನಿರ್ಲಕ್ಷ್ಯತನದಿಂದಾಗಿ ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣ ಪಡೆಯುತ್ತಿರುವ ಬಡ ಮಕ್ಕಳ ವಿದ್ಯಾಭ್ಯಾಸಕ್ಕೆ ಸಾಕಷ್ಟು ತೊಂದರೆಯಾಗುತ್ತಿದೆ. ತಾಲ್ಲೂಕು ಆಡಳಿತ, ಶಿಕ್ಷಣ ಇಲಾಖೆ ಸೇರಿ ಇಲಾಖೆಯಲ್ಲಿನ ಅವ್ಯವಸ್ಥೆಗಳನ್ನು ಸರಿಪಡಿಸಬೇಕು ಎಂದು ಆಗ್ರಹಿಸಿ ತಹಶೀಲ್ದಾರ್ ತಿರುಪತಿ ಪಾಟೀಲ್ ಅವರಿಗೆ ಮನವಿ ಸಲ್ಲಿಸಿ ಮಾತನಾಡಿದರು.

ಪ್ರಸ್ತುತ ಮಳೆಗಾಲವಾದ್ದರಿಂದ ಅನೇಕ ಶಾಲಾ ಕಟ್ಟಡಗಳು ಸೋರುತ್ತಿದ್ದು, ಮಕ್ಕಳ ಪಾಠ, ಪ್ರವಚನಗಳಿಗೆ ಸಾಕಷ್ಟು ತೊಂದರೆಯಾಗುತ್ತಿದೆ. ಈ ರೀತಿ ದುಸ್ಥಿತಿಯಲ್ಲಿರುವ ಶಾಲೆಗಳ ಕೊಠಡಿಗಳನ್ನು ಕೂಡಲೇ ದುರಸ್ತಿ ಮಾಡಬೇಕು. ಅನೇಕ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಕೂಡ ಇದೆ, ಅತಿಥಿ ಶಿಕ್ಷಕರನ್ನು ಕೂಡಲೇ ನೇಮಕಮಾಡಿಕೊಳ್ಳಬೇಕು ಎಂದು ಅವರು ಹೇಳದರು.

ತಾಲ್ಲೂಕಿನ ಅನೇಕ ಶಾಲೆಗಳಲ್ಲಿ ಶಿಕ್ಷಕರು 10 ರಿಂದ 20 ವರ್ಷಗಳಿಂದ ಒಂದೇ ಕಡೆ ಶಾಲೆಗಳಲ್ಲಿ ಕೆಲಸ ಮಾಡುತ್ತಿದ್ದು ಇವರುಗಳು ಸ್ಥಳೀಯವಾಗಿ ಪ್ರಭಾವಿತರಾಗಿ ಸಮಯಕ್ಕೆ ಸರಿಯಾಗಿ ಶಾಲೆಗಳಿಗೆ ಹಾಜರಾಗದೇ ಕೆಲ ಶಿಕ್ಷಕರಂತೂ ಸದಾ ಬಿ.ಇ.ಓ. ಕಚೇರಿಯಲ್ಲಿಯೇ ತಿರುಗಾಡುತ್ತಾ ಕಾಲಹರಣ ಮಾಡುತ್ತಿದ್ದಾರೆ. ಇದರಿಂದ ಮಕ್ಕಳು ಪಾಠಗಳಿಂದ ವಂಚಿತರಾಗುತ್ತಿದ್ದಾರೆ. ಇವರನ್ನು ಕೇಳುವವರೇ ಇಲ್ಲದಂತಾಗಿದ್ದು, ಇಂತಹ ಶಿಕ್ಷಕರನ್ನು ಗುರುತಿಸಿ, ಮುಲಾಜಿಲ್ಲದೇ ಅಧಿಕಾರಿಗಳು ಕ್ರಮ ಜರುಗಿಸುವ ಕೆಲಸ ಮಾಡಬೇಕು ಎಂದು ಒತ್ತಾಯಿಸಿದರು.

ಸರ್ಕಾರ ಶಿಕ್ಷಕರಿಗೆ ಸಂಬಳ ಕೊಡುತ್ತಿರುವುದು ಮಕ್ಕಳಿಗೆ ಪಾಠ ಕಲಿಸಲು, ಆದರೆ ಕೆಲವಾರು ಶಿಕ್ಷಕರು ತಮ್ಮ ಕರ್ತವ್ಯವನ್ನು ಮರೆತು ಬೇರೆ ಬೇರೆ ಉಪಕಸುಬುಗಳಲ್ಲಿ ತೊಡಗಿಸಿಕೊಂಡಿದ್ದಾರೆ. ತಾಲ್ಲೂಕು ಸಮಿತಿಯವರು ಶಿಕ್ಷಣ ಸಚಿವರಿಗೆ ಹಾಗೂ ಶಿಕ್ಷಣ ಇಲಾಖೆಯ ಮೇಲಾಧಿಕಾರಿಗಳಿಗೆ ಇಂತಹ ಶಿಕ್ಷಕರ ವಿರುದ್ಧ ಕ್ರಮ ಜರುಗಿಸಲು ಮನವಿ ಕೂಡಲು ತೀರ್ಮಾನಿಸಿದೆ. ಇದರ ಜೊತೆಗೆ 10 ರಿಂದ 20 ವರ್ಷ ಒಂದೇ ಕಡೆ ಒಂದೇ ಶಾಲೆಯಲ್ಲಿ ಠಿಕಾಣಿ ಹೂಡಿರುವ ಶಿಕ್ಷಕರ ಪಟ್ಟಿ ಮಾಡಿ, ಇಂತಹ ಶಿಕ್ಷಕರನ್ನು ಕೂಡಲೇ ಬೇರೆ ಕಡೆಗೆ ವರ್ಗಾವಣೆ ಮಾಡಬೇಕು ಎಂದು ಅವರು ಒತ್ತಾಯಿಸಿದರು.

ಎಸ್.ಡಿ.ಎಂ.ಸಿ. ಸಮನ್ವಯ ವೇದಿಕೆಗೆ ತಾಲ್ಲೂಕು ಕಾರ್ಯದರ್ಶಿ ಕೆ.ಬಿ. ಸತೀಶ್ ಬನ್ನಿಕೋಡು, ಎ.ಕೆ. ರಮೇಶ್, ಎಸ್.ಇ. ಅರ್ಚನಾ, ನ್ಯಾಮತಿ ತಾಲ್ಲೂಕು ಅಧ್ಯಕ್ಷ ಬಿ.ವಿ. ರಾಜಶೇಖರ, ಎಲ್. ರುದ್ರಾನಾಯ್ಕ, ಸಂಘಟನಾ ಕಾರ್ಯದರ್ಶಿ ರಮೇಶ್, ರಂಜಿತ ಸೇರಿದಂತೆ ಅವಳಿ ತಾಲ್ಲೂಕುಗಳ ಪದಾಧಿಕಾರಿಗಳು ಇದ್ದರು.

## ಎಲ್ಲರಲ್ಲೂ ದಾನದ ಗುಣಗಳು ಇರುವುದಿಲ್ಲ



### ಚೌಡಯ್ಯದಾನಾಪುರ : ಲೇಖನಿ ಸಾಮಗ್ರಿ ವಿತರಣಾ ಕಾರ್ಯಕ್ರಮದಲ್ಲಿ ಎಸ್‌ಡಿಎಂಸಿ ಅಧ್ಯಕ್ಷ ಜಿ.ವಿ.ದೀಪಾವಳಿ

ರಾಣೇಬೆನ್ನೂರು, ಜು.10- ಯಾರು ದಾನ, ಧರ್ಮ ಮಾಡುವಂತಹ ಗುಣಗಳನ್ನು ಬೆಳೆಸಿಕೊಂಡು ಮತ್ತೊಬ್ಬರಿಗೆ ದಾನ ಧರ್ಮ ಸಹಾಯ ಮಾಡುತ್ತಾರೋ ಅಂತವರು ಸಮಾಜದಲ್ಲಿ ಆದರ್ಶರಾಗಿರಲು ಸಾಧ್ಯ ಎಂದು ಎಸ್‌ಡಿಎಂಸಿ ಅಧ್ಯಕ್ಷ ಜಿ.ವಿ.ದೀಪಾವಳಿ ಹೇಳಿದರು.

ತಾಲ್ಲೂಕಿನ ಚೌಡಯ್ಯದಾನಾಪುರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಒಂದನೇ ತರಗತಿ ಮಕ್ಕಳಿಗೆ ಆಹಾರ ಇಲಾಖೆಯ ನಿವೃತ್ತ ವ್ಯವಸ್ಥಾಪಕ ಎಸ್. ಎಂ. ಪಂಚಾಕ್ಷರಿ ಅವರು ಉಚಿತವಾಗಿ ಕೊಡಲ್ಪಟ್ಟ ಲೇಖನಿ ಸಾಮಗ್ರಿಗಳನ್ನು ವಿತರಿಸಿ ಅವರು ಮಾತನಾಡಿದರು.

ಶ್ರೀಮಂತಿಕೆ ಎಂಬುದು ಹಲವರಲ್ಲಿ ಇರುತ್ತದೆ. ಆದರೆ ದಾನ ಧರ್ಮದಂತಹ ಗುಣಗಳು ಕಂಡು ಬರುವುದು ತುಂಬಾ ಕಡಿಮೆ, ಪಂಚಾಕ್ಷರಿ ಅವರು ಮಕ್ಕಳಿಗೆ ಉಚಿತವಾಗಿ ಲೇಖನಿ ಸಾಮಗ್ರಿಗಳನ್ನು ನೀಡಿರುವುದು ಅವರ ವಿಶಾಲ ಹೃದಯದ, ದಾನ ಧರ್ಮ ಮಾಡುವಂತಹ ಶ್ರೀಮಂತಿಕೆ ಸಮಾಜಕ್ಕೆ ಮಾದರಿಯಾಗಿದೆ ಎಂದರು.

ಮುಖ್ಯ ಶಿಕ್ಷಕ ಐ.ಹೆಚ್.ಮೈದೂರ ಮಾತನಾಡಿ, ಪಂಚಾಕ್ಷರಿ ಅವರು ಪ್ರತೀ ವರ್ಷವೂ ಸಹ ತಾಲ್ಲೂಕಿನ ಸರ್ಕಾರಿ ಶಾಲೆಯ ಮಕ್ಕಳಿಗೆ ಉಚಿತ ಲೇಖನ ಸಾಮಗ್ರಿಗಳನ್ನು ನೀಡುತ್ತಿರುವುದು ನಿಜಕ್ಕೂ ಶ್ಲಾಘನೀಯವಾಗಿದೆ. ಇಂತಹ ದಾನ ಧರ್ಮದಂತಹ ಆದರ್ಶ ಗುಣಗಳು ಸರ್ವರಲ್ಲೂ ಮೂಡಬೇಕು ಅಂದಾಗ ಸಮಾಜಕ್ಕೆ ಅಪಾರವಾದ ಕೊಡುಗೆ ನೀಡಿದಂತಾಗುತ್ತದೆ ಎಂದರು.

ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ವಿಜಯ ಕುಮಾರ ಪೂಜಾರ, ಸಹ ಶಿಕ್ಷಕರಾದ ರವಿ ಪಾಟೀಲ, ಸೈಯದ್ ಜುಲ್ಫೀಕರ್, ಎಸ್. ಎಸ್. ಮುಳಗುಂದ, ಪ್ರವೀಣ ಬನ್ನಿಮಟ್ಟಿ, ಹೊನ್ನಪ್ಪ ನುಗ್ಗಿಮರದ ಸೇರಿದಂತೆ ಎಸ್‌ಡಿಎಂಸಿಯ ಸದಸ್ಯರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

## ಹರಿಹರ ತಾ. ಕನ್ನಡ ಜಾಗೃತ ವೇದಿಕೆ ಅಧ್ಯಕ್ಷರಾಗಿ ನಾಗರಾಜ್



ಹರಿಹರ, ಜು.10- ತಾಲ್ಲೂಕು ಕನ್ನಡ ಜಾಗೃತ ವೇದಿಕೆಗೆ ತಾಲ್ಲೂಕು ಅಧ್ಯಕ್ಷರಾಗಿ ನಾಗರಾಜ ಎಂ. ಅವರನ್ನು ರಾಜ್ಯಾಧ್ಯಕ್ಷ ಮಂಜುನಾಥ್ ದೇವ ಅವರು ನೇಮಕ ಮಾಡಿದರು. ಈ ಸಂದರ್ಭದಲ್ಲಿ ರಾಜ್ಯ ಸಂಘಟನಾ ಕಾರ್ಯದರ್ಶಿ ಕವಿತಾ, ದಾವಣಗೆರೆ ಜಿಲ್ಲಾಧ್ಯಕ್ಷ ಪವನ್, ಉಪಾಧ್ಯಕ್ಷ ಗೋಪಿನಾಥ್ ಮತ್ತಿತರರು ಉಪಸ್ಥಿತರಿದ್ದರು.

## 'ಧನ ಭಾಗ್ಯ'...

(1ನೇ ಪುಟದಿಂದ) ಅಂಥವರಿಗೆ ಇಂದಿನಿಂದಲೇ ನಿಗದಿಪಡಿಸಿದ ಹಣ ಸಂದಾಯವಾಗಲಿದೆ. ಇತರರು ಬ್ಯಾಂಕ್ ಖಾತೆ ಮಾಹಿತಿ ನೀಡಿ ಜೋಡಿಸಿದ ಬಳಿಕ ಅಂಥವರಿಗೂ ಹಣ ಸಂದಾಯ ಮಾಡಲಾಗುವುದು ಎಂದರು.

ಕಳೆದ ಮೂರು ತಿಂಗಳು ಸತತವಾಗಿ ಯಾರು ಈ ಯೋಜನೆಯಡಿ ಅಕ್ಕಿ ಪಡೆದಿಲ್ಲವೋ ಅಂತಹವರ ಬಗ್ಗೆ ಪರಿಶೀಲನೆ ನಡೆಸಿ ಯೋಜನೆ ಮುಂದುವರೆಸಲಾಗುವುದು ಎಂದು ಹೇಳಿದರು.

## ಚರ್ಮದ ವಸ್ತುಗಳ ಮಾರಾಟ

ದಾವಣಗೆರೆ, ಜು.10- ಲಿಡ್‌ಕರ್ ಮಾರಾಟ ಮಳಿಗೆಯಲ್ಲಿ ಅಪ್ಪಟ ಚರ್ಮದ ಪಾದರಕ್ಷೆ, ಶೂ, ಬೆಲ್ಟ್, ಪರ್ಸ್, ಮಹಿಳೆಯರ ವ್ಯಾನಿಟಿ ಬ್ಯಾಗ್‌ಗಳು, ಶಾಲಾ ಮಕ್ಕಳ ಶೂ, ಬ್ಯಾಗ್‌ಗಳು ಮತ್ತು ಸಾಕ್ಸ್‌ಗಳು ನವೀನ ಮಾದರಿಯಲ್ಲಿ ಲಭ್ಯವಿರುತ್ತವೆ.

## ಹೊನ್ನಾಳಿ : ಶ್ರೀ ಸದ್ಗುರು ಶಿವಯೋಗಿ ಹಾಲಸ್ವಾಮೀಜಿ ಪುಣ್ಯಾರಾಧನೆ



ಹೊನ್ನಾಳಿ, ಜು.10- ತಾಲ್ಲೂಕಿನ ಸಾಸ್ವೇಹಳ್ಳಿ ಹೋಬಳಿ ವ್ಯಾಪ್ತಿಯ ರಾಂಪುರ ಕ್ಷೇತ್ರದ ಶ್ರೀ ಸದ್ಗುರು ಶಿವಯೋಗಿ ಹಾಲಸ್ವಾಮೀಜಿ ಪೀಠದ ಲಿಂಗೈಕ ವಿಶ್ವೇಶ್ವರ ಶಿವಾಚಾರ್ಯ ಹಾಲಸ್ವಾಮೀಜಿಯವರ ಮೂರನೇ ವರ್ಷದ ಪುಣ್ಯಾರಾಧನೆ ಗ್ರಾಮದ ಕಲ್ಮಠದ ಜೀವೈಕ್ಯ ಕರ್ತೃಗದ್ದುಗೆಯ ಆವರಣದಲ್ಲಿ ನಿನ್ನೆ ನಡೆಯಿತು.

ಶ್ರೀ ಸದ್ಗುರು ಶಿವಯೋಗಿ ಹಾಲಸ್ವಾಮೀಜಿ ಪೀಠದ ಲಿಂ. ವಿಶ್ವೇಶ್ವರ ಶಿವಾಚಾರ್ಯ ಹಾಲಸ್ವಾಮೀಜಿಯವರ ಮೂರನೇ ವರ್ಷದ ಪುಣ್ಯಾರಾಧನೆಯ ಅಂಗವಾಗಿ ಬೆಳಿಗ್ಗೆ ಗಂಗಾ ಪೂಜೆ, ಶ್ರೀ ಗಣಪತಿ, ಪುಣ್ಯಾಹ, ಗುರುಕಲಶದ ಪೂಜಾ, ಶ್ರೀ ಸದ್ಗುರು ಶಿವಯೋಗಿ ಹಾಲಸ್ವಾಮೀಜಿಯವರ ಹಾಗೂ ಲಿಂಗೈಕ ವಿಶ್ವೇಶ್ವರ ಶಿವಾಚಾರ್ಯ ಹಾಲಸ್ವಾಮೀಜಿಯವರ ಕರ್ತೃಗದ್ದುಗೆಗಳಿಗೆ ಅಭಿಷೇಕ ಸೇರಿದಂತೆ ವಿವಿಧ ದಾರ್ಮಿಕ ಪೂಜಾ ಕೈಂಕರ್ಯಗಳ ವಿಶೇಷ ಪೂಜಾ ಅಲಂಕಾರ ಮತ್ತು ವಿಶೇಷ ಧಾರ್ಮಿಕ ಪೂಜೆ ಸಲ್ಲಿಸಿದರು. ಪೂಜೆಯ ಬಳಿಕ ಅಲಂಕೃತ ಟ್ರ್ಯಾಕ್ಟರ್‌ನಲ್ಲಿ ಲಿಂಗೈಕ ಶ್ರೀ ವಿಶ್ವೇಶ್ವರ ಶಿವಾಚಾರ್ಯ ಹಾಲಸ್ವಾಮೀಜಿಯವರ ಭಾವಚಿತ್ರವನ್ನು ಗ್ರಾಮದ ಪ್ರಮುಖ ಬೀದಿಗಳಲ್ಲಿ ಚಂಡೆ ವಾದ್ಯದ ಮೇಳದೊಂದಿಗೆ ಮೆರವಣಿಗೆ ನಡೆಯಿತು.

## ನಗರದಲ್ಲಿ ಇಂದು ವಿಶ್ವ ಜನಸಂಖ್ಯಾ ದಿನಾಚರಣೆ

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ತಾಲ್ಲೂಕು ಆರೋಗ್ಯ ಅಧಿಕಾರಿಗಳ ಕಚೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಇಂದು ಬೆಳಿಗ್ಗೆ 10 ಕ್ಕೆ ಕುವೆಂಪು ಕನ್ನಡ ಭವನದಲ್ಲಿ ವಿಶ್ವ ಜನಸಂಖ್ಯಾ ದಿನಾಚರಣೆ-2023ರ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಉದ್ಘಾಟಿಸುವರು. ಶಾಸಕ ಶಾಮನೂರು ಶಿವಶಂಕರಪ್ಪ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಸಂಸದ ಜಿ.ಎಂ ಸಿದ್ದೇಶ್ವರ, ಶಾಸಕ ಕೆ.ಎಸ್ ಬಸವಂತಪ್ಪ, ಪಾಲಿಕೆ ಮಹಾಪೌರ ವಿನಾಯಕ ಪೈಲ್ವಾನ್, ಜಿ.ಪಂ ಮುಖ್ಯಕಾರ್ಯನಿರ್ವಹಣಾಧಿಕಾರಿ ಸುರೇಶ್ ಬಿ. ಇಟ್ನಾಳ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ನಾಗರಾಜ್, ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ ಡಾ.ರೇಣುಕಾರಾಧ್ಯ ಭಾಗವಹಿಸುವರು.

ಆಜಾದಿ ಕಾ ಅಮೃತ್ ಮಹೋತ್ಸವದ ಅಂಗವಾಗಿ ಕುಟುಂಬ ಯೋಜನೆಯನ್ನು ಅಳವಡಿಸಿಕೊಂಡು, ಸಂತೋಷ ಮತ್ತು ಸಮೃದ್ದಿಯ ಜೀವನವನ್ನು ಆಯ್ಕೆ ಮಾಡಿಕೊಳ್ಳುತ್ತೇವೆಂದು ಪ್ರತಿಜ್ಞೆ ಮಾಡೋಣ ಎಂಬ ಘೋಷ ವಾಕ್ಯದೊಂದಿಗೆ ಜಾಥಾ ಕಾರ್ಯಕ್ರಮ ಇರುತ್ತದೆ. ಜಾಥಾಗೆ ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಚಾಲನೆ ನೀಡುವರು. ಜಾಥಾ ಬೆಳಿಗ್ಗೆ 9 ಗಂಟೆಗೆ ನಗರದ ತರಳಬಾಳು ಬಿ.ಇಡಿ ಕಾಲೇಜುನಿಂದ ಹೊರಡಲಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ರೇಣುಕಾರಾಧ್ಯ ತಿಳಿಸಿದ್ದಾರೆ.

## ಏಕರೂಪ ನಾಗರಿಕ ಸಂಹಿತೆ ಚರ್ಚೆ ಕೈಬಿಡಲು ಒತ್ತಾಯಿಸಿ ಮನವಿ

ದಾವಣಗೆರೆ, ಜು.10- ಏಕರೂಪ ನಾಗರಿಕ ಸಂಹಿತೆಯ ಚರ್ಚೆಯ ವಿಚಾರವನ್ನು ಕಾನೂನು ಆಯೋಗವು ಕೈಬಿಡುವಂತೆ ಆದೇಶಿಸಲು ಒತ್ತಾಯಿಸಿ ಮುಸ್ಲಿಂ ಒಕ್ಕೂಟದ ಸದಸ್ಯರು ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್ ಮೂಲಕ ರಾಷ್ಟ್ರಪತಿಯವರಿಗೆ ಮನವಿ ಸಲ್ಲಿಸಿದರು.

ಇದೇ ವೇಳೆ ಮುಸ್ಲಿಂ ಒಕ್ಕೂಟದ ಸಂಚಾಲಕ ನಜೀರ್ ಅಹಮದ್ ಮಾತನಾಡಿ, ಏಕರೂಪ ನಾಗರಿಕ ಸಂಹಿತೆ ಭಾರತದ ನಾಗರಿಕರಿಗೆ ನೀಡಿರುವ ಮೂಲಭೂತ ಹಕ್ಕನ್ನು ಮೊಟಕುಗೊಳಿಸುತ್ತದೆ. ಭಾರತದ ಪ್ರತಿಯೊಬ್ಬ ಪ್ರಜೆಗೂ ತನ್ನಿಚ್ಛೆಯಂತೆ, ತನಗೆ ಇಷ್ಟವಾದ ಧರ್ಮದ ಪ್ರಕಾರ ಬದುಕಲು ಸಂವಿಧಾನ ಧಾರ್ಮಿಕ ಸ್ವಾತಂತ್ರ್ಯ ನೀಡಿದೆ. ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ಸಂವಿಧಾನ ವಿರೋಧಿಯಾಗಿದೆ ಎಂದರು.

ಭಾರತದಲ್ಲಿ ಬುಡಕಟ್ಟು ಜನಾಂಗದವರು, ಮುಸಲ್ಮಾನರು, ಬೌದ್ಧರು, ಜೈನರು, ಸಿಖ್ಖರು ಸೇರಿದಂತೆ ಅನೇಕ ಜನಾಂಗದವರಿದ್ದಾರೆ. ಪ್ರತಿಯೊಬ್ಬರೂ ಸಹ ಅವರವರ ಧರ್ಮಾಚರಣೆಗಳನ್ನು ಪಾಲನೆ ಮಾಡುತ್ತಿದ್ದಾರೆ.

ಭಾರತದಲ್ಲಿ ಪ್ರತಿಯೊಬ್ಬ ನಾಗರಿಕರನೂ ಧಾರ್ಮಿಕ ಮೌಲ್ಯಗಳನ್ನು ತನ್ನಲ್ಲಿ ರೂಢಿಸಿಕೊಂಡು ಜೀವನ ನಡೆಸಲು ಭಾರತ ಸಂವಿಧಾನ ಹಕ್ಕನ್ನು ನೀಡಿದೆ. ಆದರೆ ಏಕರೂಪ ನಾಗರಿಕ ಸಂಹಿತೆಯಿಂದ ದೇಶದ ಸಮಗ್ರತೆ, ಐಕ್ಯತೆಗೆ ಧಕ್ಕೆ ಉಂಟಾಗುವ ಸಾಧ್ಯತೆ ಇದೆ. ಹಾಗಾಗಿ ಇದನ್ನು ವಿರೋಧಿಸುತ್ತೇವೆ ಎಂದು ಹೇಳಿದರು.

ರಾಷ್ಟ್ರಪತಿಗಳು ಮಧ್ಯೆ ಪ್ರವೇಶಿಸಿ ಏಕರೂಪ ನಾಗರಿಕ ಸಂಹಿತೆಯ ವಿಷಯವನ್ನು ಕೈಬಿಡಲು ಕಾನೂನು ಆಯೋಗಕ್ಕೆ ಆದೇಶಿಸಲು ಮನವಿ ಮಾಡಿದರು.

ಅಪರ ಜಿಲ್ಲಾಧಿಕಾರಿಯವರಿಗೆ ಮನವಿ ಸಲ್ಲಿಸುವ ಸಂದರ್ಭದಲ್ಲಿ ಮುಖಂಡರಾದ ಟಿ. ಅಸ್ಗರ್, ನೂರ್ ಅಹ್ಮದ್, ಮಹಮ್ಮದ್ ಶೋಯೇಬ್, ಐ.ಕೆ. ಮುನ್ನಾಸಾಬ್, ಮೆಹಬೂಬ್ ಬೀಡ, ಅನ್ವರ್ ಹುಸೇನ್, ಅಜ್ಮತ್, ಖಲೀಲ್‌ವುಲ್ಲಾ ಖಾನ್, ಪಿ.ನಬೀಸಾಬ್, ಮಹಮ್ಮದ್ ಹನೀಫ್ ಸಾಬ್, ಹಸೇನ್ ಅಂಬ್ಯುಲೆನ್ಸ್, ಮಹಮ್ಮದ್ ಫಾರೂಖ್, ಅಬ್ದುಲ್ ರೆಹಮಾನ್ ಸಾಬ್, ಸಮೀವುಲ್ಲಾ ಸಾಬ್, ಸೈಯದ್ ಅಕ್ಬರ್, ಸೈಯದ್ ಮುಸ್ತಾಫ್ ಮತ್ತಿತರರು ಇದ್ದರು.





### ನಾಗಲಿಂಗರಾಜ್.ಎನ್ ನಿಧನ



ದಾವಣಗೆರೆ ಸಿದ್ದವೀರಪ್ಪ ಬಡಾವಣೆ 4ನೇ ಮೇನ್ 12ನೇ ಕ್ರಾಸ್ ವಾಸಿ

**ನಾಗಲಿಂಗರಾಜ್ .ಎನ್**

ಇವರು ದಿನಾಂಕ 10.7.2023ರ ಸೋಮವಾರ ಬೆಳಗಿನ ಜಾವ 5.30ಕ್ಕೆ ನಿಧನರಾದರು. ಮೃತರಿಗೆ 62 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 10.7.2023ರ ಸೋಮವಾರ ಮಧ್ಯಾಹ್ನ 3.30 ಕ್ಕೆ ನಗರದ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಯಿತು.

**ದುಃಖತಪ್ತ ಕುಟುಂಬ ವರ್ಗ, : ಮೊ : 99862 26415**

### ಪ್ರಥಮ ವರ್ಷದ ಪುಣ್ಯಸ್ಮರಣೆ



**ಲಿಂ॥ ಮೋಹನ್ ಎಸ್.ಎಂ.**

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು.
ಸದಾ ನಿಮ್ಮ ಸ್ಮರಣೆಯಲ್ಲಿ, ನೀವು ತೋರಿದ ಮಾರ್ಗದಲ್ಲಿ ಮುನ್ನಡೆಯುತ್ತಿರುವ...

ಶ್ರೀಮತಿ ಎಸ್.ಎಂ. ಶಿವಲೀಲಾ ಷಡಾಕ್ಷರಯ್ಯ
ಡಾ॥ ವಿನುತಾ ಎಸ್.ಎಂ. ಡಾ॥ ಕೃಪಾನಿಧಿ
ಶ್ರೀಮತಿ ಮಂಜುಳಾ ಶರಣ ಬಸವರಾಜು, ಪುಷ್ಪಾ ಮೋಹನ್
ಶ್ರೀಮತಿ ಸರೋಜ ಆನಂದ, ದರ್ಶನ್, ಸುಜಲ್, ಶರತ್, ಅನಘ,
ಮನು, ಪ್ರೇಕ್ಷಾ, ಸೌರಭ, ಕ್ಷಮಾ ಮತ್ತು ಬಂಧುಗಳು.



## ಶಿಶುವಿಹಾರದ ಮೇಲೆ ದಾಳಿ

(1ನೇ ಪುಟದಿಂದ) ಮಕ್ಕಳು, ಇಬ್ಬರು ಪೋಷಕರು ಹಾಗೂ ಶಿಕ್ಷಕರೊಬ್ಬರು ಸಾವನನ್ನಪ್ಪಿದ್ದಾರೆ.

ಸೋಮವಾರ ಬೆಳಿಗ್ಗೆ 7.40ರ ಸಮಯದಲ್ಲಿ ಈ ದಾಳಿ ನಡೆಸಲಾಗಿದೆ. ಮಕ್ಕಳು ಬೇಸಿಗೆ ಶಿಬಿರದ ತರಗತಿಗೆ ಬರುವ ವೇಳೆ ದಾಳಿ ನಡೆಸಲಾಗಿದೆ.

ಚೀನಾದಲ್ಲಿ ಶಾಲೆಗಳ ಮೇಲೆ ಮಾರಣಾಂತಿಕ ದಾಳಿ ನಡೆಸುವ ಘಟನೆಗಳು ಇತ್ತೀಚೆಗೆ ಹೆಚ್ಚಾಗಿವೆ. 2018ರ ನಂತರ ಈ ರೀತಿಯ ಹತ್ತು ಚಾಕು ದಾಳಿಗಳು ನಡೆದಿವೆ.


### ನೀಲಿ ರಂಗಪ್ಪ ನಿಧನ



ದಾವಣಗೆರೆ ಕಾಳಿಕಾದೇವಿ ರಸ್ತೆಯ ಕಾಳಿಕಾದೇವಿ ದೇವಸ್ಥಾನದ ಎದುರಿಗೆ ಇರುವ ಕರೇಶಿವಪ್ಪರ ಕಾಂಪೌಂಡ್ ನಿವಾಸಿ ರಂಗಪ್ಪ ನೀಲಿ (ದಾಸಪ್ಪ) (80) ಇವರು ದಿನಾಂಕ 10.07.2023ರ ಸೋಮವಾರ ಬೆಳಿಗ್ಗೆ 7:30 ಕ್ಕೆ ನಿಧನರಾದರು. ಪತ್ನಿ ಪ್ರಮೀಳಮ್ಮ ನೀಲಿ ಸೇರಿದಂತೆ ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಮಿತ್ರರನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 11.7.2023ರ ಮಂಗಳವಾರ ಮಧ್ಯಾಹ್ನ 2.30ಕ್ಕೆ ನಗರದ ಗಾಂಧಿನಗರದ ರುದ್ರಭೂಮಿಯಲ್ಲಿ ನೆರವೇರಲಿದೆ.


## ವಿಧಾನಸಭೆಗೆ ಅನಧಿಕೃತ ವ್ಯಕ್ತಿ: ಆಧುನಿಕ ತಂತ್ರಜ್ಞಾನದ ರಕ್ಷಣೆ

ಬೆಂಗಳೂರು, ಜು. 10 - ವಿಧಾನ ಸಭೆಯ ಸಭಾಂಗಣದೊಳಗೆ ಶಾಸಕರಲ್ಲದ ವ್ಯಕ್ತಿ ಅನಧಿಕೃತವಾಗಿ ಪ್ರವೇಶಿಸಿರುವುದು ನಮ್ಮೆಲ್ಲರಿಗೂ ಪಾಠವಾಗಿದ್ದು, ಕಣ್ಣು ತೆರೆಸಿದೆ. ವಿಧಾನಸೌಧ, ರಾಜಭವನ, ಶಾಸಕರ ಭವನ ಸೇರಿದಂತೆ ಸೂಕ್ಷ್ಮ ಪ್ರದೇಶಗಳ ಭದ್ರತೆಗೆ ಅತ್ಯಾಧುನಿಕ ತಂತ್ರಜ್ಞಾನ ಆಧರಿಸಿದ ವ್ಯವಸ್ಥೆ ರೂಪಿಸುವುದಾಗಿ ಸಭಾಧ್ಯಕ್ಷ ಯು.ಟಿ. ಖಾದರ್ ವಿಧಾನಸಭೆಗೆ ತಿಳಿಸಿದ್ದಾರೆ.

ಕಲಾಪದಲ್ಲಿಂದು ಸ್ವಯಂಪ್ರೇರಿತ ಹೇಳಿಕೆ ನೀಡಿದ ಅವರು, ಚಿತ್ರದುರ್ಗದ ತಿಪ್ಪೇರುದ್ರಯ್ಯ ಎಂಬ 76 ವರ್ಷದ ವ್ಯಕ್ತಿ ಶುಕ್ರವಾರ ಸದನದ ಒಳಗೆ ಬಂದು ಶಾಸಕಿ ಕರೆಮ್ಮ ಅವರ ಜಾಗದಲ್ಲಿ ಆಸೀನರಾಗಿದ್ದರು. ತಮ್ಮನ್ನು ತಾವು ಮೊಳಕಾಲ್ಮೂರು ಕ್ಷೇತ್ರದ ಶಾಸಕ ಎನ್.ವೈ. ಗೋಪಾಲಕೃಷ್ಣ ಎಂದು ಪರಿಚಯಿಸಿಕೊಂಡಿದ್ದರು. ಪ್ರಾಥಮಿಕ ವಿಚಾರಣೆಯ ವೇಳೆ ಅವರು ಶಾಸಕರಲ್ಲ ಎಂದು ಖಚಿತವಾಗಿದೆ ಎಂದರು. ಮಾರ್ಷಲ್‌ಗಳ ಮೂಲಕ ಅವರನ್ನು ವಿಧಾನಸೌಧದ ಪೊಲೀಸ್ ಠಾಣೆಗೆ ಒಪ್ಪಿಸಲಾಗಿದ್ದು, ಪ್ರಕರಣ ದಾಖಲಾಗಿದೆ. ಸದರಿ ವ್ಯಕ್ತಿಯನ್ನು ಬಂಧಿಸಿ, ವಿಚಾರಣೆ ನಡೆಯುತ್ತಿದೆ ಎಂದು ಹೇಳಿದರು. ಭದ್ರತೆ ವಿಷಯಕ್ಕೆ ಅತ್ಯಾಧುನಿಕ ತಂತ್ರಜ್ಞಾನ ಬಳಸಿ ಕ್ರಮ ಕೈಗೊಳ್ಳಲಾಗುವುದು. ಶಾಸಕರು ಸಚಿವರು, ಮಾಧ್ಯಮದವರು ತಮ್ಮ ಗುರುತಿನ ಚೀಟಿಯನ್ನು ನೀಡಬೇಕು. ಪ್ರತಿಷ್ಠೆಯ ಸಲುವಾಗಿ ಅನುಚಿತವಾಗಿ ವರ್ತಿಸದೆ ಭದ್ರತಾ ಸಿಬ್ಬಂದಿಯೊಂದಿಗೆ ಸಹಕರಿಸಬೇಕೆಂದು ಸಲಹೆ ನೀಡಿದರು.

# ಭವಿಷ್ಯ ರೂಪಿಸಿಕೊಳ್ಳಲು ಸ್ಪರ್ಧಾತ್ಮಕ ಪರೀಕ್ಷೆ ಅಗತ್ಯ

### ಜಾಕೀರ್ ಹುಸೇನ್ ಕಾಲೇಜ್‌ನ 'ಪದವಿ ದಿನ' ಕಾರ್ಯಕ್ರಮದಲ್ಲಿ ಸೈಯದ್ ಸೈಫುಲ್ಲಾ



ದಾವಣಗೆರೆ, ಜು.10- ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳು ಹೆಚ್ಚಿನದಾಗಿ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತೆಗೆದುಕೊಳ್ಳುವ ಮೂಲಕ ತಮ್ಮ ಭವಿಷ್ಯ ರೂಪಿಸಿ ಕೊಳ್ಳಬೇಕು ಎಂದು ಮಿಲ್ಲತ್ ವಿದ್ಯಾಸಂಸ್ಥೆ ಕಾರ್ಯದರ್ಶಿ ಸೈಯದ್ ಸೈಫುಲ್ಲಾ ಅವರು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ನಗರದ ಜಾಕೀರ್ ಹುಸೇನ್ ಪ್ರಥಮ ದರ್ಜೆ ಕಾಲೇಜ್‌ನಲ್ಲಿ ಹಮ್ಮಿಕೊಳ್ಳಲಾಗಿದ್ದ 'ಪದವಿ ದಿನ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಪದವಿಗಳ ಮಹತ್ವವನ್ನು ವಿವರಿಸಿದ ಸೈಫುಲ್ಲಾ ಅವರು ವಿದ್ಯಾರ್ಥಿಗಳು ಶಿಕ್ಷಣದ ಮಹತ್ವ ಅರಿತು ಕಠಿಣ ಶ್ರಮದಿಂದ ಜೀವನವನ್ನು ರೂಪಿಸಿಕೊಳ್ಳುವಂತೆ ತಿಳಿಸಿದರು.

ಮಿಲ್ಲತ್ ವಿದ್ಯಾಸಂಸ್ಥೆಯ ಆಡಳಿತಾಧಿಕಾರಿ ಸೈಯದ್ ಅಲಿ, ಜಾಕೀರ್ ಹುಸೇನ್ ಪ್ರಥಮ ದರ್ಜೆ ಕಾಲೇಜ್‌ನ ಪ್ರಾಂಶುಪಾಲರಾದ ಶ್ರೀಮತಿ ಕುಪ್ತರಿ ಬೇಗಂ, ಎಸ್.ಕೆ.ಎ.ಪಿ.ಹೆಚ್ ಪಿಯು ಕಾಲೇಜಿನ ಪ್ರಾಂಶುಪಾಲರಾದ ಜುಲ್ಕರ್ ನೈಸ್ ಉಪಸ್ಥಿತರಿದ್ದರು.

ಉಪನ್ಯಾಸಕರಾದ ಕಾಶೀಫ್ ಉಲ್ಲಾ ಸ್ವಾಗತಿಸಿದರು. ಹೆಚ್.ಎಂ.ಮೆಹರ್‌ತಾಜ್ ನಿರೂಪಣೆ ಮಾಡಿದರು. ಡಾ.ಸೈಯದ್ ಅಬ್ದುಲ್ ಖಾದರ್ ಜಿಲಾನಿ ವಂದಿಸಿದರು.

ಇದೇ ಸಂದರ್ಭದಲ್ಲಿ ಇಬ್ಬರು ಎಂ.ಎ. ಉರ್ದು ಸ್ನಾತ್ತಕೋತ್ತರ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನದೊಂದಿಗೆ ದಾಖಲಾತಿ ಒದಗಿಸಲಾಯಿತು.

ಕಾರ್ಯಕ್ರಮದಲ್ಲಿ ಕಾಲೇಜಿನ ಉಪನ್ಯಾಸಕರಾದ ಅರ್ಷಿಯಾ ಪೀರ್‌ದೋಸ್, ಡಾ.ಸೈಯದ್ ಅಬ್ದುಲ್ ಖಾದರ್ ಜಿಲಾನಿ, ಫರ್ಹಾನ್ ಡಿ, ಕಾಶೀಫ್ ಉಲ್ಲಾ ಆರ್.ಷರೀಫ್, ಸಬ್ರೀನ್ ತಾಜ್, ಸೈಯದ್ ಅಲಿ, ಸುನೀತಾ ಜೋಶಿ, ಅಬ್ದುಲ್ ಖಾದರ್ ಜಿಲಾನಿ, ಫೀರ್‌ದೋಸ್, ಮೆಹರ್ ತಾಜ್, ಮೆಹರ್ ತಾಜ್ ಹೆಚ್.ಎಂ, ಆಫ್ರೀಸ್, ಸಾನಿಯಾ ಮತ್ತು ವಾಣಿ ಗ್ರಂಥಪಾಲಕ ಯಶವಂತನಾಯ್ಕ ಹಾಜರಿದ್ದರು.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ಅತಿಥಿ ಉಪನ್ಯಾಸಕರ ಖಾಯಮಾತಿಗೆ ಒತ್ತಾಯ



ದಾವಣಗೆರೆ, ಜು. 10- ಪಂಚ ಗ್ಯಾರಂಟಿ ಜಾರಿ ಮಾಡುವ ತರಾತುರಿಯಲ್ಲಿ ಶಿಕ್ಷಕರಿಗೆ, ಶಿಕ್ಷಣ ಇಲಾಖೆ ನೌಕರರಿಗೆ ಮಕ್ಮಲ್ ಟೋಪಿ ಹಾಕದೆ, ಅತಿಥಿ ಉಪನ್ಯಾಸಕರನ್ನು ಖಾಯಂಗೊಳಿಸಬೇಕು ಹಾಗೂ ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಹೇಳಿದಂತೆ ನೂತನ ಪಿಂಚಣಿ ಯೋಜನೆ ವಾಪಸ್ ಪಡೆದು, ಹಳೆ ಪಿಂಚಣಿ ಯೋಜನೆ ಜಾರಿಗೊಳಿಸಬೇಕು ಎಂದು ವಿಧಾನಪರಿಷತ್ ಸದಸ್ಯ ವೈ.ಎ. ನಾರಾಯಣಸ್ವಾಮಿ ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ನಗರದ ಜಿಎಂಐಟಿ ಅತಿಥಿ ಗೃಹದಲ್ಲಿ ಭಾನುವಾರ ಅತಿಥಿ ಉಪನ್ಯಾಸಕರ ಸಂಘದಿಂದ ಮನವಿ ಸ್ವೀಕರಿಸಿ ಮಾತನಾಡಿದ ಅವರು, ನೂತನ ರಾಜ್ಯ ಸರ್ಕಾರವು ಅತಿಥಿ ಉಪನ್ಯಾಸಕರನ್ನು 10 ತಿಂಗಳ ಅವಧಿಗೆ ತೆಗೆದುಕೊಂಡಿರುವುದರಿಂದ ಹಲವು ಗೊಂದಲ, ಗೊಜಲುಗಳಿವೆ. ಆದ್ದರಿಂದ ಗೊಂದಲ ಬಗೆಹರಿಸಿ ಅತಿಥಿ ಉಪನ್ಯಾಸಕರನ್ನು ಖಾಯಂಗೊಳಿಸಬೇಕು ಎಂದು ಆಗ್ರಹಿಸಿದರು.

ಉಪನ್ಯಾಸಕರ ವರ್ಗಾವಣೆ ನಿಯಂತ್ರಣ ಕಾಯ್ದೆಯ ಮಾನದಂಡಗಳನ್ನು ಪರಿಶೀಲಿಸಿ, ಅವುಗಳನ್ನು ಸರಳೀಕರಣಗೊಳಿಸಿ ಡಿ ವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವವರನ್ನು ಎ ವಲಯದಲ್ಲಿ ಕಾರ್ಯನಿರ್ವಹಿಸಲು ಅವಕಾಶ ನೀಡಬೇಕು. ತಕ್ಷಣವೇ 7ನೇ ವೇತನ ಆಯೋಗದ ವರದಿ ಪಡೆದು ವೇತನ ಪರಿಷ್ಕರಿಸಬೇಕು. ರಾಜ್ಯದ ಪದವಿ ಮತ್ತು ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಇರುವ ಖಾಲಿ ಹುದ್ದೆಗಳನ್ನು ಸರ್ಕಾರ ತಕ್ಷಣವೇ ತುಂಬಿಕೊಳ್ಳಬೇಕು ಎಂದು ಒತ್ತಾಯಿಸಿದರು. ಈ ವೇಳೆ ಅತಿಥಿ ಉಪನ್ಯಾಸಕರ ಸಂಘದ ಕೊಟ್ರೇಶ್, ವಿಜಯಕುಮಾರ್ ಮತ್ತಿತರರಿದ್ದರು.

# ಎನ್‌ಇಪಿ ರದ್ದು -ರಾಜ್ಯ ಶಿಕ್ಷಣ ನೀತಿ ಜಾರಿ

## ಮಕ್ಕಳ ಶಿಕ್ಷಣದಲ್ಲಿ ರಾಜಕೀಯ : ಶಿಕ್ಷಣ ಕ್ಷೇತ್ರವೇ ಅತಂತ್ರ

ದಾವಣಗೆರೆ,ಜು.10- ಈ ಹಿಂದೆ 2 ವರ್ಷಗಳಿಂದ ಎನ್‌ಇಪಿ ರಾಜ್ಯದಲ್ಲಿ ಜಾರಿಯಾಗಿದೆ. ಪದವಿ ಕಾಲೇಜಿನಲ್ಲಿ 3 ವರ್ಷದ ಕೋರ್ಸ್‌ಗಳು 4 ವರ್ಷವಾಗಿದೆ. ಈ ಹಿನ್ನೆಲೆಯಲ್ಲಿ 2 ವರ್ಷ ವಿದ್ಯಾರ್ಥಿಗಳು ಆ ಪಠ್ಯಕ್ರಮವನ್ನು ಅನುಸರಿಸಿ ಈಗಾಗಲೇ ವ್ಯಾಸಂಗ ಮಾಡುತ್ತಿದ್ದಾರೆ.

ಈಗ ರಾಜ್ಯ ಸರ್ಕಾರ ಬದಲಾದ ತಕ್ಷಣ ಎನ್‌ಇಪಿ ರದ್ದು, ರಾಜ್ಯ ಪಠ್ಯಕ್ರಮ ಜಾರಿ ಎಂದರೆ ಹೇಗೆ? ಈ ವಿದ್ಯಾರ್ಥಿಗಳ ಮುಂದಿನ ವ್ಯವಸ್ಥೆ ಏನು? ಈಗಾಗಲೇ ಪ್ರೌಢಶಿಕ್ಷಣ ವ್ಯವಸ್ಥೆಯಲ್ಲಿ ಕರ್ನಾಟಕ ಪ್ರೌಢಶಿಕ್ಷಣ ಮಂಡಳಿ ಕರ್ನಾಟಕ ಪರೀಕ್ಷಾ ಮೌಲ್ಯ ಮಾಪನ ಮಂಡಳಿಯಾಗಿದೆ.

ಹೀಗೆ ಎನ್‌ಇಪಿ ಅಡಿಯಲ್ಲಿ ರಾಜ್ಯಾದ್ಯಂತ ಶಿಕ್ಷಣ ವ್ಯವಸ್ಥೆಯ ಹೊಸ ನಿಲುವನ್ನು ಕೊಟ್ಟಿದೆ. ಶಿಕ್ಷಣ ಇಲಾಖೆ ಇಲಾಖಾ ಹಂತದಲ್ಲಿಯೂ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೆ ತಂದು, ಹತ್ತು -ಹಲವಾರು ಕಾರ್ಯಕ್ರಮ ಮಾಡಿ ಕೋಟ್ಯಾಂತರ ರೂ. ಹಣವನ್ನು ವಿನಿಯೋಗ ಮಾಡಿದೆ.

ಎನ್‌ಇಪಿ ಜಾರಿಯಿಂದ ರಾಜ್ಯ ಸರ್ಕಾರಕ್ಕೆ ಆಗುವ ನಷ್ಟವೇನು? ಗಂಡ-ಹೆಂಡತಿ ಜಗಳದಲ್ಲಿ ಕೂಸು ಬಡವಾಯಿತು ಅನ್ನುವ ಹಾಗೆ ರಾಜಕೀಯ ಪಕ್ಷಗಳು, ಮಕ್ಕಳ ಶಿಕ್ಷಣದ ವಿಷಯದಲ್ಲಿ ರಾಜಕೀಯ ಮಾಡುವುದು ಸರಿಯಲ್ಲ.

ಆದ್ದರಿಂದ ಮುಖ್ಯಮಂತ್ರಿಗಳು, ಶಿಕ್ಷಣ ಸಚಿವರು ಈ ಬಗ್ಗೆ ಗಮನ ಹರಿಸಿ, ಎನ್‌ಇಪಿ ಮರುಜಾರಿ ಮಾಡಲು ಕ್ರಮ ವಹಿಸಿ. ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಜಿಲ್ಲಾ ಶಾಶ್ವತ ಅನುದಾನ ರಹಿತ ಶಾಲಾ ಆಡಳಿತ ಮಂಡಳಿಗಳ ಸಂಘದ ಅಧ್ಯಕ್ಷ ತ್ಯಾವಣಿಗಿ ವೀರಭದ್ರಸ್ವಾಮಿ, ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಹೆಚ್.ಜಿ., ಗೌರವ ಅಧ್ಯಕ್ಷ ಕಂದನಕೋವಿ ಪ್ರಕಾಶ್, ದಿನೇಶ್, ವೀರೇಶ್ ಬಿರಾದಾರ್, ಮಂಜುನಾಥ ಸ್ವಾಮಿ, ನಾಗರಾಜ್ ಎಸ್. ಎಂ.ಎಸ್. ಮುಂತಾದವರು ಸರ್ಕಾರವನ್ನು ಒತ್ತಾಯಿಸಿದ್ದಾರೆ.

# ಬೃಹತ್ ಸಂಸ್ಥೆಗಳು ಕೃಷಿ ಕ್ಷೇತ್ರ ಪ್ರವೇಶಿಸಲು ತವಕಿಸುತ್ತಿವೆ

## ಬಾಪೂಜಿ ಇನ್‌ಸ್ಟಿಟ್ಯೂಟ್ ಆಫ್ ಹೈಟೆಕ್ ಎಜುಕೇಷನ್‌ನಲ್ಲಿನ ಕಾರ್ಯಕ್ರಮದಲ್ಲಿ ಹೆಚ್‌ಡಿಎಫ್‌ಸಿ ಬ್ಯಾಂಕಿನ ಉಪಾಧ್ಯಕ್ಷ ಯೋಗೇಶ್



ದಾವಣಗೆರೆ, ಜು. 10- ಎಲ್ಲರೂ ನೌಕರಿಯನ್ನೇ ಅರಸಿ ಕೊಂಡು ಹೋದರೆ ಆಹಾರವನ್ನು ಬೆಳೆದು ಕೊಡುವವರೇ ಇಲ್ಲ ವಾಗುತ್ತಾರೆ. ಈ ಸಂದಿಗ್ಧದಲ್ಲಿ ಬೃಹತ್ ಸಂಸ್ಥೆಗಳು ಪ್ರಸ್ತುತ ಕೃಷಿ ಕ್ಷೇತ್ರವನ್ನು ಪ್ರವೇಶಿಸಲು ತವಕಿಸುತ್ತಿವೆ ಎಂದು ಹೆಚ್‌ಡಿಎಫ್‌ಸಿ ಬ್ಯಾಂಕಿನ ಉಪಾಧ್ಯಕ್ಷ ಕೆ.ಆರ್. ಯೋಗೇಶ್ ಹೇಳಿದರು.

ನಗರದ ಬಾಪೂಜಿ ಇನ್‌ಸ್ಟಿಟ್ಯೂಟ್ ಆಫ್ ಹೈಟೆಕ್ ಎಜುಕೇಷನ್ ನ ವಾಣಿಜ್ಯ ವಿಭಾಗದ 2020-23ರ ಸಾಲಿನ ವಿದ್ಯಾರ್ಥಿಗಳಿಗೆ ವಿದಾಯ ಹೇಳುವ "ಬೀಐಹ್ಯಾವ್-2ಕೆ23" ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು. ಎಷ್ಟೇ ವಿದ್ಯಾವಂತರಾದರೂ ಕೃಷಿ ಕ್ಷೇತ್ರದ ಅನುಭವ ಅತ್ಯವಶ್ಯ, ಅದು ಪ್ರಕೃತಿಯೊಂದಿಗೆ ಬೆರೆತು ಬಾಳುವ ಬದುಕನ್ನು ತಿಳಿಸುತ್ತದೆ ಎಂದರಲ್ಲದೆ ತಂತ್ರಜ್ಞಾನದ ತೀವ್ರಗತಿಯ ವೃದ್ಧಿಯು ಕೆಲಸದ ವಿಧಾನಗಳಲ್ಲೂ ಬದಲಾವಣೆಯನ್ನು ಉಂಟುಮಾಡುತ್ತಿದ್ದು ಇದು ಮಾರುಕಟ್ಟೆಯ ವ್ಯವಸ್ಥೆಯಲ್ಲೂ, ಬಳಕೆದಾರರ ಅಭಿರುಚಿಯಲ್ಲೂ ತೀವ್ರ ಬದಲಾವಣೆಯನ್ನು ತರುತ್ತಿದೆ. ಇವುಗಳ ಅರಿವು ಅನುಷ್ಠಾನದೊಂದಿಗೆ ಶಿಸ್ತು, ಸಮಯ ಪಾಲನೆ, ಸಮಾಜ ಗೌರವ ಇದ್ದವರು ಮಾತ್ರ ಯಶಸ್ವಿ ಉದ್ಯೋಗಿಗಳಾಗಲು ಸಾಧ್ಯ ಎಂದರು.

ಕಾಲೇಜಿನ ನಿರ್ದೇಶಕ ಡಾ.ಸ್ವಾಮಿ ತ್ರಿಭುವನಾನಂದ ಅವರು ಪ್ರಾಸ್ತಾವಿಕ ನುಡಿಗಳೊಂದಿಗೆ ಸ್ವಾಗತ ಕೋರುತ್ತಾ ವಾಣಿಜ್ಯೋದ್ಯಮಗಳು ಆರ್ಥಿಕಾಭಿವೃದ್ಧಿಯ ಬೆನ್ನೆಲುಬುಗಳು ಎಂಬ ಅರಿವು ವಿದ್ಯಾರ್ಥಿಗಳಲ್ಲಿ ಅವಶ್ಯ ಎಂದರು.

ಅಧ್ಯಕ್ಷ ಸ್ಥಾನದಿಂದ ಮಾತನಾಡಿದ ಕಾಲೇಜಿನ ಪ್ರಾಂಶುಪಾಲ ಡಾ. ಬಿ. ವೀರಪ್ಪ, ಬಿಕಾಂ ಪದವಿಗೆ ಬೇಡಿಕೆ ಹೆಚ್ಚುತ್ತಿದೆ. ಪರೀಕ್ಷೆಯನ್ನು ಶ್ರದ್ಧೆಯಿಂದ, ಸಂತೋಷದಿಂದ ಎದುರಿಸಿ. ಪದವಿಯ ನಂತರ ಅನೇಕ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತೆಗೆದುಕೊಳ್ಳಿ ಎಂದು ವಿದ್ಯಾರ್ಥಿಗಳಿಗೆ ಮನವಿ ಮಾಡಿದರು.

ಹರ್ಷಿತ ಮತ್ತು ಸ್ಫೂರ್ತಿ ನಿರೂಪಿಸಿದ ಕಾರ್ಯಕ್ರಮದಲ್ಲಿ ಪ್ರಜ್ಞಾ ಪ್ರಾರ್ಥಿಸಿದರು. ವೈಷ್ಣವಿ ಅತಿಥಿಗಳನ್ನು ಪರಿಚಯಿಸಿದರು. ಐಶ್ವರ್ಯ, ಸೈಯದ್ ಅರ್ಮಾನ್, ಮಹ್ಮದ್ ಆದಿಲ್, ಅರ್ಚನಾ ವಂದಿಸಿದರು.

# ನಂದಗೋಕುಲ ಶಾಲೆಯಲ್ಲಿ ಸ್ಕೌಟ್ಸ್, ಗೈಡ್ಸ್, ಕಬ್ಸ್, ಬುಲ್ ಬುಲ್ಸ್ ಘಟಕ ಉದ್ಘಾಟನೆ



ದಾವಣಗೆರೆ, ಜು. 10- ನಗರದ ನಂದಗೋಕುಲ ಶಾಲೆಯಲ್ಲಿ ಸ್ಕೌಟ್ಸ್, ಗೈಡ್ಸ್, ಕಬ್ಸ್, ಬುಲ್ ಬುಲ್ಸ್ ಘಟಕವನ್ನು ಸಸಿಗೆ ನೀರೆರೆಯುವ ಮೂಲಕ ಉದ್ಘಾಟನೆ ಮಾಡಲಾಯಿತು.

ಈ ಕಾರ್ಯಕ್ರಮದಲ್ಲಿ ಶಾಲಾ ಕಾರ್ಯದರ್ಶಿ ಶ್ರೀಮತಿ ಬಿ. ಅನಸೂಯ, ಶಾಲಾ ಮುಖ್ಯ ಶಿಕ್ಷಕಿ ಶ್ರೀಮತಿ ರೆಹನಾಬಾನು ನಾಸಿಕ, ಹಿರಿಯ ಶಿಕ್ಷಕ ಬಸವರಾಜ್ ಹಾಗೂ ಸ್ಕೌಟ್ ಮಾಸ್ಟರ್ ಮುಸ್ತಾಫ್ ರಜಾ ಮತ್ತು ಸ್ಕೌಟ್ ಕ್ಯಾಪ್ಟನ್ ಶ್ರೀಮತಿ ನಳಿನ ಕೆ.ಬಿ, ಗೈಡ್ ಕ್ಯಾಪ್ಟನ್ ಮಾನಸ ಕೆ., ಕಬ್ಸ್ ಕ್ಯಾಪ್ಟನ್ ಶ್ರೀಮತಿ ವಿಜಯಲಕ್ಷ್ಮಿ ಹಾಗೂ ಬುಲ್ ಬುಲ್ಸ್ ಕ್ಯಾಪ್ಟನ್ ಶ್ರೀಮತಿ ಸೋನಿಕಾ ಮತ್ತು ಶಾಲಾ ವ್ಯವಸ್ಥಾಪಕರಾದ ಶ್ರೀಮತಿ ಪುಷ್ಪ ಮತ್ತು ವಿದ್ಯಾರ್ಥಿಗಳು ಹಾಜರಿದ್ದರು.

# ಹಕ್ಕು ಪತ್ರ ವಿತರಣೆಗೆ ಸಚಿವರಿಗೆ ಮನವಿ



ದಾವಣಗೆರೆ, ಜು. 10- ನಗರದ 33ನೇ ವಾರ್ಡ್, ಟಿವಿ ಸ್ಟೇಷನ್ ಕೆರೆ ಹಿಂಭಾಗದಲ್ಲಿನ ಸುಮಾರು 100 ಕುಟುಂಬಗಳಿಗೆ ಹಕ್ಕು ಪತ್ರ ವಿತರಣೆ ಮಾಡುವಂತೆ ಜಿಲ್ಲಾ ಉಸ್ತುವಾರಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಅವರಿಗೆ ಮನವಿ ಸಲ್ಲಿಸಲಾಯಿತು. ವಾರ್ಡ್ ಸದಸ್ಯ ಕೆ.ಎಂ. ವೀರೇಶ್ ಅವರ ನೇತೃತ್ವದಲ್ಲಿ ಜಿಲ್ಲಾ ಪಂಚಾಯ್ತಿ ಕಚೇರಿ ಬಳಿ ಉಸ್ತುವಾರಿ ಸಚಿವರನ್ನು ಭೇಟಿ ಮಾಡಿದ ನಾಗರಿಕರು, ಶೀಘ್ರವೇ ಹಕ್ಕು ಪತ್ರ ನೀಡುವಂತೆ ಮನವಿ ಮಾಡಿದರು. ಈ ಸಂದರ್ಭದಲ್ಲಿ ಮುತ್ತುರಾಜ್, ಸಂತೋಷ್, ಪರುಶಪ್ಪ, ದಾಸಪ್ಪ, ಮುರುಗೇಶ್, ಚಂದ್ರು, ರಾಜಪ್ಪ, ಗೌರಮ್ಮ, ರತ್ನಮ್ಮ, ಮಾಳಮ್ಮ, ಸೀತಮ್ಮ, ರಾಜಮ್ಮ ಇತರರು ಉಪಸ್ಥಿತರಿದ್ದರು.

# ವ್ಯಸನಿಗಳಲ್ಲಿ ಶೇ.10 ರಷ್ಟು ಆತ್ಮಹತ್ಯೆ ಪ್ರಕರಣ

## ಮಾದಕ ವ್ಯಸನ ವಿರೋಧಿ ದಿನಾಚರಣೆಯಲ್ಲಿ ಸಂತೋಷ್ ಕುಮಾರ್




ದಾವಣಗೆರೆ, ಜು.10- ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮ ಅಭಿವೃದ್ಧಿ ಯೋಜನೆ ಮತ್ತು ಅಖಿಲ ಕರ್ನಾಟಕ ಜನ ಜಾಗೃತಿ ವೇದಿಕೆ ವತಿಯಿಂದ ಕಿತ್ತೂರು ಗ್ರಾಮದಲ್ಲಿ ಅಂತರರಾಷ್ಟ್ರೀಯ ಮಾದಕ ವ್ಯಸನ ಮತ್ತು ಅನಧಿಕೃತ ಕಳ್ಳ ಸಾಗಾಣಿಕೆ ವಿರೋಧಿ ದಿನಾಚರಣೆ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಸೈಕ್ಯಾಟ್ರಿಕ್ ಸೋಶಿಯಲ್ ವರ್ಕರ್ ಸಂತೋಷ್ ಕುಮಾರ್, ಪ್ರತಿ ವರ್ಷವೂ 5.70 ಲಕ್ಷ ಜನ ಮಾದಕ ವ್ಯಸನಕ್ಕೀಡಾಗಿ ಸಾವನ್ನಪ್ಪುತ್ತಿದ್ದಾರೆ ಮತ್ತು ಭಾರತದಲ್ಲಿ ಅಂಕಿ ಅಂಶಗಳ ಪ್ರಕಾರ ಹೇಳುವು ದಾದರೆ 7.5 ಕೋಟಿ ಮಾದಕ ವ್ಯಸನಿಗಳಿದ್ದಾರೆ, ಪ್ರತಿ 10 ಜನರು ಮಾದಕ ವ್ಯಸನಗಳಿಗೆ ಬಲಿಯಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಪ್ರತಿ 10 ಜನರಲ್ಲಿ ಇಬ್ಬರು 16 ವರ್ಷಕ್ಕಿಂತ ಕಡಿಮೆ ವಯೋಮಾನದವರೇ ಆಗಿದ್ದಾರೆ ಎನ್ನುವುದೇ ದುರಂತ ಎಂದರು. ತಂಬಾಕು, ಸಿಗರೇಟು, ಮದ್ಯಪಾನ ಇನ್ನಿತರ ಮತ್ತು ಅನಧಿಕೃತವಾಗಿ ಸಿಗುವಂತಹ ಗಾಂಜಾ, ಹೆರಾಯಿನ್, ಅಫೀಮು, ಚರಸ್, ಕೊಕೇನ್, ಬಂಗ್, ನಿಕೋಟಿನ್, ಚುಚ್ಚುಮದ್ದು ಸೇವನೆಯಲ್ಲಿ ನಗರ ಮತ್ತು ಕೊಳಗೇರಿ ಯುವಕರೇ ಹೆಚ್ಚು. ಈ ತರಹದ ಮಾದಕ ವಸ್ತುಗಳನ್ನು ಬಳಸುವುದರಿಂದ ಮೆದುಳಿನ ಮೇಲೆ ಪರಿಣಾಮ ಬೀರಿ ದೈಹಿಕವಾಗಿ, ಮಾನಸಿಕವಾಗಿ ದುಷ್ಪರಿಣಾಮಗಳು ಉಂಟಾಗುವುದು ಎಂದರು.

ಈ ಸಂದರ್ಭದಲ್ಲಿ ಜ್ಞಾನವಿಕಾಸ ಕಾರ್ಯಕ್ರಮದ ಸಮನ್ವಯ ಅಧಿಕಾರಿ ಪ್ರತಿಭಾ ಮತ್ತು ಪುಷ್ಪ ಸೇರಿದಂತೆ ಇನ್ನಿತರರು ಹಾಜರಿದ್ದರು .

# ಅವ್ಯವಸ್ಥೆಯ ಆಗರ ಹರಿಹರ ಡಿ.ಆರ್.ಎಂ. ಪ್ರೌಢಶಾಲೆ

ಎಂ.ಚಿದಾನಂದ ಕಂಚಿಕೇರಿ





ಹರಿಹರ, ಜು. 10- ನಗರದ ಪ್ರಸಿದ್ಧ ಡಿ. ಆರ್.ಎಂ. ಪ್ರೌಢಶಾಲೆಯ ಅವ್ಯವಸ್ಥೆಯಿಂದಾಗಿ ಶಾಲೆಯಲ್ಲಿ ಮಕ್ಕಳು ವಿದ್ಯಾಭ್ಯಾಸವನ್ನು ಮಾಡುವುದು ದುಸ್ತರವಾಗಿದೆ ಎಂದು ಸಾರ್ವಜನಿಕರು ದೂರಿದ್ದಾರೆ.

ನಗರದಲ್ಲಿ ಮಕ್ಕಳಿಗೆ ಓದುವುದಕ್ಕೆ ಶಾಲೆ ಇಲ್ಲದ ಸಮಯದಲ್ಲಿ ರಾಜನಹಳ್ಳಿ ಮದ್ದುರಾಯಪ್ಪನವರ ಕುಟುಂಬ ದವರು ವಿದ್ಯಾಭ್ಯಾಸಕ್ಕೆ ಉಪಕಾರ ಆಗಲಿ ಎಂದು ತಮ್ಮ ಜಮೀನನ್ನು ದಾನವಾಗಿ ನೀಡಿದ್ದರ ಪರಿಣಾಮ ನಗರದಲ್ಲಿ ಡಿ.ಆರ್.ಎಂ. ಪ್ರೌಢಶಾಲೆ ಆರಂಭವಾಗಲು ಕಾರಣವಾಯಿತು.

ಶಾಲೆ ಆರಂಭಗೊಂಡಾಗಿನಿಂದ ಇಲ್ಲಿಯವರೆಗೆ ಈ ಶಾಲೆಯಲ್ಲಿ ಓದಿದವರು ಬಹಳಷ್ಟು ವಿದ್ಯಾರ್ಥಿಗಳು ಉನ್ನತ ಸ್ಥಾನದಲ್ಲಿ ಇರುವುದನ್ನು ಕಾಣಬಹುದಾಗಿದೆ. ಜೊತೆಗೆ ಅನೇಕ ರಾಜಕೀಯ ಮುಖಂಡರು, ಹಿರಿಯ ಸಾಹಿತಿಗಳು ಸಹ ಇದೇ ಶಾಲೆಯಲ್ಲಿ ಓದಿದ್ದು ಇತಿಹಾಸ. ಆದರೆ ಇಂತಹ ಶಾಲೆಯಲ್ಲಿ ಮಕ್ಕಳಿಗೆ ಸರಿಯಾದ ರೀತಿಯಲ್ಲಿ ವ್ಯವಸ್ಥೆ ಇಲ್ಲದೇ ಇರುವುದು ಶೋಚನೀಯ ಪರಿಸ್ಥಿತಿಯಾಗಿದೆ.

ಶಾಲೆಯಲ್ಲಿ ಮಕ್ಕಳಿಗೆ ಸರಿಯಾದ ರೀತಿಯಲ್ಲಿ ಕುಳಿತು ಪಾಠವನ್ನು ಕೇಳುವುದಕ್ಕೆ ಆಸನಗಳು ಇರುವುದಿಲ್ಲ ಮತ್ತು ಕಿಟಕಿ ಬಾಗಿಲುಗಳು ಮುರಿದಿದ್ದು, ಗಾಳಿ, ಬೆಳಕು ಸರಿಯಾಗಿ ಇರುವುದಿಲ್ಲ. ಕೆಲವು ವಿದ್ಯಾರ್ಥಿಗಳು ಗುಟ್ಕಾ, ಪಾನ್ ಪರಾಗ್ ಹಾಕಿಕೊಂಡು ಎಲ್ಲೆಂದರಲ್ಲಿ ಉಗಿಯುವುದರಿಂದ ಶಾಲಾ ಕೊಠಡಿಗಳು ಗಬ್ಬೆದ್ದು ನಾರುತ್ತಿವೆ. ವ್ಯವಸ್ಥಿತವಾದ ಶೌಚಾಲಯ ಸೌಕರ್ಯವಿಲ್ಲ, ಲ್ಯಾಬ್ ಕೊಠಡಿ, ಸ್ಪೋರ್ಟ್ಸ್ ಆಟಿಕೆಗಳು ಇರುವುದಿಲ್ಲ, ಗ್ರಂಥಾಲಯ, ಕಾಂಪೌಂಡ್ ಗೋಡೆ ಇರುವುದಿಲ್ಲ, ಹೀಗೆ ಪಟ್ಟಿಯನ್ನು ಮಾಡುತ್ತಾ ಸಾಗಿದರೆ ಸಾಕಷ್ಟು ರೀತಿಯಲ್ಲಿ ಸಮಸ್ಯೆಗಳ ಸರಮಾಲೆ ಇದ್ದು, ಶಾಲೆಯಲ್ಲಿ ಮಕ್ಕಳು ಕಲಿಯುವುದಕ್ಕೆ ಬಹಳ ದೊಡ್ಡ ಪ್ರಮಾಣದಲ್ಲಿ ತೊಂದರೆಗಳು ಇರುವುದು ಕಂಡುಬಂದಿದೆ.

ಡಿ.ಆರ್.ಎಂ ಪ್ರೌಢಶಾಲೆ ಸ್ಥಿತಿಯನ್ನು ನೋಡಿದರೆ ವಿದ್ಯಾರ್ಥಿಗಳಿಗೆ ಬಹಳ ದೊಡ್ಡ ಪ್ರಮಾಣದಲ್ಲಿ ಸಮಸ್ಯೆಗಳು ಇದ್ದು, ಸರ್ಕಾರ ಕೂಡಲೇ ಸಮಸ್ಯೆಗಳನ್ನು ಪರಿಹರಿಸಲು ಮುಂದಾಗಬೇಕಾಗಿದೆ. ಶಾಲಾ ಆವರಣದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಓಡಾಡುವ ಪುಂಡರ ಹಾವಳಿಯನ್ನು ನಿಯಂತ್ರಿಸುವುದಕ್ಕೆ ಪೊಲೀಸ್ ಇಲಾಖೆ ಅಧಿಕಾರಿಗಳೂ ಸಹ ದಿನಕ್ಕೆ ಎರಡು, ಮೂರು ಬಾರಿ ಬೀಟ್ ಹಾಕಿದರೆ ಅನುಕೂಲ ಆಗುತ್ತದೆ ಎಂದು ಶಾಲೆಯ ಎಸ್.ಡಿ.ಎಂ.ಸಿ. ಉಪಾಧ್ಯಕ್ಷ ಶಿವಕುಮಾರ್ ಮತ್ತು ಸದಸ್ಯ ಜಬಿವುಲ್ಲಾ ಹೇಳುತ್ತಾರೆ.

ಈ ಶಾಲೆ 1945 ರಲ್ಲಿ ಆರಂಭಗೊಂಡಿದ್ದು, ಕನ್ನಡ, ಇಂಗ್ಲಿಷ್, ಹಾಗೂ ಉರ್ದು ಮಾಧ್ಯಮದಲ್ಲಿ 8-9-10 ನೇ ತರಗತಿಯಲ್ಲಿ ಓದುವ 378 ವಿದ್ಯಾರ್ಥಿಗಳಿದ್ದು, ಶಾಲಾ ಕೊಠಡಿಗಳ ಕೊರತೆ, ಗ್ರಂಥಾಲಯ, ಆಫೀಸ್ ರೂಂ ವ್ಯವಸ್ಥೆ ಇರುವುದಿಲ್ಲ. ನಾವು ಸಾಕಷ್ಟು ಬಾರಿ ಎಲ್ಲಾ ಶಾಸಕರ ಗಮನಕ್ಕೆ ತರುವಂತಹ ಕೆಲಸವನ್ನು ಮಾಡಿದ್ದು, ಇದುವರೆಗೂ ಯಾವುದೇ ರೀತಿಯ ಪ್ರಯೋಜನ ಆಗಿರುವುದಿಲ್ಲ. ಹಿರಿಯ ವಿದ್ಯಾರ್ಥಿಗಳು ಮಾಡುವ ಅಚಾತುರ್ಯಗಳಿಗೆ ಕಡಿವಾಣ ಹಾಕಿದ್ದು, ಈಗ ಸ್ವಲ್ಪ ಮಟ್ಟಿಗೆ ಸುಧಾರಣೆ ಕಂಡಿದೆ ಎಂದು ಶಿಕ್ಷಕ ಈಶಪ್ಪ ಬೂದಿಹಾಳ ತಿಳಿಸಿದರು.

# ನಗರದಲ್ಲಿ ಶ್ರೀ ಗಾಯತ್ರಿ ಹೋಮ : ಸರ್ವ ಭಕ್ತರಿಗೆ ಆಹ್ವಾನ

ದಾವಣಗೆರೆ, ಜು.10- ನಗರದ ಶ್ರೀ ಗಾಯತ್ರಿ ಪರಿವಾರದಿಂದ ಸಾರ್ವಜನಿಕವಾಗಿ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ, ಶ್ರೀ ಗಾಯತ್ರಿ ಹೋಮ ಹಮ್ಮಿಕೊಳ್ಳಲಾಗಿದೆ ಎಂದು ಪರಿವಾರದ ಅಧ್ಯಕ್ಷರಾದ ಡಾ. ಸುಶೀಲಮ್ಮ ತಿಳಿಸಿದ್ದಾರೆ. ಯಾವುದೇ ಜಾತಿ, ಮತ, ಲಿಂಗ ಭೇದವಿಲ್ಲದೇ ಈ ಅಧ್ಯಾತ್ಮ ಕಾರ್ಯಕ್ರಮದಲ್ಲಿ ಎಲ್ಲರೂ ಭಾಗವಹಿಸಬಹುದು. ಇದೇ ದಿನಾಂಕ 23 ರ ಭಾನುವಾರ ನಗರದ ಎಂ.ಸಿ.ಸಿ 'ಬಿ' ಬ್ಲಾಕ್‌ನ ಶ್ರೀ ಸುಕೃತೀಂದ್ರ ಕಲಾಮಂದಿರದಲ್ಲಿ ದಾವಣಗೆರೆ ಗೌಡ ಸಾರಸ್ವತ ಸಮಾಜದ ಸಹಯೋಗದಲ್ಲಿ ನಡೆಯಲಿರುವ ಈ ಸಮಾರಂಭದಲ್ಲಿ ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗೆ 9535737979, 9342441194, 9535854421, 9845277088, 9448979957 ಸಂಪರ್ಕಿಸಿ.

# ಮಲೇಬೆನ್ನೂರಿನಲ್ಲಿ ಹಡಪದ ಅಪ್ಪಣ್ಣ ಜಯಂತಿ

ಇಲ್ಲಿನ ಹಡಪದ ಅಪ್ಪಣ್ಣ ಸಮಾಜದ ವತಿಯಿಂದ ಇಂದು ಬೆಳಿಗ್ಗೆ 11 ಗಂಟೆಗೆ ಪಟ್ಟಣದ ಶ್ರೀ ಬಸವೇಶ್ವರ ಕಲ್ಯಾಣ ಮಂಟಪದಲ್ಲಿ ವಚನಕಾರ ಹಡಪದ ಅಪ್ಪಣ್ಣ ಅವರ 889ನೇ ಜಯಂತಿಯನ್ನು ಶ್ರೀ ಅನ್ನದಾನಿ ಭಾರತಿ ಸ್ವಾಮೀಜಿ ಅವರ ಸಾನ್ನಿಧ್ಯದಲ್ಲಿ ಹಾಗೂ ಸಮಾಜದ ಜಿಲ್ಲಾಧ್ಯಕ್ಷ ಶಶಿಧರ್, ತಾ. ಅಧ್ಯಕ್ಷ ಡಾ.ಉಮಾಪತಿ ಅವರ ಸಮ್ಮುಖದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸಮಾಜದ ಅಧ್ಯಕ್ಷ ಕೆ.ಪಿ.ನವೀನ್ ಕುಮಾರ್, ಉಪಾಧ್ಯಕ್ಷ ಅಮರೇಶ್, ಕಾರ್ಯದರ್ಶಿ ಕೆ.ಬಿ.ಮಂಜುನಾಥ್ ತಿಳಿಸಿದ್ದಾರೆ.

# ಹರಿಹರದಲ್ಲಿ ಗಣೇಶ ಉತ್ಸವ : ನಾಳೆ ಸಭೆ

ಹರಿಹರ, ಜು.10 - ಗಣೇಶ ಚತುರ್ಥಿ ಹಿನ್ನೆಲೆಯಲ್ಲಿ ಗಾಂಧಿ ಮೈದಾನದ ಶ್ರೀ ಸಾರ್ವಜನಿಕ ವಿನಾಯಕ ಸಂಘದಿಂದ ಗಣೇಶೋತ್ಸವ ಆಚರಿಸಲು ನಾಳೆ ಬುಧವಾರ ಸಂಜೆ 3.30ಕ್ಕೆ ರಚನಾ ಕ್ರೀಡಾ ಕ್ಲಬ್‌ನಲ್ಲಿ ಸಭೆ ಕರೆಯಲಾಗಿದೆ.


**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ**

ದಾವಣಗೆರೆ ವಿಭಾಗ, ದಾವಣಗೆರೆ

ಸಂಖ್ಯೆ: ಕರಾಸಾ/ದಾವಿ/ಸಂಚಾರ/ವಾಣಿಜ್ಯ/950/2023–24 ದಿನಾಂಕ: 07.07.2023

**ಇ–ಟೆಂಡರ್ / ಸಂಧಾನ ಪ್ರಕಟಣೆ ಸಂಖ್ಯೆ: 01/2023–24**

(ಬಸ್ ನಿಲ್ದಾಣಗಳ ಹೊರ ಆವರಣದ ಜಾಹೀರಾತುಗಳಿಗೆ ಪ್ಯಾಕೇಜ್ ಮಾದರಿಯಲ್ಲಿ)

ಕ.ರಾ.ರ.ಸಾ.ನಿಗಮದ, ದಾವಣಗೆರೆ ವಿಭಾಗದ ವ್ಯಾಪ್ತಿಯಲ್ಲಿ ಇರುವ, **ಮಲೆಬೆನ್ನೂರು** ಬಸ್ ನಿಲ್ದಾಣದ ಹೊರಭಾಗದಲ್ಲಿ ಜಾಹೀರಾತು ಅಳವಡಿಸಲು ಯೂನಿಫೋಲ್ಸ್, ಆರ್ಚ್ ಮತ್ತು ಹೋರ್ಡಿಂಗ್ಸ್ ಖಾಲಿ ಇದ್ದು, ಸದರಿ ಬಸ್ ನಿಲ್ದಾಣದ ಹೊರಭಾಗದ ಜಾಹೀರಾತು ಸ್ಥಳಗಳಿಗೆ ಪರವಾನಗಿದಾರರನ್ನು ಆಯ್ಕೆ ಮಾಡಲು ಇ–ಟೆಂಡರ್ (ಇ–ಪ್ರೊಕ್ಯೂರ್‌ಮೆಂಟ್) ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

**ಹರಿಹರ** ಬಸ್ ನಿಲ್ದಾಣದ ಹೊರಭಾಗದಲ್ಲಿ ಜಾಹೀರಾತು ಅಳವಡಿಸಲು ಯೂನಿಫೋಲ್ಸ್, ಹೋರ್ಡಿಂಗ್ಸ್ ಮತ್ತು ಆರ್ಚ್‌ಗಳು ಹಾಗೂ **ಜಗಳೂರು** ಬಸ್ ನಿಲ್ದಾಣದ ಹೊರಭಾಗದಲ್ಲಿ ಅಳವಡಿಸಲು ಹೋರ್ಡಿಂಗ್ಸ್‌ಗಳು ಖಾಲಿ ಇದ್ದು, ಸದರಿ ಬಸ್ ನಿಲ್ದಾಣದ ಹೊರ ಭಾಗದ ಜಾಹೀರಾತು ಸ್ಥಳಗಳಿಗೆ ಪರವಾನಗಿದಾರರನ್ನು ಆಯ್ಕೆ ಮಾಡಲು ಸಂಧಾನದ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಸದರಿ ಮಾಹಿತಿಯನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ "https://kppp.karnataka.gov.in" ಹಾಗೂ ನಿಗಮದ ವೆಬ್‌ಸೈಟ್ ksrtc.karnataka.gov.in ನಲ್ಲಿ ದಿ: 07.07.2023 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ ರಾ ರ ಸಾ ನಿಗಮ, ದಾವಣಗೆರೆ ವಿಭಾಗ–577 002 ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಂಪರ್ಕಿಸುವ ದೂರವಾಣಿ ಸಂಖ್ಯೆ: ವಿಭಾಗೀಯ ಸಂಚಾರ ಅಧಿಕಾರಿ–7760990452, ಸಹಾಯಕ ಸಂಚಾರ ಅಧೀಕ್ಷಕರು–7022030183.

ಸಹಿ/–

ವಾಸಾಸಂಇ/ಬೆಂ.ನಗರ/495/ಆಕಾರ್/2023–24

ವಿಭಾಗೀಯ ನಿಯಂತ್ರಣಾಧಿಕಾರಿ
ಕ ರಾ ರ ಸಾ ನಿಗಮ, ದಾವಣಗೆರೆ ವಿಭಾಗ, ದಾವಣಗೆರೆ

**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ**

ದಾವಣಗೆರೆ ವಿಭಾಗ, ದಾವಣಗೆರೆ

ಸಂ: ಕರಾಸಾ/ದಾವಿ/ಸಂಚಾರ/ವಾಣಿಜ್ಯ/953/2023–24 ದಿನಾಂಕ: 07.07.2023

**ಇ–ಟೆಂಡರ್ / ಮ್ಯಾನ್ಯುಯಲ್ ಟೆಂಡರ್ / ಸಂಧಾನ ಪ್ರಕಟಣೆ ಸಂಖ್ಯೆ: 02/2023–24**

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ದಾವಣಗೆರೆ ವಿಭಾಗದ ವ್ಯಾಪ್ತಿಗೆ ಬರುವ, **ತಾತ್ಕಾಲಿಕ ದಾವಣಗೆರೆ** ಬಸ್ ನಿಲ್ದಾಣದ ಜನರಲ್ ಮಳಿಗೆ ಸಂಖ್ಯೆ–1(ಪ.ಜಾ), 02(ಪ.ಪ), 03, 04, 05, ಉಪಹಾರ ಗೃಹ ಮತ್ತು ದ್ವಿ–ಚಕ್ರ ವಾಹನ ನಿಲ್ದಾಣಕ್ಕೆ ಪರವಾನಗಿದಾರರನ್ನು ಆಯ್ಕೆ ಮಾಡಲು **ಇ–ಟೆಂಡರ್** (ಇ–ಪ್ರೊಕ್ಯೂರ್‌ಮೆಂಟ್) ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

**ಜಗಳೂರು** ಬಸ್ ನಿಲ್ದಾಣದ ಜನರಲ್ ಮಳಿಗೆ ಸಂಖ್ಯೆ 01ಕ್ಕೆ ಮತ್ತು **ತಾತ್ಕಾಲಿಕ ದಾವಣಗೆರೆ** ಬಸ್ ನಿಲ್ದಾಣದ ನಾಣ್ಯಚಾಲಿತ ಮಾನವ ತೂಕದ ಯಂತ್ರಕ್ಕೆ (ವಿಕಲಚೇತನ), ಪರವಾನಗಿದಾರರನ್ನು ಆಯ್ಕೆ ಮಾಡಲು ಮ್ಯಾನ್ಯುಯಲ್ ಟೆಂಡರ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

**ಮಲೆಬೆನ್ನೂರು** ಬಸ್ ನಿಲ್ದಾಣದ ಜನರಲ್ ಮಳಿಗೆ ಸಂಖ್ಯೆ– 1 ಕ್ಕೆ ಹಾಗೂ ಹರಿಹರ ಬಸ್ ನಿಲ್ದಾಣದ ದ್ವಿ–ಚಕ್ರ ವಾಹನ ನಿಲ್ದಾಣಕ್ಕೆ ಪರವಾನಗಿದಾರರನ್ನು ಆಯ್ಕೆ ಮಾಡಲು ಸಂಧಾನ ಮೂಲಕ (ಮಾತುಕತೆ ಮೂಲಕ) ಅರ್ಜಿ ಆಹ್ವಾನಿಸಲಾಗಿದೆ.

ಸದರಿ ಮಾಹಿತಿಯನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in ಹಾಗೂ ನಿಗಮದ ವೆಬ್‌ಸೈಟ್ ksrtc.karnataka.gov.in ನಲ್ಲಿ ದಿನಾಂಕ: 08.07.2023ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ದಾವಣಗೆರೆ ವಿಭಾಗ – 577002 ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/–

ವಾಸಾಸಂಇ/ಬೆಂ.ನಗರ/496/ಆಕಾರ್/2023–24

ವಿಭಾಗೀಯ ನಿಯಂತ್ರಣಾಧಿಕಾರಿ
ಕ ರಾ ರ ಸಾ ನಿಗಮ, ದಾವಣಗೆರೆ ವಿಭಾಗ, ದಾವಣಗೆರೆ

**ಮಾನ್ಯ ಘನ 3ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ದಾವಣಗೆರೆ.**

ಓ.ಎಸ್ ನಂ : 50:2022

**ವಾದಿಯರು : 1) ವಿಜಯ್ ಕುಮಾರ್ ಬಿನ್ ಅಂಜಿನಪ್ಪ,** ವಯಸ್ಸು 25 ವರ್ಷ, **2) ಸುಮಾ ಬಿನ್ ಅಂಜಿನಪ್ಪ,** ವಯಸ್ಸು 31 ವರ್ಷ, **3) ಸೌಮ್ಯ ಬಿನ್ ಅಂಜಿನಪ್ಪ,** ವಯಸ್ಸು 26 ವರ್ಷ, 4) ಲಕ್ಷ್ಮೀ ಬಿನ್ ಅಂಜಿನೆಪ್ಪ, ವಯಸ್ಸು 23 ವರ್ಷ, **5) ತಿಪ್ಪಮ್ಮ ಕೋಂ ಅಂಜಿನಪ್ಪ,** ವಯಸ್ಸು 49 ವರ್ಷ, ವಾಸ: ನೀರ್ಥಡಿ ಗ್ರಾಮ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ, *ವಿರುದ್ಧ*

**ಪ್ರತಿವಾದಿಗಳು : 1) ಶ್ರೀಮತಿ ಸಾವಿತ್ರಮ್ಮ ಕೋಂ ಪರ್ವತಪ್ಪ ಯಾನೆ ಪರ್ವತಗಿರಿಯಪ್ಪ,** ವಯಸ್ಸು ಸುಮಾರು 60 ವರ್ಷ, **2) ಭರತ್ ಬಿನ್ ಪರ್ವತಪ್ಪ ಯಾನೆ ಪರ್ವತಗಿರಿಯಪ್ಪ,** ವಯಸ್ಸು ಸುಮಾರು 40 ವರ್ಷ, **3) ಶ್ರೀಮತಿ ವಾಣಿಶ್ರೀ ಕೋಂ ಪ್ರಕಾಶ** ವಯಸ್ಸು ಸುಮಾರು 35 ವರ್ಷ, ಎಲ್ಲರೂ 5ನೇ ಮೇನ್, 3ನೇ ಹಂತ, ಕೆ.ಹೆಚ್.ಬಿ. ಕಾಲೋನಿ, ಚಿತ್ರದುರ್ಗ.

**ಆದೇಶ 5 ನಿಯಮ 20 ಸಿ ಪಿ ಸಿ ಪ್ರಕಾರ ತಿಳುವಳಿಕೆ**

ಈ ಮೇಲ್ಕಂಡ ಕೇಸನ್ನು ವಾದಿಯು ಪ್ರತಿವಾದಿಯರ ಮೇಲೆ ಷೆಡ್ಯೂಲ್ ಆಸ್ತಿಯ ವಿಭಜನೆ ಮತ್ತು ಆಲಾಯಿದೆ ಸ್ವಾಧೀನಕ್ಕಾಗಿ ಹಾಕಿರುತ್ತಾರೆ. ಪ್ರತಿವಾದಿಯರು ಮೇಲ್ಕಂಡ ವಿಳಾಸದ ಖಾಯಂ ನಿವಾಸಿಯಾಗಿರುತ್ತಾರೆ. ಈ ಕೇಸಿನಲ್ಲಿ ಮೇಲ್ಕಂಡ ಪ್ರತಿವಾದಿಯರಿಗೆ ಕೋರ್ಟಿನಿಂದ ಸಮನ್ಸ್ ಹೋದಾಗ್ಯೂ ಉದ್ದೇಶ ಪೂರ್ವಕವಾಗಿ ಜಾರಿ ಮಾಡಿಸಿಕೊಂಡಿರುವುದಿಲ್ಲ.

ಈಗ ಪುನಃ ಕೋರ್ಟಿನವರು ಪತ್ರಿಕಾ ಪ್ರಕಟಣೆ ಮೂಲಕ ಮೇಲ್ಕಂಡ ಪ್ರತಿವಾದಿಯರಿಗೆ ಕೋರ್ಟ್ ಸಮನ್ಸ್ ಮತ್ತು ನೋಟೀಸು ಜಾರಿ ಮಾಡಲು ದಿನಾಂಕ 30-06-2023 ರಂದು ಆದೇಶ ಮಾಡಿರುತ್ತಾರೆ. ಈ ಕೇಸಿನ ಮುದ್ದತ್ತನ್ನು ದಿನಾಂಕ 11-08-2023 ಕ್ಕೆ ಸದರಿ ಪ್ರತಿವಾದಿಯರ ಹಾಜರಾತಿಗಾಗಿ ಇಟ್ಟಿದ್ದು ಇರುತ್ತದೆ. ಆದ್ದರಿಂದ ಮೇಲ್ಕಂಡ ಪ್ರತಿವಾದಿಯರು ಆ ದಿನ ಖುದ್ದಾಗಿಯಾಗಲೀ ಅಥವಾ ವಕೀಲರ ಮೂಲಕವಾಗಲೀ ಬೆಳಿಗ್ಗೆ 11 ಗಂಟೆಗೆ ನ್ಯಾಯಾಲಯಕ್ಕೆ ಹಾಜರಾಗತಕ್ಕದ್ದು. ತಪ್ಪಿದಲ್ಲಿ ಅವರ ಮೇಲೆ ಏಕತರ್ಫ ಆದೇಶ ಮಾಡಲಾಗುವುದು ಎಂದು ದಿನಾಂಕ 16-06-2023 ರಂದು ಆದೇಶ ಮಾಡಿರುತ್ತಾರೆ.

ಈ ತಿಳುವಳಿಕೆಯನ್ನು ಇದೇ 2023ನೇ ಇಸ್ವಿ ಜುಲೈ ಮಾಹೆ 4ನೇ ತಾರೀಖಿನಂದು ನ್ಯಾಯಾಲಯದ ಮುದ್ರೆಯೊಂದಿಗೆ ಹಾಗೂ ನನ್ನ ಸಹಿಯೊಂದಿಗೆ ನೀಡಲಾಗಿದೆ.

ದಿನಾಂಕ : 4-07-2023
ದಾವಣಗೆರೆ
**ಶ್ರೀ ಏಕನಾಥ. ಡಿ. ರಾಯ್ಕರ್**
ವಕೀಲರು, ದಾವಣಗೆರೆ.
**ಮೊ. ನಂ : 9844020566,** ಮನೆ ನಂ : 326, 2ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ.

**ನ್ಯಾಯಾಲಯದ ಆದೇಶದ ಮೇರೆಗೆ**
**ಶಿರಸ್ತೇದಾರರು**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ ನ್ಯಾಯಾಲಯ, ದಾವಣಗೆರೆ.

**IN THE COURT FO THE HON'BLE 1ST ADDL., SENIOR CIVIL JUDGE AND JMFC AT DAVANAGERE**

Ex., No. 04/2020

**Decree Holder :** SMT. Nagaratna ***verses***
**Judgment Debtor :** 1) Sri. Bheemachari S/o Eshwarappa, Aged about 51 years, R/o Mouneshwara Extension, Near Mouneshwara Temple, Nittuvalli, Davanagere. 2. SMT. VijayLaxmi W/o Udyakumar, Aged About 45 years, R/o 1st Main, 1st Cross, teachrs Colony Jalinagara, Davanagere. 3) Sri Bheemachari, S/o Eshwarappa, Aged About 55 Years, R/o Jalinagara, Davanagere. 4) Smt. Meenakshamma, W/o Yallappa, Aged About 48 Years, R/o Nittuvalli, Davangere.

**NOTICE UNDER ORDER-V RULE-20 OF C.P.C**

Whearas Decree Holder has filed the above petition against you addresses for Execution of decree passed in O.S No. 56/2014 (FDP No. 10/2017) before the Hon'ble 1st Addl., Senior Civil Judge and JMFC At Davanagere. You Judgment Debtors No. 1 to 4 are hereby directed to appear in his Court in Person or by Advocate on 18.08.2023 fore noon at 11.00 Am to defiend youself, failing which the appeal will be heard and determined in your absence.

Given Under my hand and seal of his Court on day of 10.07.2023.

**K.G.K. SWAMY**
**S.G. MAHAVEER**
Advocates,
'Law Solutions' # 417/4A,4B, 1st Floor, Benaka Plaza, Opp. Janatavani office, Dixith Road, K.B. Extension, Davanagere-1.

By Order Of the Court
**Chief Ministerial Officer,**
Senior Civil Judge & JMFC Court Davanagere.

# ಹರಿಹರದಲ್ಲಿ ಅಕ್ರಮ ಪ್ಲಾಸ್ಟಿಕ್ ಬಳಕೆ : ದಂಡ



ಹರಿಹರ, ಜು.10- ನಗರಸಭೆಯ ಪೌರಾಯುಕ್ತ ಐಗೂರು ಬಸವರಾಜ್ ಅವರ ಸೂಚನೆ ಮೇರೆಗೆ ಆರೋಗ್ಯ ಇಲಾಖೆಯ ಸಿಬ್ಬಂದಿಗಳು ನಗರದಲ್ಲಿರುವ ಅಂಗಡಿಯವರು ಅಕ್ರಮವಾಗಿ ಬಳಸುತ್ತಿದ್ದ ಪ್ಲಾಸ್ಟಿಕ್ ಕ್ಯಾರಿ ಬ್ಯಾಗ್‌ಗಳನ್ನು ವಶಪಡಿಸಿಕೊಂಡು 4500 ರೂ. ದಂಡವನ್ನು ಹಾಕಿದ್ದಾರೆ.

ಈ ವೇಳೆ ಆರೋಗ್ಯ ಅಧಿಕಾರಿ ರವಿಪ್ರಕಾಶ್ ಮಾತನಾಡಿ, ನಗರದಲ್ಲಿ ಬಹುತೇಕ ಹೋಟೆಲ್, ಬೇಕರಿ, ಬಟ್ಟೆ, ತರಕಾರಿ ವ್ಯಾಪಾರಸ್ಥರು ಪ್ಲಾಸ್ಟಿಕ್ ಕ್ಯಾರಿ ಬ್ಯಾಗ್ ಬಳಕೆ ಮಾಡುತ್ತಿದ್ದು, ಅವುಗಳನ್ನು ಬಳಸದಂತೆ ಸಾಕಷ್ಟು ಬಾರಿ ಎಚ್ಚರಿಕೆಯನ್ನು ಕೊಟ್ಟಿದ್ದರೂ ಸಹ, ಪ್ಲಾಸ್ಟಿಕ್ ಕ್ಯಾರಿ ಬ್ಯಾಗ್ ಬಳಕೆಯನ್ನು ನಿಲ್ಲಿಸದ ಕಾರಣ ಇಂದು ಅಂಗಡಿಗಳಿಗೆ ತೆರಳಿ ಅವುಗಳನ್ನು ವಶಪಡಿಸಿಕೊಂಡು ದಂಡದ ಹಣವನ್ನು ಅವರ ಮೊಬೈಲ್ ಮೂಲಕ ನೇರವಾಗಿ ಸರ್ಕಾರದ ಖಜಾನೆಯ ಖಾತೆಗೆ ಜಮಾ ಮಾಡಲಾಗಿದೆ.

ಇದರಿಂದಾಗಿ ವ್ಯಾಪಾರಸ್ಥರಿಗೆ ನಮ್ಮ ಮೇಲೆ ಯಾವುದೇ ರೀತಿಯ ಅನುಮಾನ ವ್ಯಕ್ತಪಡಿಸುವುದಕ್ಕೆ ಅವಕಾಶ ಇರದಂತಾಗಿದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ದಫೇದಾರ್ ಹನುಮಂತಪ್ಪ, ವಿರೂಪಾಕ್ಷ, ಮಂಜು, ಶಿವಕುಮಾರ್, ಮಂಜುನಾಥ್ ಇತರರು ಹಾಜರಿದ್ದರು.

# ಪೊಲೀಸ್ ಇಲಾಖೆಯಿಂದ ಸಸಿ ನೆಡುವ ಕಾರ್ಯಕ್ರಮ



ದಾವಣಗೆರೆ,ಜು.10- ನಗರದ ಪೊಲೀಸ್ ವಸತಿ ಗೃಹ, ಡಿ.ಎ.ಆರ್. ಕಛೇರಿ ಆವರಣದಲ್ಲಿ ಸಹಾಯಕ ಪೊಲೀಸ್ ಅಧೀಕ್ಷಕರಾದ ಶ್ರೀಮತಿ ಕನ್ನಿಕಾ ಸಿಕ್ರಿವಾಲ್ ಹಾಗು ಡಿವೈಎಸ್ಪಿ ಮಲ್ಲೇಶ್. ಡಿ, ಪ್ರಕಾಶ್ ಪಿ.ಬಿ. ಉಪಸ್ಥಿತಿಯಲ್ಲಿ ಮಕ್ಕಳೊಂದಿಗೆ ಸಸಿ ನೆಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಮಕ್ಕಳ ಕೈಯಲ್ಲಿ ಸಸಿ ನಡೆಸಿ ಅವುಗಳ ಪೋಷಣೆ ಮಾಡುವ ಬಗ್ಗೆ ಪ್ರೋತ್ಸಾಹ ನೀಡಲಾಯಿತು.

# ಒಂದು ಭೂಮಿ, ಒಂದು ಕುಟುಂಬ, ಒಂದೇ ಭವಿಷ್ಯ

ಪ್ರತಿವರ್ಷ ಜುಲೈ 11ರಂದು ವಿಶ್ವದಾದ್ಯಂತ ಈ ದಿನವನ್ನು ಅಂತರರಾಷ್ಟ್ರೀಯ ಜನಸಂಖ್ಯಾ ದಿನವನ್ನಾಗಿ ಆಚರಿಸಲಾ ಗುವುದು. ಜನಸಂಖ್ಯಾ ಸ್ಫೋಟದಿಂದ ಆಗುವ ಸಮಸ್ಯೆಗಳು, ಅವುಗಳ ನಿವಾರಣೆಗಾಗಿ ಕೈಗೊಳ್ಳುವ ಕ್ರಮಗಳ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಉದ್ದೇಶ ಈ ದಿನ.

1987 ರ ಜುಲೈ 11ರಂದು ವಿಶ್ವದ ಜನಸಂಖ್ಯೆ 5 ಬಿಲಿಯನ್ (500 ಕೋಟಿ) ತಲುಪಿದ್ದರ ನೆನಪಿಗಾಗಿ ವಿಶ್ವಸಂಸ್ಥೆ ಈ ದಿನವನ್ನು ವಿಶ್ವ ಜನಸಂಖ್ಯಾ ದಿನವನ್ನಾಗಿ ಆಚರಿಸಲು ಘೋಷಿಸಿದ ದಿನ ಇದು. ಈ ದಿನ ಪ್ರತಿಯೊಬ್ಬ ಪ್ರಜೆ, ಜನಸಂಖ್ಯಾ ಸ್ಫೋಟದಿಂದಾಗುವ ಸಮಸ್ಯೆಗಳಲ್ಲಿ ಲಿಂಗ ಸಮಾನತೆ, ಕುಟುಂಬ ಯೋಜನೆಯ ಮಹತ್ವ, ಬಡತನ, ಅಜ್ಞಾನ, ಮಾನವ ಹಕ್ಕುಗಳ ಬಗ್ಗೆ, ಬಾಣಂತಿಯರ ಹಾಗೂ ನವಜಾತ ಶಿಶುಗಳ ಆರೋಗ್ಯದ ಬಗ್ಗೆ ಚಿಂತಿಸುವ ದಿನ ಇದಾಗಿದೆ.

ಈ ದಿನದಂದು ಹೆಚ್ಚುತ್ತಿರುವ ವಿಶ್ವ ಜನಸಂಖ್ಯೆಯ ಕಡೆಗೆ ಜಾಗತಿಕ ಗಮನ ಸೆಳೆಯುವ ಗುರಿ ಹೊಂದಬೇಕಾಗಿದೆ. ನಮ್ಮ ನೈಸರ್ಗಿಕ ಸಂಪನ್ಮೂಲಗಳು, ಹವಾಮಾನ, ಮಾಲಿನ್ಯ ಮತ್ತು ಒಟ್ಟಾರೆ ಗ್ರಹದ ಮೇಲೆ ಬೀರುವ ಪರಿಣಾಮವಾಗಿದೆ. ಪ್ರಸ್ತುತ ವಿಶ್ವ ಜನಸಂಖ್ಯೆಯು 7.9 ಶತಕೋಟಿಯ ಸಮೀಪದಲ್ಲಿದೆ. ನಾವು ಈ ಲೇಖನ ಓದುತ್ತಿರುವಂತೆ ಪ್ರತಿ ಸೆಕೆಂಡಿಗೆ ಮಾರ್ಗವನ್ನು ಹುಡುಕುವ ತುರ್ತು ಅವಶ್ಯಕತೆ ಇದೆ.

ವಿಶ್ವ ಜನಸಂಖ್ಯೆಯ ಬಗ್ಗೆ ನಾವು ತಿಳಿದುಕೊಳ್ಳಬೇಕಾದ ಕೆಲವು ಆಘಾತಕಾರಿ ಸಂಗತಿಗಳು ಇಲ್ಲಿವೆ

★ 1800ರ ದಶಕದಲ್ಲಿ ವಿಶ್ವದ ಜನಸಂಖ್ಯೆಯು ಒಂದು ಬಿಲಿಯನ್ ಆಗಿತ್ತು. ಈಗ ಪ್ರತಿ 12-15 ವರ್ಷಗಳಿಗೊಮ್ಮೆ ಒಂದು ಶತಕೋಟಿಯನ್ನು ಸೇರಿಸಲಾಗುತ್ತದೆ.

★ 2024ರ ವೇಳೆಗೆ ಭಾರತವು ಚೀನಾ ಬಿಟ್ಟು ವಿಶ್ವದ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ದೇಶವಾಗಲಿದೆ.

★ ಈ ಪ್ರಸ್ತುತ ಬೆಳವಣಿಗೆ ಗಮನಿಸಿದರೆ, 2050ರ ಹೊತ್ತಿಗೆ ಬದುಕುಳಿಯಲು 3 ಭೂಮಿಗಳು ಬೇಕಾಗುತ್ತವೆ.

★ ನಮ್ಮ ಜನಸಂಖ್ಯೆಯು 1970ರಲ್ಲಿದ್ದಂತ ಎರಡು ಪಟ್ಟು ಹೆಚ್ಚಾಗಿದೆ.

★ ಜನಸಂಖ್ಯಾ ಸ್ಫೋಟವು ಪರಿಸರ ಹಾನಿಯ ಪ್ರಾಥಮಿಕ ಮೂಲವಾಗಿದೆ.

★ ವೇಗದ ಜನಸಂಖ್ಯೆಯ ಬೆಳವಣಿಗೆ ಮತ್ತು ತಾಂತ್ರಿಕ ಆವಿಷ್ಕಾರಗಳು, ನೈಸರ್ಗಿಕ ಅವ್ಯವಸ್ಥೆಯನ್ನು ಸೃಷ್ಟಿಸಿದೆ.



## ಇಂದು ವಿಶ್ವ ಜನಸಂಖ್ಯಾ ದಿನಾಚರಣೆ

★ ಮನುಷ್ಯನಿಗೆ ಜೀವನಾಧಾರವನ್ನು ಉತ್ಪಾದಿಸುವ ಭೂಮಿಯಲ್ಲಿರುವ ಶಕ್ತಿಗಿಂತ ಜನಸಂಖ್ಯೆಯ ಶಕ್ತಿಯು ಅನಿರ್ದಿಷ್ಟವಾಗಿ ದೊಡ್ಡದಾಗಿದೆ.

★ ನಾವು ವಿಶ್ರಮಿಸಿಕೊಳ್ಳುವ ಸಮಯ ಕಳೆದುಹೋಗಿವೆ. ನಮ್ಮ ಮುಂಬರುವ ಪೀಳಿಗೆಗೆ ಸಹಾಯ ಮಾಡಲು ಜನಸಂಖ್ಯೆಯ ಬೆಳವಣಿಗೆಯನ್ನು ನಿಯಂತ್ರಿಸುವ ಅನಿವಾರ್ಯತೆಯಿದೆ.

★ಆರೋಗ್ಯದ ಸುಧಾರಣೆ, ಮಹಿಳೆಯರ ಸಬಲೀಕರಣದಿಂದ ಜನಸಂಖ್ಯೆಯ ಬೆಳವಣಿಗೆಯು ಕಡಿಮೆಯಾಗುತ್ತದೆ.

★ ಜನಸಂಖ್ಯೆಯ ಹೆಚ್ಚಳದ ಪರಿಣಾಮದಿಂದ ದರದೊಂದಿಗೆ ಜನಸಂಖ್ಯೆಯು ಆಹಾರದ ಮೂಲಭೂತ ಹಕ್ಕು ಬೆಳೆಯುತ್ತಿದೆ.

★ ಶಿಕ್ಷಣವೂ ಒಂದು ದಿನ ಐಷಾರಾಮಿ ಆಗಬಹುದು.

ಈ ವರ್ಷ ಮಹೋತ್ಸವದ ಸಂದರ್ಭದಲ್ಲಿ ಪ್ರತಿಯೊಬ್ಬರೂ ಸಂತೋಷ ಮತ್ತು ಸಮೃದ್ಧಿ ಸಮಾಜ ನಿರ್ಮಿಸಲು, ಕುಟುಂಬ ಯೋಜನೆಯನ್ನು ಪಾಲಿಸುವ ಪಣ ತೊಡಬೇಕಾಗಿದೆ. ಪ್ರತಿಯೊಬ್ಬರಿಗೂ ಕುಟುಂಬ ಯೋಜನೆ, ಲಿಂಗ ಸಮಾನತೆ, ಬಾಲ್ಯವಿವಾಹ, ಮಾನವ ಹಕ್ಕುಗಳು, ಆರೋಗ್ಯದ ಹಕ್ಕು, ಶಿಶು ಮತ್ತು ಮಹಿಳೆಯರ ಆರೋಗ್ಯ ಬಗ್ಗೆ ಅರಿವು ಮೂಡಿಸಬೇಕಿದೆ.

ವಿಶ್ವ ಜನಸಂಖ್ಯಾ ದಿನಾಚರಣೆ-ಸಂತಾನೋತ್ಪತ್ತಿ ಪ್ರಕ್ರಿಯೆ ಆರೋಗ್ಯದ ಮೇಲೆ ಹೇಗೆ ಪರಿಣಾಮ ಬೀರುವುದರ ಬಗ್ಗೆ ಅಭಿವೃದ್ಧಿ ಯೋಜನೆಗಳಿಗೆ, ಕಾರ್ಯಕ್ರಮಗಳಿಗೆ ಫೋಕಸ್ ಮಾಡಬೇಕಿದೆ. ಜನಸಂಖ್ಯೆಯಿಂದ ಹೆಚ್ಚಿದ ಬಡತನ, ಬಡತನದಿಂದ ಅಜ್ಞಾನ, ಅಜ್ಞಾನದಿಂದ ಅವ್ಯವಸ್ಥೆಯ ಬಗ್ಗೆ ಜಾಗೃತಿ ಮೂಡಿಸಬೇಕಿದೆ. ಮಾನವ ಸಂಪನ್ಮೂಲ ಎಲ್ಲಾ ನೈಸರ್ಗಿಕ ಸಂಪನ್ಮೂಲಗಳಿಗಿಂತ ಹೆಚ್ಚಿನ ಶಕ್ತಿ ಹೊಂದಿದ್ದಾದರೂ, ಅತಿಯಾದ ಜನಸಂಖ್ಯೆ ವಿಶ್ವಕ್ಕೆ ಶಾಪವಾಗಿ ಪರಿಣಮಿಸಿದೆ. ಪ್ರತಿಯೊಬ್ಬ ಮನುಷ್ಯ ಶಿಕ್ಷಣ ಪಡೆದು, ಸಂಸ್ಕಾರವಂತನಾಗಿ, ದುಡಿಮೆ ಮಾಡಿ ತಾನು, ತನ್ನ ಕುಟುಂಬ, ತನ್ನ ಸಮಾಜ, ತನ್ನ ದೇಶ ಎಂದು ಭಾವಿಸಿ, ತಾನೂ ಅಭಿವೃದ್ಧಿ ಹೊಂದುತ್ತಾ, ದೇಶವನ್ನೂ ಅಭಿವೃದ್ಧಿ ಪಥದತ್ತ ನಡೆಸಿದರೆ ಮಾನವ ಸಂಪನ್ಮೂಲ ಪರಿಸರಕ್ಕೆ ವರವಾಗಬಹುದು.

ಇದೆಲ್ಲರ ನಡುವೆ, ಆಡಳಿತದ ಚುಕ್ಕಾಣಿ ಹಿಡಿದ ಸರ್ಕಾರ ಜನಸಂಖ್ಯೆ ನಿಯಂತ್ರಿಸಲು ತಮ್ಮದೇ ಆದ ಕ್ರಮ ತೆಗೆದುಕೊಳ್ಳಲಿ.

ಬಿಟ್ಟಿಯಾಗಿ, ಪುಕ್ಕಟೆಯಾಗಿ ಏನನ್ನೂ ಕೊಡದೇ, 6 ರಿಂದ 14 ವರ್ಷ ವಯಸ್ಸಿನ ಪ್ರತಿ ಮಗುವಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ಸಿಗುವಂತಾಗಲಿ. ಆರ್‌ಟಿಇ ಸೀಟುಗಳ ಅಡಿಯಲ್ಲಿ ಶಿಕ್ಷಣ ಬಡತನ ರೇಖೆಗಿಂತ ಕಡಿಮೆ ಇರುವವರಿಗೆ ಮಾತ್ರ ಸಿಗುವ ವ್ಯವಸ್ಥೆ ರೂಪುಗೊಳ್ಳಲಿ. ಓದಿದ ನಿರುದ್ಯೋಗಿಗಳಿಗೆ ಸರ್ಕಾರ ಯಾವುದಾದರೂ ದುಡಿಯುವ ಕೆಲಸ ಕೊಡಲಿ. ಇಂತಹ ಉದ್ಯೋಗ ಸೃಷ್ಟಿ ಮಾಡುವಲ್ಲಿ ಸರ್ಕಾರ ಗಮನ ಹರಿಸಲಿ. ಯಾವ ದಂಪತಿಗೆ ಒಂದು ಮಗು ಇದೆಯೋ ಅವರಿಗೆ ಮಾತ್ರ ಸರ್ಕಾರಿ ನೌಕರಿ ಲಭಿಸುವ ಯೋಜನೆ ರೂಪುಗೊಳ್ಳಲಿ. ಕುಟುಂಬ ಯೋಜನೆ ಕಡ್ಡಾಯವಾಗಲಿ.

ಏಕೆಂದರೆ, ಪ್ರಪಂಚದ ಎಲ್ಲಾ ಸಮಸ್ಯೆಗಳಿಗೆ ಮೂಲ ಜನಸಂಖ್ಯಾ ಬೆಳವಣಿಗೆ. ಇದನ್ನು ಕಡೆಗಣಿಸಿ, ನಿರ್ಲಕ್ಷಿಸಿದರೆ ಮುಂದೊಂದು ದಿನ ನಿಂತು ನಿದ್ರಿಸುವ ಪರಿಸ್ಥಿತಿ ಎದುರಿಸಬೇಕಾಗುತ್ತದೆ. ಸರ್ಕಾರಿ ನೌಕರಿಗೆ ಸಿಗುವ ಎಲ್ಲಾ ಅರ್ಹತೆಗಳ ಜೊತೆಗೆ ಒಂದು ದಂಪತಿಗೆ ಒಂದು ಮಗು ಎಂಬ ನಿಯಮದ ವ್ಯವಸ್ಥೆ ರೂಪುಗೊಂಡರೆ ಉತ್ತಮವಲ್ಲವೇ? ಚೀನಾದಲ್ಲಿ 2-2ಕ್ಕಿಂತ ಹೆಚ್ಚು ಮಕ್ಕಳಾದರೆ ಕಂಡಲ್ಲಿ ಗುಂಡು ಜಾರಿಗೆ ಬಂದಿರುವ ನಿಯಮ ನಮ್ಮಲ್ಲಿ ಬೇಕಾ?



- ಡಾ. ಅನಿತಾ ಹೆಚ್. ದೊಡ್ಡಗೌಡರ್, 99021 98655

# ರಸಪ್ರಶ್ನೆ ಸ್ಪರ್ಧೆ : ತೇಜಸ್, ಯುವರಾಜ್‌ಗೆ ದ್ವಿತೀಯ



ದಾವಣಗೆರೆ, ಜು. 10- ರಾಯಚೂರಿನಲ್ಲಿ ಇತ್ತೀಚಿಗೆ ವೈದ್ಯಕೀಯ ವಿದ್ಯಾರ್ಥಿಗಳಿಗಾಗಿ ಏರ್ಪಡಿಸಿದ್ದ ರಾಜ್ಯಮಟ್ಟದ ಸೈಕ್ರಿಯಾಟ್ರಿ ರಸಪ್ರಶ್ನೆ ಸ್ಪರ್ಧೆಯಲ್ಲಿ ನಗರದ ಎಸ್.ಎಸ್. ವೈದ್ಯಕೀಯ ಕಾಲೇಜು ಹಾಗೂ ಸಂಶೋಧನಾ ಕೇಂದ್ರದ ಅಂತಿಮ ವರ್ಷದ ವಿದ್ಯಾರ್ಥಿಗಳಾದ ಎಂ. ತೇಜಸ್ ಹಾಗೂ ಎಸ್.ಪಿ. ಯುವರಾಜ್ ದ್ವಿತೀಯ ಸ್ಥಾನ ಪಡೆದಿದ್ದಾರೆ.

ದಕ್ಷಿಣ ವಲಯ ಮಟ್ಟದ ಸ್ಪರ್ಧೆಯಲ್ಲಿ ಕರ್ನಾಟಕವನ್ನು ಪ್ರತಿನಿಧಿಸಲು ಅರ್ಹರಾಗಿದ್ದಾರೆ.

ವಿಜೇತರನ್ನು ಸಂಸ್ಥೆಯ ಪೋಷಕರಾದ ಡಾ. ಶಾಮನೂರು ಶಿವಶಂಕರಪ್ಪ, ಎಸ್.ಎಸ್. ಮಲ್ಲಿಕಾರ್ಜುನ್, ಬಾಪೂಜಿ ವಿದ್ಯಾಸಂಸ್ಥೆ ಸದಸ್ಯರಾದ ಪ್ರಭಾ ಮಲ್ಲಿಕಾರ್ಜುನ್, ಪ್ರಾಂಶುಪಾಲರಾದ ಡಾ. ಬಿ.ಎಸ್. ಪ್ರಸಾದ್, ನಿರ್ದೇಶಕ ಡಾ. ಅರುಣ್ ಕುಮಾರ್ ಅಜ್ಜಪ್ಪ, ಉಪ ಪ್ರಾಂಶುಪಾಲರಾದ ಡಾ. ಶಶಿಕಲಾ ಕೃಷ್ಣಮೂರ್ತಿ ಅಭಿನಂದಿಸಿದ್ದಾರೆ. ಮಾನಸಿಕ ವಿಭಾಗದ ಮುಖ್ಯಸ್ಥ ಡಾ. ಮೃತ್ಯುಂಜಯ, ಸಹ ಪ್ರಾಧ್ಯಾಪಕ ಡಾ. ಮೃನಾಲ್ ಶೇಕ್, ಕ್ಲಿನಿಕಲ್ ಸೈಕಾಲಜಿಸ್ಟ್ ಡಾ.ಹೆಚ್.ಎನ್. ಆಶಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದ್ದರು.

# ಉಳುಪಿನಕಟ್ಟೆಯಲ್ಲಿ ಇಂದು ಪ್ರಬಂಧ ಸ್ಪರ್ಧೆ

ವಿಶ್ವ ಜನಸಂಖ್ಯಾ ದಿನದ ಅಂಗ ವಾಗಿ ಆನಗೋಡು ಸಮೀಪದ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ, ಉಳುಪಿ ನಕಟ್ಟೆಯಲ್ಲಿ ಇಂದು ಬೆಳಗ್ಗೆ 10ಕ್ಕೆ ಪ್ರಬಂಧ ಸ್ಪರ್ಧೆ ಏರ್ಪಡಿಸಲಾಗಿದೆ. ಜಿಲ್ಲೆಯ ಎಲ್ಲಾ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ 'ಭಾರತದ ಜನಸಂಖ್ಯಾ ಹೆಚ್ಚಳಕ್ಕೆ ಕಾರಣಗಳು, ಪರಿಣಾಮಗಳು ಮತ್ತು ಅದಕ್ಕೆ ಪರಿಹಾರೋಪಾಯಗಳು' ಎಂಬ ವಿಷಯದ ಕುರಿತು ಪ್ರಬಂಧ ಸ್ಪರ್ಧೆ ನಡೆಸಲಾಗುತ್ತದೆ ಎಂದು ಕೇಂದ್ರದ ಉಪ ನಿರ್ದೇಶಕರು ತಿಳಿಸಿದ್ದಾರೆ.

# ಎಐಡಿವೈಓ ಸಂಸ್ಥಾಪನಾ ದಿನಾಚರಣೆ ಸೂಕ್ತಿ ಪ್ರದರ್ಶನ, ಪುಸ್ತಕ ಮಾರಾಟ



ದಾವಣಗೆರೆ, ಜು. 10- ಎಐಡಿವೈಓ ಸಂಸ್ಥಾಪನಾ ದಿನಾಚರಣೆ ಅಂಗವಾಗಿ ನಗರದ ಸೂಕ್ತಿ ಪ್ರದರ್ಶನ ಹಾಗೂ ಪುಸ್ತಕ ಮಾರಾಟವನ್ನು ಹಮ್ಮಿಕೊಳ್ಳಲಾಗಿತ್ತು.

ಸಂಘಟನೆಯ ಜಿಲ್ಲಾ ಸಂಚಾಲಕ ಪರಶುರಾಮ್ ಮಾತನಾಡಿ, ಸಂಘಟನೆ ಸ್ಥಾಪನೆಯಾಗಿ 58 ವರ್ಷಗಳು ಕಳೆದಿವೆ. ಇವತ್ತಿನವರೆಗು ಹೋರಾಟದ ಹಾದಿಯಲ್ಲೇ ಸಾಗುತ್ತಾ ಯುವಜನರನ್ನು ಅನ್ಯಾಯದ ವಿರುದ್ಧ ಹೋರಾಟಕ್ಕೆ ಅಣಿಗೊಳಿಸಲಾಗುತ್ತಿದೆ ಎಂದರು.

ಸ್ವಾತಂತ್ರ್ಯ ಹೋರಾಟದ ಕ್ರಾಂತಿಯ ಕಿಡಿಗಳಾದ ಭಗತ್‌ಸಿಂಗ್, ನೇತಾಜಿ, ಸೂರ್ಯಸೇನ್ ಅವರ ತ್ಯಾಗ, ಬಲಿದಾನ, ಆಶೋತ್ತರ ಎತ್ತಿಹಿಡಿಯಲು ಸಂಘಟನೆ ಕಟ್ಟಲಾಯಿತು ಎಂದು ಹೇಳಿದರು.

ಮಾರ್ಕ್ಸ್‌ವಾದಿ ಚಿಂತಕ ಶಿವದಾಸ್ ಘೋಷ್ ಅವರು ಕಟ್ಟಿದ ಯುವ ಸಂಘಟನೆಯನ್ನು ಉನ್ನತ ನೀತಿ, ನೈತಿಕತೆ ಮತ್ತು ಸಂಸ್ಕೃತಿ ಹಾದಿಯಲ್ಲಿ ಬೆಳೆಸಿದರು ಎಂದರು.

ಯುವಜನರ ಚಳವಳಿಗೆ ಬೇಕಾದ ಸಮಾಜವಾದಿ ವಿಚಾರವನ್ನು ಬಿಟ್ಟು ಹೋಗಿದ್ದಾರೆ. ಹಾಗಾಗಿ ನಾವು ಜಾತಿ ತಾರತಮ್ಯ ದೂರವಿರಿಸಿ ಬಡತನ, ನಿರುದ್ಯೋಗ, ಬೆಲೆ ಏರಿಕೆ, ಸಾಂಸ್ಕೃತಿಕ ಅಧಃಪತನ, ಮಹಿಳೆಯರ ಮೇಲಿನ ದೌರ್ಜನ್ಯ ಇತರೆ ಅನ್ಯಾಯಗಳ ವಿರುದ್ಧ ಯುವಕರು ಸಿಡಿದೆದ್ದು ಹೋರಾಟಗಳನ್ನು ಕಟ್ಟಲು ಮುಂದಾಗಬೇಕು ಎಂದು ಕರೆ ನೀಡಿದರು.

ಸಂಘಟನೆಯ ಪದಾಧಿಕಾರಿಗಳಾದ ಹರಿಪ್ರಸಾದ್, ಅನಿಲ್ ಕುಮಾರ್, ರಾಜು, ದಿಲೀಪ್, ಚೇತನ್ ಹಾಗೂ ಯುವಕರು-ಸಾರ್ವಜನಿಕರು ಭಾಗವಹಿಸಿದ್ದರು.

# ಕನ್ನಡ ಪ್ರವೇಶ, ರತ್ನ, ಕಾವ, ಜಾಣ ಪರೀಕ್ಷೆಗಳಿಗೆ ಅರ್ಜಿ

ದಾವಣಗೆರೆ, ಜು.10- ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ 2023-24ನೇ ಸಾಲಿನ ಕನ್ನಡ ಪ್ರವೇಶ, ಕಾವ, ಜಾಣ ಹಾಗೂ ರತ್ನ ಪರೀಕ್ಷೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಪರೀಕ್ಷಾ ನಿಯಮಾವಳಿ ಹಾಗೂ ಅರ್ಜಿಯನ್ನು ರೂ.25 ಶುಲ್ಕ ಪಾವತಿಸುವ ಮೂಲಕ ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನ ಮಾರಾಟ ಮಳಿಗೆಯಲ್ಲಿ ಅಥವಾ www.kasapa.in ಮೂಲಕ ಪಡೆದು ಆಗಸ್ಟ್ 31 ರೊಳಗಾಗಿ ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು ಹೆಸರಿಗೆ ರೂ.30 ಮನಿಯಾರ್ಡರ್ ಮಾಡಿದರೆ ಅರ್ಜಿಯನ್ನು ತಾವು ನೀಡಿರುವ ವಿಳಾಸಕ್ಕೆ ಅಂಚೆ ಮೂಲಕ ಕಳುಹಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಗೌರವ ಕಾರ್ಯದರ್ಶಿ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು ದೂ.080-26612991, 22423867, 26623584ಗೆ ಸಂಪರ್ಕಿಸಬಹುದು.


**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು.
99863 61250
80730 24690

**ಬೆಂಗಳೂರಲ್ಲಿ ಕಮರ್ಷಿಯಲ್ ಸೈಟು, ಬಿಲ್ಡಿಂಗ್ ಮಾರಾಟಕ್ಕಿವೆ**
ಮಲ್ಲೇಶ್ವರಂ ಪಶ್ಚಿಮ-ದಕ್ಷಿಣ ಕಾರ್ನರ್ 150x180, ಪಶ್ಚಿಮ 80x100, ಜಯನಗರ ( South end circle) ಉತ್ತರ 80x120, 4th Block ಉತ್ತರ 40x60 ( 3 floor builnding)
ಐಗೂರು ವಿಜಯಕುಮಾರ್ : 99457 02495
BR Nagaraj : 90083 08163

**ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ ಸೈಟುಗಳು ಮಾರಾಟಕ್ಕಿವೆ**
40x60 East, 20x48 West, 30x50 South, 30x40 West
40 ಅಡಿ ರೋಡಿಗಿದೆ. ಪಾರ್ಕ್ ಎದುರುಗಡೆ ಇದೆ.
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಸೈಟ್ ಮಾರಾಟಕ್ಕೆ (KHB)**
ಕರ್ನಾಟಕ ಗೃಹ ಮಂಡಳಿ
20X30 ಪೂರ್ವ, 20X30 ಉತ್ತರ, 40X60 ದಕ್ಷಿಣ, 40X60 ಪಶ್ಚಿಮ, 50X80 ಉತ್ತರ, 30X50 ಪಶ್ಚಿಮ, 40X60 ಪೂರ್ವ, 30X50 ಪೂರ್ವ.
ಕಿರಣ್ ಭೂಸನೂರ್ (ಏಜೆಂಟ್)
97315-63409

**ಹೆಲ್ಪರ್ ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಹೆಲ್ಪರ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ :
88846 75884, 98457 75768

**ಮನೆಗಳು ಬಾಡಿಗೆಗೆ ಇವೆ**
1BHK ಗ್ರೌಂಡ್ ಫ್ಲೋರ್ ಮತ್ತು 2BHK ಫಸ್ಟ್ ಫ್ಲೋರ್ ಮನೆಗಳು ಅಶೋಕ ಟಾಕೀಸ್ ಹತ್ತಿರದ ಟಿ.ಸಿ. ಲೇಔಟ್‌ನಲ್ಲಿ ಬಾಡಿಗೆಗೆ ಇವೆ.
94485 34147, 79758 46679

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಸೈಟುಗಳು ದೊರೆಯುತ್ತವೆ**
ಡಾಲರ್ಸ್ ಕಾಲೋನಿ ಬನಶಂಕರಿ ಬಡಾವಣೆ, ಶಕ್ತಿನಗರ, ಡಿಸಿಎಂ, ಜಯನಗರ ಹಾಗೂ ಇತರೆ ಬಡಾವಣೆಗಳಲ್ಲಿ 30x40, 30x50 ಸೈಟುಗಳು & ಕಮರ್ಷಿಯಲ್ ಸೈಟುಗಳು, ಜಮೀನುಗಳು ಉತ್ತಮ ದರದಲ್ಲಿ ದೊರೆಯುತ್ತವೆ.
97315 12365

**ಶಿವಪಾರ್ವತಿ ಲೇ ಔಟ್‌ನಲ್ಲಿ ಸೈಟುಗಳು ಮಾರಾಟಕ್ಕಿವೆ**
40x70 East, 40x63 East, 40x70 Corner 40 ಅಡಿ ರೋಡಿಗಿದೆ. 30x40 West, 30x50 North
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**EC / ಇಸಿ, E-swathu, Khatha Change Building Licence & Other Property Documents**
96118-66449

**ಸೈಟುಗಳು ಮಾರಾಟಕ್ಕಿದೆ**
ಶಿವ-ಪಾರ್ವತಿ ಪೂರ್ವ 30x35, 30x43, 30x55, 40x55, 40x60, ಪಶ್ಚಿಮ 30x55, 30x47, 30x65, ಡಾಲರ್ಸ್ ಕಾಲೋನಿ, ಉತ್ತರ 25x80, ದಕ್ಷಿಣ 40x40, 30x40.
ಐಗೂರು ವಿಜಯಕುಮಾರ್
99457 02495

**ತಕ್ಷಣ ಬೇಕಾಗಿದ್ದಾರೆ**
ಬೇಕರಿಯಲ್ಲಿ ಕೌಂಟರ್ ಕೆಲಸಕ್ಕೆ ಹೆಣ್ಣು ಮಕ್ಕಳು ಬೇಕಾಗಿರುತ್ತಾರೆ.
ಆಸಕ್ತರು ಸಂಪರ್ಕಿಸಿ.
94485 34147, 79758 46679

**ಬೇಕಾಗಿದ್ದಾರೆ**
ಶಕ್ತಿ ನಗರದಲ್ಲಿರುವ ಮಿನಿ ಮಾರ್ಟ್‌ನಲ್ಲಿ (ದಿನಸಿ ಅಂಗಡಿ) ಕೆಲಸಕ್ಕೆ ಅನುಭವವಿರುವ ಸಿಬ್ಬಂದಿ ಬೇಕಾಗಿದ್ದಾರೆ. ಸೂಚನೆ : ಕಂಪ್ಯೂಟರ್ ಬಿಲ್ಲಿಂಗ್ ಮಾಡಿರುವ ಅನುಭವವಿರಬೇಕು. ಕೆಲಸದ ಸಮಯ : ಬೆಳಿಗ್ಗೆ 8.30 to 1.30 , 4.30 ರಿಂದ ರಾತ್ರಿ 9 ಸಂಪರ್ಕಿಸಿ :
99729 11344

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**ಸಿಂಗಲ್ ಬೆಡ್ ರೂಂ & Room for Rent**
ಎರಡನೇ ಮಹಡಿಯಲ್ಲಿರುವ 1 BHK ಮೂರನೇ ಮಹಡಿಯಲ್ಲಿರುವ ರೂಂ, ಬಾಡಿಗೆಗೆ ಇದೆ. #3425/22, 4ನೇ ಮೇನ್, 11ನೇ ಕ್ರಾಸ್, ಎಸ್.ಎಸ್. ಲೇಔಟ್, ಬಿ ಬ್ಲಾಕ್, ದಾವಣಗೆರೆ-4.
96638 28202, 96320 60242, 98806 88136

**ಮನೆಗಳು ಮಾರಾಟಕ್ಕಿವೆ**
ಆಂಜನೇಯ ಬಡಾವಣೆ ಉತ್ತರ 46x70 (4BHK) ಮೇಲೆ 2BHK - ಎರಡು, 1BHK ಎರಡು ಮನೆಗಳು, ನೂತನ ಕಾಲೇಜು ಹತ್ತಿರ, ಉತ್ತರ 40x50 (ಡುಪ್ಲೆಕ್ಸ್), ಎಸ್.ಎಸ್. ಎ ಬ್ಲಾಕ್ ಪೂರ್ವ 30x40 (ಮೇಲೆ-ಕೆಳಗೆ)
ಐಗೂರು ವಿಜಯಕುಮಾರ್
99457 02495

**JOB PLACEMENT AVAILABLE**
SAUDI ARABI-DUBAI + OMAN QATAR - KUWAIT + EUROPE + CANADA, UK and USA.
Rumaan Enterprises Tours & Travels
7795445340, 88619 49530

**ಸುವರ್ಣಾವಕಾಶ**
ಕುಕ್ಕಿಂಗ್ ಟ್ರೈನಿಂಗ್ ಆಗಿ ಬೆಸ್ಟ್ ಹೋಟೆಲ್ಸ್ ನಲ್ಲಿ ಕುಕ್ಕಿಂಗ್ ಜಾಬ್ ಮಾಡಲು ಅವಕಾಶ
Gents & Ladies ಎಲ್ಲರಿಗೂ
Call : 81475 47421

**ಜಮೀನು ಮಾರಾಟಕ್ಕಿದೆ**
ದಾವಣಗೆರೆಯಿಂದ 7 ಕಿ.ಮೀ. ವ್ಯಾಪ್ತಿಯಲ್ಲಿ 3 1/4 ಎಕರೆ ನೀರಾವರಿ ಜಮೀನು ಮಾರಾಟಕ್ಕಿದೆ.
94497 29838

**ನಮ್ಮಲ್ಲಿ ಯೋಗ್ಯ ತಳಿಯ ಅಡಿಕೆ ಸಸಿಗಳು ದೊರೆಯುತ್ತವೆ, ಬೇಕಾದಲ್ಲಿ**
ಸಂಪರ್ಕಿಸಿ :
98441 22269
86182 17245

**ಬಾಡಿಗೆಗೆ ಮನೆಗಳು ದೊರೆಯುತ್ತವೆ. ವಿಚಾರಿಸಿ**
ನೂತನ ಕಾಲೇಜು ಹಿಂಭಾಗ, ಎಂ.ಸಿ.ಸಿ. 'ಬಿ' ಬ್ಲಾಕ್‌ನಲ್ಲಿ 3 ಬೆಡ್ ರೂಂ ಮನೆ, 2 ಬೆಡ್ ರೂಂ ಮನೆ, ಸಿಂಗಲ್ ಬೆಡ್ ರೂಂ ಮನೆ
ದಕ್ಷೀತ್ ಐನಳ್ಳಿ, ಏಜೆಂಟ್
99027 56559

**ಸೈಟುಗಳು ಮಾರಾಟಕ್ಕಿವೆ**
ಆಂಜನೇಯ ಬಡಾವಣೆಯಲ್ಲಿ, LIC ಕಾಲೋನಿಯಲ್ಲಿ, ವಿವೇಕಾನಂದ ಬಡಾವಣೆಯಲ್ಲಿ 35x48 South, 15x45 South, 30x37 North, 30x40 West, 30x43 South
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಡಾಲರ್ಸ್ ಕಾಲೋನಿಯಲ್ಲಿ, ಬನಶ್ರೀ ಲೇ ಔಟ್ ಹತ್ತಿರ, 30x50, 30x50 North ಅಕ್ಕಪಕ್ಕ, 30x50 West, 70x62 Corner, 30x40 North, 40x40 South
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಸ್ಲೀಪಿಂಗ್ ಪಾರ್ಟ್ನರ್ ಬೇಕಾಗಿದ್ದಾರೆ**
ನಮ್ಮ ಟ್ರೇಡಿಂಗ್ ಬ್ಯುಸಿನೆಸ್ ನಲ್ಲಿ ಹೂಡಿಕೆ ಮಾಡಿ, ಪ್ರತಿ ತಿಂಗಳು ಸ್ಥಿರ ಹಾಗೂ ಉತ್ತಮ ಲಾಭ ಗಳಿಸಿ.
76767 50280

**ಬೇಕಾಗಿದ್ದಾರೆ**
ತಕ್ಷಣ ಸೇಲ್ಸ್ ಗರ್ಲ್ಸ್, ಸೇಲ್ಸ್ ಬಾಯ್ಸ್ ಹಾಗೂ ಹೆಲ್ಪರ್ ಬೇಕಾಗಿದ್ದಾರೆ. ಸಂಪರ್ಕಿಸಿ :
ಗಂಗಾವತಿ ಸಿಲ್ಕ್ಸ್ ಸ್ಯಾರಿ ಸೆಂಟರ್, ಬಿನ್ನಿ ಕಂಪನಿ ರೋಡ್, ದಾವಣಗೆರೆ -1.

**ಬೇಕಾಗಿದ್ದಾರೆ**
ಮೆಡಿಹೌಸ್ ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
PUC or any Degree.
ವಿಳಾಸ : ಕಾವೇರಿ ಮೆಡಿಹೌಸ್ ಪ್ರೈ.ಲಿ., ಚೇತನಾ ಹೋಟೆಲ್ ಹತ್ತಿರ, ದಾವಣಗೆರೆ - 577 002.

**ಮಳಿಗೆಗಳು ಬಾಡಿಗೆ ಇವೆ**
ಜಿಲ್ಲಾ ಕ್ರೀಡಾಂಗಣದ ಹತ್ತಿರ ಒಂದನೇ ಮಹಡಿಯಲ್ಲಿ 10 ಅಡಿx25 ಅಡಿ ಅಳತೆಯ ಒಂದು ಮಳಿಗೆ ಮತ್ತು 2ನೇ ಮಹಡಿಯಲ್ಲಿ 25 ಅಡಿx25 ಅಡಿ ಅಳತೆಯ ಒಂದು ಮಳಿಗೆ ಬಾಡಿಗೆ ಇದೆ. ಸಂಪರ್ಕಿಸಿ :
94498 30566

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**HOUSE FOR RENT**
2 BHK North facing with Borewell & Muncipal water and parking facility available at 11th Main, Opp. Indoor Stadium, S.S. Layout A Block.
AHMED 94481 34006

**ಬೇಕಾಗಿದ್ದಾರೆ**
ಫುಡ್ ಡೆಲಿವರಿ ಮಾಡಲು ಡೆಲಿವರಿ ಬಾಯ್ಸ್ ಬೇಕಾಗಿದ್ದಾರೆ.
ಸಂಪರ್ಕಿಸಿ :
96068 47121

**WANTED FOR LODGE**
Manager-Graduates with Experienced Prefered Salary-Rs. 10,000 to upto 15,000 pm
98440 65235

**Finance Advisor**
Full Times Job's Female.
Job Role Telecaller
Work time : 9.30AM to 6.30 PM & every Sunday holiday.
Salary : 6,000 to 10,000 +Incentives.
Qualification : 10th to 12 PUC or Degree.
Age Limit : 19 to 29.
Freshers & experience call or whatsapp
77959 44991, 96201 50544

**ಆಫೀಸ್ ಬಾಡಿಗೆಗಿದೆ**
ದಾವಣಗೆರೆಯ ಎಂ.ಜಿ. ರಸ್ತೆ ಹತ್ತಿರ ಇರುವ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ ಎದುರು ಇರುವ ಓಂಕಾರ್ ಹೈಟ್ಸ್ ಕಾಂಪ್ಲೆಕ್ಸ್‌ನಲ್ಲಿ ಫರ್ನೀಚರ್ ರೆಡಿ ಇರತಕ್ಕಂತಹ ಆಫೀಸ್ ಬಾಡಿಗೆಗಿದೆ.
90085 32722

**ಹೊಸ ಮನೆ ಮಾರಾಟಕ್ಕಿದೆ**
ಮಹಾಲಕ್ಷ್ಮಿ ಬಡಾವಣೆಯಲ್ಲಿ ಪಶ್ಚಿಮ ದಿಕ್ಕಿನ ವಾಸ್ತು ಪ್ರಕಾರ ಇರುವ 2 ಬೆಡ್ ರೂಂನ ಹೊಸ ಮನೆ ಮಾರಾಟಕ್ಕೆ ಇದೆ.
98448 82366

**ನೇರ ಪರೀಕ್ಷೆಗಳು**
PUC - ARTS / COMM/SCIENCE
NTC - ನರ್ಸರಿ ಟೀಚರ್ಸ್ ಟ್ರೇನಿಂಗ್.
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ -2 ವರ್ಷ. (Regular)
ಶ್ರೀ ಗಂಗೋತ್ರಿ ಕಮ್ಯುನಿಟಿ ಕಾಲೇಜ್ ಲಾಯರ್ ರೋಡ್, ದಾವಣಗೆರೆ.
86602 35013

**ಶ್ರೀ ಅಂಜನಿಪುತ್ರ ಹೋಂ ಕೇರ್ ಸರ್ವೀಸ್**
ವಯೋವೃದ್ಧರನ್ನು, ವಯೋವೃದ್ಧ ರೋಗಿಗಳನ್ನು ನೋಡಿಕೊಳ್ಳಲು ಬೇಕಾಗಿದ್ದಲ್ಲಿ ಸಂಪರ್ಕಿಸಿ :
99024 64522, 96864 55820
(ಮಹಿಳೆಯರು ಹಾಗೂ ಪುರುಷರು ಕೆಲಸಕ್ಕೆ ಬೇಕಾಗಿದ್ದಾರೆ)

**ಬೇಕಾಗಿದ್ದಾರೆ PUC /DEGREE**
ಆದ ಮಹಿಳೆಯರು ರ್‍ಯಾಕ್‌ನಿಂದ ಸ್ಟಾಕ್ ತೆಗೆಯಲು ಮಹಿಳೆಯರು ಔಷಧಿ ಅಂಗಡಿಗೆ ಬೇಕಾಗಿದ್ದಾರೆ.
ಭೇಟಿ ಸಮಯ ಸಂಜೆ: 6-30 ರ ನಂತರ
ಶ್ರೀ ಗುರು ಎಂಟರ್ ಪ್ರೈಸಸ್
#579, 6ನೇ ಮುಖ್ಯ ರಸ್ತೆ, ಪಿ.ಜೆ ಬಡಾವಣೆ, ದಾವಣಗೆರೆ.

**ಮನೆ ಬಾಡಿಗೆಗೆ/ಲೀಸ್‌ಗೆ ಇದೆ**
ಎಂಸಿಸಿ 'ಎ' ಬ್ಲಾಕ್, ಚರ್ಚ್ ಮುಖ್ಯ ರಸ್ತೆಯಲ್ಲಿ 1 ಬೆಡ್ ರೂಮ್ ನ ಸುಸಜ್ಜಿತ ಮೊದಲ ಮಹಡಿ ಮನೆ ಬಾಡಿಗೆಗೆ ದೊರೆಯುತ್ತದೆ.
ವಿಚಾರಿಸಿ:-
98442 28851

**ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ**
ಸಂಬಳ ಸಂಬಳ 8000-11000
+91 88845 95873
+91 87920 48458

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**

ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.
ದಾವಣಗೆರೆ : 2&3ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ಅಶೋಕ ಲೇಲ್ಯಾಂಡ್ ಮೊಬೈಲ್ ಕ್ಯಾಂಟೀನ್‌ಗೆ ವಾಹನ ಬಾಡಿಗೆಗಿದೆ**
ಅಶೋಕ್ ಲೇಲ್ಯಾಂಡ್ ಓಪನ್ ಡೋರ್ ಮೊಬೈಲ್ ಕ್ಯಾಂಟೀನ್‌ಗೆ ವಾಹನ ಬಾಡಿಗೆಗೆ ಇದೆ. ಆಫೀಸ್‌ನಲ್ಲಿ ಕೆಲಸ ಮಾಡಲು ಹುಡುಗ/ಹುಡುಗಿಯರು ಬೇಕಾಗಿದ್ದಾರೆ.
90358 88939

**ಬೇಕಾಗಿದ್ದಾರೆ**
ಗುಲಬಾ ಚಹಾ ಹೋಟೆಲ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ, ನಿಜಲಿಂಗಪ್ಪ ಬಡಾವಣೆ ದಾವಣಗೆರೆ.
ಸಂಪರ್ಕಿಸಿ :
96111 93932
88610 69514

**ಬೇಕಾಗಿದ್ದಾರೆ**
B.Sc., B.Ed., (CBZ)
B.Sc., ತರಬೇತಿ ಪಡೆದ ಶಿಕ್ಷಕರು ಬೇಕಾಗಿದ್ದಾರೆ.
ನಂದಗೋಕುಲ ಆಂಗ್ಲ ಮಾಧ್ಯಮ ಪ್ರಾಥಮಿಕ ಹಾಗೂ ಪ್ರೌಢಶಾಲೆ
ದೇವರಾಜ ಅರಸು ಬಡಾವಣೆ ಸಿ ಬ್ಲಾಕ್, 6ನೇ ಕ್ರಾಸ್, ದಾವಣಗೆರೆ.
99640 17729

**2BR HOUSE FOR RENT**
in 1st Floor, Anjaneya Badavane, 6th cross. Ph. 94484 54760 and # 3683/9, Anjaneya Badavane, 6th cross, is for Sale. for Rs. 1.85cr. Intrested Please Contract :
94484 54760

**ಸಾಲ ಸೌಲಭ್ಯ**
* ಮನೆ ಕಟ್ಟಲು * ಮನೆ ರಿಪೇರಿ * ಸೈಟು ಖರೀದಿಸಲು * ಬೇರೆ ಬ್ಯಾಂಕಿನ ಸಾಲ ತೀರಿಸಲು * ಮನೆ ಮೇಲೆ ಸಾಲ * ಸೈಟಿನ ಮೇಲೆ ಸಾಲ * ಹಂಚಿನ ಮನೆಗೆ * ಶೀಟಿನ ಮನೆಗೆ, ಡೋರ್ ನಂ. ಮತ್ತು ರೆವಿನ್ಯೂ ಪ್ರಾಪರ್ಟಿ ಮೇಲೆ ಸಾಲ.
8660206001

**2 BHK HOUSE FOR RENT/LEASE**
near podar international in J.H. Patel Badavane, Davangere.
95358 41058

**HOUSE FOR RENT (2 BHK)**
# 3887, Old RTO Office, MCC `B' Block, Near Ayyappa swamy temple, Davanagere.
96111 04206

**PART TIME JOBS**
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 ರಿಂದ 20,000 ಸಂಪಾದಿಸಿ (ಕೊರಿಯರ್ ಸೌಲಭ್ಯವಿದೆ)
91487 33213

**ನಂ.1. ವಶೀಕರಣಂ**
ಕನ್ನಡ, ತೆಲುಗು, ಹಿಂದಿ ಭಾಷೆಯಲ್ಲಿ ಭವಿಷ್ಯ, ಸ್ತ್ರೀ-ಪುರುಷರ ಎಲ್ಲಾ ರೀತಿಯ ಸಮಸ್ಯೆಗಳಿಗೆ ಪರಿಹಾರ ಹೇಳುತ್ತಾರೆ.
ಶ್ರೀ ಲಕ್ಷ್ಮಿಕಾಂತ್ ಗುರೂಜಿ, ಆಂಧ್ರಪ್ರದೇಶ ಲಾಯರ್ ರಸ್ತೆ, ದಾವಣಗೆರೆ.
9740064163

**ಲಿಂಗಾಯತ ವಧು ಬೇಕಾಗಿದ್ದಾರೆ**
ಲಿಂಗಾಯತ (ಪಂಚಮಸಾಲಿ) 28 ವರ್ಷದ BE, MS, Phd Research Scientist USA ದಲ್ಲಿ ಕೆಲಸದಲ್ಲಿರುವ ವರನಿಗೆ, ಸೂಕ್ತ ವಧು ಬೇಕಾಗಿದೆ.
98807 29108

**ಆತಿಥ್ಯ ರೆಸ್ಟೋರೆಂಟ್**
ಶುದ್ಧ ತಾಜಾ ಮಸಾಲಾ ದೋಸೆ ಹಿಟ್ಟು ದೊರೆಯುತ್ತದೆ.
ಸಂಪರ್ಕಿಸಿ :
81475 47421

**AVOID MOSQUITOES**
Mosquito Nets For Doors & Windows
SRI GOWRI ENTERPRISES
#7C2, 4th Cross, Near, Shaneshwara Temple Karur Industrial-Area, P.B. Road, DVG-6.
72049 94628

**ಉದ್ಯೋಗಾವಕಾಶ**
ದಾವಣಗೆರೆ, ಶಿವಮೊಗ್ಗ ಮತ್ತು ಚಿತ್ರದುರ್ಗದಲ್ಲಿ ಹೆಸರಾಂತ ಕಂಪನಿಯಾದ ಸಂಜೀವಿನಿ ಹೋಂ ನರ್ಸಿಂಗ್ ಕೇರ್ ಸೆಂಟರ್‌ನಲ್ಲಿ ಕೆಲಸ ಮಾಡಲು ಮಹಿಳೆ ಹಾಗೂ ಯುವತಿಯರು ಬೇಕಾಗಿದ್ದಾರೆ.
ವಿದ್ಯಾರ್ಹತೆ : 7th, 10th, PUC, Any Degree, ಸಂಬಳ, ಊಟ, ವಸತಿಯೊಂದಿಗೆ 12,000 ರಿಂದ 15,000 ರೂ. ಗಳಿರುತ್ತದೆ.
91486 83185, 95355 32369

**ಅಧಿಕೃತ ಚೀಟಿ ಸಂಸ್ಥೆ**
ರೂ. 1 ಲಕ್ಷದ ಚೀಟಿ ಪ್ರಾರಂಭ 50 ಸದಸ್ಯರು, 1,400 ರಿಂದ 2,000ರೂ ವರೆಗೆ. ಸಂಪರ್ಕಿಸಿ
ಸ್ಕಂದ ಚಿಟ್ ಫಂಡ್ಸ್ (ರಿ.)
78997 75159

# ಇಂದಿನ ಮಕ್ಕಳು ಪುಣ್ಯವಂತರು

## ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಬಿ.ಸಿ. ಉಮಾಪತಿ



ದಾವಣಗೆರೆ, ಜು. 10- ಮಕ್ಕಳ ವಿದ್ಯಾಭ್ಯಾಸಕ್ಕೆ ಇಂದಿನ ಪೋಷಕರು ಎಲ್ಲಾ ರೀತಿಯ ಸಹಕಾರದ ಜೊತೆಗೆ ಎಲ್ಲಾ ತ್ಯಾಗಕ್ಕೂ ಸಿದ್ಧರಿರುತ್ತಾರೆ ಎಂದು ಜವಳಿ ವರ್ತಕ ಬಿ.ಸಿ. ಉಮಾಪತಿ ನುಡಿದರು.

ನಗರದ ಬಸವರಾಜ ಪೇಟೆಯ ಶ್ರೀ ಬಸವೇಶ್ವರ ಮತ್ತು ಶ್ರೀ ವೀರೇಶ್ವರ ದೇವಸ್ಥಾನ ಸಮಿತಿಯವರು ಏರ್ಪಡಿಸಿದ್ದ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ನಾವು ಕಲಿಯದಿದ್ದರೆ ಏನಂತೆ ಮಕ್ಕಳಾದರೂ ಓದಲಿ ಎಂಬ ಪೋಷಕರ ಮನೋಭಾವವನ್ನು ಮಕ್ಕಳು ಅರಿತು ತಂದೆ- ತಾಯಿಯರನ್ನು ದೇವರಂತೆ ಕಾಣಬೇಕೆಂದರು.

ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು, ವಿದ್ಯಾಭ್ಯಾಸದ ನಂತರ ನಿಮ್ಮ ಗುರಿ ಕೆಲಸದ ಕಡೆ ಇರಬೇಕು. ಉನ್ನತ ಹುದ್ದೆಯತ್ತ ಕನಸು ಕಂಡು ನನಸು ಮಾಡಿಕೊಳ್ಳುವುದರ ಮೂಲಕ ಪೋಷಕರನ್ನು ಪೋಷಿಸಬೇಕು. ಅಂದಾಗ ಮಾತ್ರ ನಿಮ್ಮ ಕಲಿಕೆ ಸಾರ್ಥಕವಾಗುತ್ತದೆ. ಇಂದಿನ ಮಕ್ಕಳು ಪುಣ್ಯವಂತರು, ಭಾಗ್ಯವಂತರು. ನಿಮ್ಮ ಓದಿಗೆ ಪೋಷಕರು ಎಷ್ಟೇ ತೊಂದರೆ, ತಾಪತ್ರಯ ಇದ್ದರೂ ಕೂಡ ಸಾಲ ಮಾಡಿಯಾದರೂ ಓದಿಸುತ್ತಾರೆ. ನೀವುಗಳು ಮೊಬೈಲ್ ದಾಸರಾಗದೆ, ಸರ್ಕಾರಿ ಸೀಟು ಪಡೆಯುವಂತಹ ಚಿತ್ತ ಬೆಳೆಸಿಕೊಳ್ಳಬೇಕೆಂದರು.

ಹಿಂದೆ ನಮಗೆ ಓದಲು ಸಹಾಯ- ಸಹಕಾರವಿರಲಿಲ್ಲ. ಫೀಸ್ ಕಟ್ಟಲು ಪೋಷಕರು ಪೇಚಾಡುತ್ತಿದ್ದರು. ಓದಲು ಬೆಳಕೂ ಸಹ ಇರಲಿಲ್ಲ. ಇಂದು ನಿಮಗೆ ಎಲ್ಲವೂ ಇದೆ. ಆದ್ದರಿಂದ ಓದಿನ ಜೊತೆಗೆ ಸಂಸ್ಕಾರವಂತರಾಗಬೇಕು. ಅಧ್ಯಾತ್ಮಿಕತೆಯನ್ನು ಅಳವಡಿಸಿಕೊಂಡು ಬೆಳೆಯಬೇಕೆಂದರು.

ಕಾರ್ಮಿಕರು ಮತ್ತು ಶ್ರಮಜೀವಿಗಳೇ ಹೆಚ್ಚಾಗಿರುವ ಬಸವರಾಜಪೇಟೆಯಲ್ಲೊಂದು ಕಲ್ಯಾಣ ಮಂಟಪದ ಅವಶ್ಯಕತೆ ಇದೆ ಎಂಬ ಬೇಡಿಕೆಗೆ ಸ್ಪಂದಿಸಿದ ಉಮಾಪತಿಯವರು, ಇದಕ್ಕೆ ತಮ್ಮ ಸಹಕಾರವೂ ಇದೆ ಎಂದು ಭರವಸೆ ನೀಡಿದರು.

ರೈಸ್ ಮಿಲ್ ವರ್ತಕ ಜಿ.ಎಸ್. ಉಳುವಯ್ಯ, ಲಯನ್ಸ್ ಕ್ಲಬ್ ಮಾಜಿ ಅಧ್ಯಕ್ಷ ವೈ. ಬಿ. ಸತೀಶ್, ಶ್ರೀ ಮಂಜು ಪೇಂಟ್ಸ್‌ನ ಅಂದನೂರು ಮುರುಗೇಶಪ್ಪ, ಶ್ರೀಶೈಲ ಮಲ್ಲಿಕಾರ್ಜುನ ಟ್ರೇಡರ್ಸ್ ನ ಮಾಲೀಕ ಹೆಚ್. ಎನ್. ನಾಗರಾಜ್ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

ದೇವಸ್ಥಾನ ಸಮಿತಿ ಅಧ್ಯಕ್ಷ ಮಲ್ಲಪ್ಪ ಬಿರಾದಾರ್ ಅಧ್ಯಕ್ಷತೆ ವಹಿಸಿದ್ದರು. ಇದೇ ಸಂದರ್ಭದಲ್ಲಿ ಬಸವೇಶ್ವರ ವಿದ್ಯಾಸಂಸ್ಥೆಯ ನಿವೃತ್ತ ಮುಖ್ಯ ಶಿಕ್ಷಕಿ ಶ್ರೀಮತಿ ಬಿ. ಎಸ್. ಉಮಾ ಅವರನ್ನು ಸನ್ಮಾನಿಸಿದರು.

ಚಿ. ಸಮರ್ಥ್ ಪ್ರಾರ್ಥಿಸಿದರು ಎ.ಬಿ. ಸಿದ್ಧಲಿಂಗೇಶ್ ಸ್ವಾಗತಿಸಿದರು. ನಂತರ ಉಪಾಧ್ಯಕ್ಷ ಇಂದಿನ ಸುದ್ದಿ ಸಂಪಾದಕ ವೀರಪ್ಪ. ಎಂ. ಬಾವಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಶಂಭುಲಿಂಗಪ್ಪ ವಂದಿಸಿದರು. ಪ್ರಧಾನ ಕಾರ್ಯದರ್ಶಿ ಎಂ. ದೊಡ್ಡಪ್ಪ ಮತ್ತಿತರರು ವೇದಿಕೆ ಮೇಲೆ ಉಪಸ್ಥಿತರಿದ್ದರು.

# ಮಡಿಕಟ್ಟೆ, ವಿದ್ಯಾರ್ಥಿ ನಿಲಯಗಳಿಗೆ ಅನುದಾನ ಬಿಡುಗಡೆಗೆ ಮನವಿ



ದಾವಣಗೆರೆ, ಜು.10- ಮಡಿಕಟ್ಟೆ ನಿರ್ವಹಣೆ, ಕಟ್ಟಡ ದುರಸ್ತಿ, ಬಾಲಕರ ವಿದ್ಯಾರ್ಥಿ ವಸತಿ ನಿಲಯದ ಕಟ್ಟಡ ನಿರ್ಮಾಣಕ್ಕೆ ಅನುದಾನ, ನೂತನ ಬಾಲಕಿಯರ ವಿದ್ಯಾರ್ಥಿ ನಿಲಯ ನಿರ್ಮಾಣಕ್ಕೆ ಹೊಸದಾಗಿ ಅನುದಾನ ನೀಡುವಂತೆ ಆಗ್ರಹಿಸಿ, ಜಿಲ್ಲಾ ಮಡಿವಾಳ ಮಾಚಿದೇವ ಸಂಘ, ಹಾಗೂ ದಾವಣಗೆರೆ ಧೋಬಿಘಾಟ್ ವೃತ್ತಿಪರ ಮಡಿವಾಳರ ಸಂಘವು ಜಂಟಿಯಾಗಿ ಜಿಲ್ಲಾ ಉಸ್ತುವಾರಿ ಸಚಿವ ಎಸ್. ಎಸ್.ಮಲ್ಲಿಕಾರ್ಜುನ್ ಅವರಿಗೆ ಇಂದು ಮನವಿ ಸಲ್ಲಿಸಿತು.

ಜಿಲ್ಲಾ ಪಂಚಾಯತಿ ಆಫೀಸ್ ಮುಂಭಾಗ ದೋಭಿ ಘಾಟಿಗೆ ಈ ಹಿಂದೆ ಮಲ್ಲಿಕಾರ್ಜುನ್ ಅವರು ಜಿಲ್ಲಾ ಸಚಿವರಾಗಿದ್ದಾಗ 1.5 ಕೋಟಿ ರೂ.ಗಳಲ್ಲಿ ಸುಸಜ್ಜಿತ ಕಟ್ಟಡ, ಬಟ್ಟೆ ತೊಳೆಯಲು ಅನುಕೂಲ ಆಗುವಂತೆ ಮಡಿಕಟ್ಟೆ ನಿರ್ಮಿಸಲಾಗಿತ್ತು. ಆದರೆ ಕಟ್ಟಡ ಬಳಕೆ, ಸೂಕ್ತ ನಿರ್ವಹಣೆ ಇಲ್ಲದೇ ಶಿಥಿಲ ಆಗುತ್ತಿದ್ದು, ಸ್ಥಳ ಪರಿಶೀಲನೆ ಮಾಡಿ ಅವಶ್ಯವಿರುವ ಬಟ್ಟೆ ತೊಳೆಯುವ ಯಂತ್ರ ಮತ್ತು ಕಟ್ಟಡ ದುರಸ್ತಿ ಹಾಗೂ ನೀರಿನ ವ್ಯವಸ್ಥೆ ಮಾಡಿಕೊಡಲು ಅವಶ್ಯವಿರುವ ಅನುದಾನವನ್ನು ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನದಲ್ಲಿ ಮಂಜೂರು ಮಾಡಲು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಅಲ್ಲದೇ, ಮಡಿವಾಳ ಸಮಾಜದ ವಿದ್ಯಾರ್ಥಿಗಳ ವಸತಿ ನಿಲಯದ ನಿರ್ಮಾಣ ನಿಧಾನವಾಗಿ ಸಾಗುತ್ತಿದ್ದು, ಅದನ್ನು ಪೂರ್ಣಗೊಳಿಸಲು 1.5 ಕೋಟಿಗೂ ಅಧಿಕ ಹಣ ಅವಶ್ಯಕತೆ ಇದೆ. ಕಾರಣ ಸಚಿವರು ಹಿಂದುಳಿದ ವರ್ಗಗಳ ಅಭಿವೃದ್ಧಿ ಇಲಾಖೆಯ ಸಚಿವರಿಗೆ ಸೂಚಿಸಿ, ಅವಶ್ಯವಿರುವ ಹಣವನ್ನು ಮಂಜೂರು ಮಾಡಿಸಬೇಕೆಂದು ಮನವಿ ಮಾಡಿದರು. ಇದಲ್ಲದೇ, ಮಹಿಳಾ ವಿದ್ಯಾರ್ಥಿ ನಿಲಯ ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ ಇದ್ದು, ವಿದ್ಯಾರ್ಥಿ ನಿಲಯ ನಿರ್ಮಾಣ ಮಾಡಲು 3 ಕೋಟಿ ಹಣದ ಅಗತ್ಯ ಇದ್ದು, ಈ ಅನುದಾನವನ್ನು ಸಂಬಂಧಪಟ್ಟ ಇಲಾಖೆಗಳಿಗೆ ಸೂಚಿಸಿ ಹಣ ಮಂಜೂರು ಮಾಡಿಸಿಕೊಡಬೇಕೆಂದು ವಿನಂತಿಸಿದರು.

ಈ ವೇಳೆ ಜಿಲ್ಲಾ ಮಡಿವಾಳ ಸಮಾಜದ ಅಧ್ಯಕ್ಷ ಎಂ.ನಾಗೇಂದ್ರಪ್ಪ, ಕಾರ್ಯಾಧ್ಯಕ್ಷ ಹೆಚ್. ಜಿ.ಉಮೇಶ್, ಉಪಾಧ್ಯಕ್ಷ ಜಿ. ವಿಜಯ್‌ಕುಮಾರ್, ನಿರ್ದೇಶಕ, ಮಾಧ್ಯಮ ಸಲಹೆಗಾರ ಎಂ.ವೈ.ಸತೀಶ್, ಮಡಿಕಟ್ಟೆಯ ಅಧ್ಯಕ್ಷ ಜಿ.ಕಿಶೋರ್‌ಕುಮಾರ್, ಪ್ರಧಾನ ಕಾರ್ಯದರ್ಶಿ ಹೆಚ್.ಬಿ.ಬಸವರಾಜ್, ಹನುಮಂತಪ್ಪ, ಎಂ.ರವಿಕುಮಾರ್, ಲಿಂಗರಾಜ್, ಸಂಜು ಇತರರು ಇದ್ದರು.

# ಸ್ನೇಹ ದೀಪ ಅಂಧರ ಶಾಲಾ ಕಟ್ಟಡ ಉದ್ಘಾಟನೆ



ರಾಣೇಬೆನ್ನೂರು, ಜು.10- ನಗರದ ಸ್ನೇಹ ದೀಪ ಅಂಗ ಅಂಗ ವಿಕಲರ ಸಂಸ್ಥೆ 7ನೇ ವರ್ಷದ ವಾರ್ಷಿಕೋತ್ಸವ ಹಾಗೂ ಪ್ರಾಥಮಿಕ ಶಾಲಾ ನೂತನ ಕಟ್ಟಡ ಉದ್ಘಾಟನೆ ಸಮಾರಂಭ ಜರುಗಿತು.

**ರಾಣೇಬೆನ್ನೂರು**

ಶಾಸಕ ಪ್ರಕಾಶ್ ಕೋಳಿವಾಡ ಶಾಲಾ ನೂತನ ಕಟ್ಟಡವನ್ನು ಉದ್ಘಾಟನೆ ಮಾಡಿ, ಸಂಸ್ಥೆಯ ಮಕ್ಕಳ ಶ್ರೇಯೋಭಿವೃದ್ಧಿಗೆ ಶ್ರಮಿ ಸುವುದಾಗಿ ಭರವಸೆ ನೀಡಿದರು.

ಸಮಾರಂಭದಲ್ಲಿ ಸ್ನೇಹ ದೀಪ ಅಂಧ ಅಂಗವಿಕಲರ ಸಂಸ್ಥೆಯ ಧರ್ಮದರ್ಶಿಗಳಾದ ಕೆ.ಜಿ. ಮೋಹನ್ ಹಾಗೂ ಡಾ. ಪಾಲ್ಮುದ್ದ, ಗಣ್ಯರಾದ ಡಾ. ಗಿರೀಶ್ ಎಸ್. ಕೆಂಚಪ್ಪನವರ್, ಸುಧೀರ್ ಕುರುವತ್ತಿ, ಶ್ರೀಮತಿ ಶೋಭಾ ಮಠಪತಿ, ಶ್ರೀಮತಿ ವಸಂತ ಹುಲ್ಲತ್ತಿ ಮತ್ತಿತರರು ಪಾಲ್ಗೊಂಡು, ಸಂಸ್ಥೆಯ ಅಭಿವೃದ್ಧಿಗೆ ಶ್ರಮಿಸುತ್ತೇವೆ ಎಂಬ ಭರವಸೆಯನ್ನು ತುಂಬಿದರು.

ಇದೇ ಸಂದರ್ಭದಲ್ಲಿ ಶಾಸಕ ಪ್ರಕಾಶ್ ಕೋಳಿವಾಡ ಅವರು ಕಂಪ್ಯೂಟರ್ ತರಬೇತಿಯಲ್ಲಿ ತೇರ್ಗಡೆಯಾದ ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರ ಹಾಗೂ ಸ್ಮಾರ್ಟ್ ಗ್ಲಾಸ್ ವಿತರಣೆ ಮಾಡಿದರು.

# ಸಚಿವ ಎಸ್ಸೆಸ್ಸೆಂಗೆ ಶ್ರೀಮದ್ ಸಾಧು ಸದ್ಧರ್ಮ ವೀರಶೈವ ಸಂಘದ ಸನ್ಮಾನ



ದಾವಣಗೆರೆ, ಜು.10- ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ ಅವರನ್ನು ಅವರ ನಿವಾಸದಲ್ಲಿ ಶ್ರೀಮದ್ ಸಾಧು ಸದ್ಧರ್ಮ ವೀರಶೈವ ಸಂಘದ ಅಧ್ಯಕ್ಷ ಎಚ್.ಆರ್ ಬಸವರಾಜಪ್ಪ ಅವರ ನೇತೃತ್ವದಲ್ಲಿ ಇಂದು ಸನ್ಮಾನಿಸಲಾಯಿತು.

ಬಸವರಾಜಪ್ಪ ಅವರು ಎಸ್ಸೆಸ್ಸೆಂ ಅವರನ್ನು ಅಭಿನಂದಿಸಿ ಮಾತನಾಡುತ್ತಾ, ಮಲ್ಲಿಕಾರ್ಜುನ್ ಮಧ್ಯ ಕರ್ನಾಟಕದ ಯುವ ನಾಯಕರಾಗಿದ್ದು, ನಾಡಿನ ಅಭಿವೃದ್ಧಿಯ ಬಗ್ಗೆ ಸದಾ ದೂರದೃಷ್ಟಿಯುಳ್ಳವರಾಗಿದ್ದಾರೆ. ಅವರ ಅವಧಿಯಲ್ಲಿ ಜಿಲ್ಲೆ ಮತ್ತು ನಾಡು ಅಭಿವೃದ್ಧಿ ಸಾಧಿಸುವಂತಾಗಲಿ ಎಂದು ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಸಂಘದ ಗೌರವ ಕಾರ್ಯದರ್ಶಿ ಎಮ್.ಬಿ. ಸಂಗಮೇಶ್ವರ ಗೌಡ, ಬಿ. ವಾಮದೇವಪ್ಪ, ವೈ. ವಸಂತಪ್ಪ, ಕೆ.ಸಿ. ಲಿಂಗರಾಜ್ ಆನೆಕೊಂಡ, ಎಸ್.ಆರ್. ಸಿರಗಂಬಿ, ಡಾ ಎಚ್.ಎಸ್. ಮಂಜುನಾಥ್ ಕುರ್ಕಿ ಜಿ.ಡಿ. ಗುರುಸ್ವಾಮಿ , ಜೆ.ಆರ್.ಷಣ್ಮುಖಪ್ಪ ಮತ್ತಿತರರು ಉಪಸ್ಥಿತರಿದ್ದು ನೂತನ ಸಚಿವರಿಗೆ ಶುಭ ಕೋರಿದರು.

# ಶ್ರಮಿಕ ವರ್ಗಕ್ಕೆ ಬಜೆಟ್‌ನಲ್ಲಿ ಅನ್ಯಾಯ: ಸಿಐಟಿಯು

ದಾವಣಗೆರೆ, ಜು. 10- ಕರ್ನಾಟಕದ ಕಾರ್ಮಿಕ ವರ್ಗದ ದೃಷ್ಟಿಯಿಂದ ಇದು ಅನ್ಯಾಯದ ಬಜೆಟ್ ಆಗಿದೆ ಎಂದು ಸಿಐಟಿಯು ರಾಜ್ಯ ಸಮಿತಿ ಅಭಿಪ್ರಾಯಪಟ್ಟಿದೆ.

ಹಿಂದಿನ ಬಿಜೆಪಿ ಸರ್ಕಾರ ಎಪಿಎಂಸಿ ಕಾಯ್ದೆ ತಿದ್ದುಪಡಿ ರದ್ದು ಮಾಡುವುದಾಗಿ ಘೋಷಿಸಿ ಮತ್ತೊಂದು ಕಡೆ ಅದೇ ಬಿಜೆಪಿ ಸರ್ಕಾರ ಕಾರ್ಖಾನೆ ಕಾಯ್ದೆಗೆ ತಿದ್ದುಪಡಿ ತಂದು 8 ಗಂಟೆ ಕೆಲಸದ ಅವಧಿಯನ್ನು 12 ಗಂಟೆಗೆ ಹೆಚ್ಚಳ ಮಾಡಿತ್ತು. ಹೆಚ್ಚಳದ ಅವಧಿಯನ್ನು ಸರ್ಕಾರ ರದ್ದು ಮಾಡಬೇಕಿತ್ತು.

ಅಸಂಘಟಿತ ಕಾರ್ಮಿಕರನ್ನು ಬಜೆಟ್‌ನಲ್ಲಿ ಕಡೆಗಣಿಸಲಾಗಿದೆ. ಮನೆಗೆಲಸ, ಹಮಾಲಿ, ಆಟೋ, ಟೈಲರ್ಸ್, ಬೀಡಿ ಉದ್ಯಮ, ಬೀದಿ ಬದಿಯ ಸಣ್ಣ ವ್ಯಾಪಾರಿಗಳು, ಮೆಕ್ಯಾನಿಕ್‌ಗಳು, ವಿಮಾ ಪ್ರತಿನಿಧಿಗಳು ಸೇರಿದಂತೆ ಅಸಂಘಟಿತ ವಲಯದ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಇಲ್ಲವಾಗಿದೆ.

ಕಾಂಗ್ರೆಸ್ ಚುನಾವಣೆಗೂ ಮುನ್ನ ಅಂಗನವಾಡಿ, ಬಿಸಿಯೂಟ ಕಾರ್ಯಕರ್ತೆಯರಿಗೆ ನೀಡಿದ್ದ ವೇತನ ಹೆಚ್ಚಳದ ಭರವಸೆ ಈಡೇರಿಲ್ಲ. ಒಳ ಗುತ್ತಿಗೆ ನೌಕರರ ಖಾಯಮಾತಿ ಬಗ್ಗೆ ಬಜೆಟ್‌ನಲ್ಲಿ ಪ್ರಸ್ತಾಪ ಮಾಡಿಲ್ಲ ಎಂದು ಸಿಐಟಿಯುಸಿ ಹೇಳಿದೆ.

ಸಿದ್ಧರಾಮಯ್ಯ ಮಂಡಿಸಿದ ಬಜೆಟ್‌ನಲ್ಲಿ ಕೆಲವು ಸ್ವಾಗತಾರ್ಹ ಅಂಶಗಳು ಮಾತ್ರ ಇದ್ದು. ಒಟ್ಟಾರೆ ಕಾರ್ಮಿಕ ವರ್ಗಕ್ಕೆ ನ್ಯಾಯ ಒದಗಿಸುವಲ್ಲಿ ಸರ್ಕಾರ ವಿಫಲವಾಗಿದೆ ಎಂದು ಸಮಿತಿ ಜಿಲ್ಲಾ ಸಂಚಾಲಕ ಆನಂದರಾಜ್ ಆರೋಪಿಸಿದ್ದಾರೆ.

# ಶಿವಸಿಂಪಿ ಸಮಾಜದ ಸಮಾವೇಶ; 'ಲೋಗೋ' ಬಿಡುಗಡೆ



ದಾವಣಗೆರೆ, ಜು.10 - ಶಿವಸಿಂಪಿ ಸಮಾಜದ ಕುಲಗುರು ಶರಣ ಶ್ರೀ ಶಿವದಾಸಿಮಯ್ಯ ಜಯಂ ತ್ಯುತ್ಸವ, ಪ್ರತಿಭಾ ಪುರಸ್ಕಾರ ಹಾಗೂ ಶಿವಸಿಂಪಿ ಸಮಾವೇಶದ ಲೋಗೋ ಅನಾವರಣ ಕಾರ್ಯಕ್ರ ಮವನ್ನು ಸಂಘದ ಕಛೇರಿಯಲ್ಲಿ ಹಮ್ಮಿಕೊಳ್ಳಲಾಗಿತ್ತು.

ಸಂಘದ ಗೌರವಾಧ್ಯಕ್ಷ ಚಿಂದೋಡಿ ಚಂದ್ರಧರ್ ಲೋಗೋ ಬಿಡುಗಡೆ ಮಾಡಿ ಮಾತನಾಡಿ, ಸಮಾವೇಶವನ್ನು ಅಚ್ಚುಕಟ್ಟಾಗಿ ಮಾಡಲು ನಾವುಗಳು ಇಂದಿನಿಂದಲೇ ಕಾರ್ಯಪ್ರವೃತ್ತರಾಗಬೇಕು. ಸಮಾಜದ ಎಲ್ಲಾ ಬಂಧುಗಳು ತನು, ಮನ, ಧನ ನೀಡುವ ಮೂಲಕ ಹೆಚ್ಚಿನ ಸಹಕಾರ ನೀಡಲು ಮನವಿ ಮಾಡಿದರು

ಸಮಾಜದ ಅಧ್ಯಕ್ಷ ಬೂಸ್ನೂರು ಗುರುಬಸಪ್ಪ ಮಾತನಾಡಿ, ಸಮಾಜ ಬಾಂಧವರ ಅನಿಸಿಕೆ ಪಡೆದು ಸಮಾವೇಶವನ್ನು ಆಗಸ್ಟ್ 13ರ ಭಾನುವಾರ ಬೆಳಿಗ್ಗೆ 10.30 ಗಂಟೆಗೆ ಮಾಡಲು ತೀರ್ಮಾನಿಸಲಾಗಿದೆ. ಅಲ್ಲದೇ 2023ರಲ್ಲಿ, ಎಸ್‌ಎಸ್ ಎಲ್‌ಸಿ ಮತ್ತು ಪಿಯುಸಿ ಯಲ್ಲಿ ಶೇ. 75 ಮತ್ತು ಅಧಿಕ ಅಂಕ ಪಡೆದವರಿಗೆ ಪ್ರತಿಭಾ ಪುರಸ್ಕಾರ ನೀಡಲು ತೀರ್ಮಾನಿಸಲಾಗಿದೆ. ಜಿಲ್ಲೆಯ ಶಿವಸಿಂಪಿ ಸಮಾಜದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು.

ಅರ್ಜಿ ಸಲ್ಲಿಸಲು ಇದೇ ದಿನಾಂಕ 31 ಅಂತಿಮ ದಿನವಾಗಿದ್ದು ಅರ್ಜಿಗಳನ್ನು ಶಿವಸಿಂಪಿ ಸಮಾಜ, ಶಿವಯೋಗಾಶ್ರಮ ಕಾಂಪ್ಲೆಕ್ಸ್, ಮೊದಲನೇ ಮಹಡಿ ರೂಂ. ನಂ. 10, ಜಯದೇವ ವೃತ್ತ, ದಾವಣಗೆರೆ. ಇಲ್ಲಿ ಸಲ್ಲಿಸಲು ತಿಳಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಬೂಸ್ನೂರು (9844636575) ಹಾಗೂ ಮಲ್ಲಾಬಾದಿ ಚನ್ನಬಸಪ್ಪ (7411770949) ಅವರನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಭೆಯಲ್ಲಿ ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಬೂಸ್ನೂರು ಸ್ವಾಗತಿಸಿದರು. ಖಜಾಂಚಿಗಳಾದ ಜಗದೀಶ್ ಬಾವಿಕಟ್ಟಿ ವಂದಿಸಿದರು. ಸಹ ಕಾರ್ಯದರ್ಶಿ ಜ್ಞಾನೇಶ್ವರ್ ಜವಳಿ ನಿರೂಪಿಸಿದರು.

ಈ ಸಂದರ್ಭದಲ್ಲಿ ಗೌರವಾಧ್ಯಕ್ಷ ಹೇಮಣ್ಣ ಹೆಚ್. ಕೆ. ಕಣಕುಪ್ಪಿ ಮುರುಗೇಶಪ್ಪ, ಮಾಧ್ಯಮ ಕಾರ್ಯದರ್ಶಿ ಶಿವಕುಮಾರ್ ಬಿ.ಎಂ. ವಿರೂಪಾಕ್ಷ ಜವಳಿ, ಮಾಲ್ವಿ ಮಹಾದೇವಪ್ಪ, ಗುತ್ತಿ ಚನ್ನವೀರಪ್ಪ, ಶ್ರೀಮತಿ ಅನು ಕೊಟ್ರೇಶ್, ಶ್ರೀಮತಿ ದೀಪಾ, ಮಲ್ಲಾಬಾದಿ ಚನ್ನಬಸಪ್ಪ, ಮಹೇಶ್ ಬೇತೂರ್, ಮಾಲತೇಶ್ ಬಿ, ಮಲ್ಲಿಕಾರ್ಜುನ ಕಬ್ಬೂರ್, ಮಂಜುನಾಥ ಪಿ. ಎನ್. ಕೊಟ್ರೇಶ್ ಮುಂತಾದವರು ಹಾಜರಿದ್ದು ಸಲಹೆ ಸೂಚನೆಗಳನ್ನು ನೀಡಿದರು.

## ಜನ ಚಿಂತನ

ಇಂದು ನಮಗರಿವಿರುವ ವಿಶ್ವ ಜನಸಂಖ್ಯಾ ದಿನ
ಚರ್ಚಿಸಬೇಕಿದೆ ಒಂದಷ್ಟು ವಿಚಾರವನ್ನ
ಸರ್ವರೂ ಮಾಡಬೇಕಿದೆ ಚಿಂತನ
ಜನಸಂಖ್ಯೆ ಏರುತ್ತಿದೆ ಪ್ರತಿದಿನ
ತಂದೊಡ್ಡುತ್ತಿದೆ ಹಲವು ಸಮಸ್ಯೆಯನ್ನ
ಇದು ಮಿತಿಯಲ್ಲಿದ್ದರೆ ವರದಾನ
ನಾವೇ ಬಳಸಿದರೆ ಎಲ್ಲಾ ಸೌಲಭ್ಯವನ್ನ
ಮುಂದಿನ ಪೀಳಿಗೆಗೆ ಉಳಿಸುವುದು ಏನನ್ನ?
ನಮ್ಮೊಳಗೇ ಹಾಕಿಕೊಂಡು ಈ ಪ್ರಶ್ನೆಯನ್ನ
ಇಡಲೇಬೇಕಿದೆ ಎಚ್ಚರಿಕೆಯ ಹೆಜ್ಜೆಯನ್ನ
ಇಲ್ಲದಿದ್ದರೆ ನಮಗೆ ಉಳಿಗಾಲವಿಲ್ಲ ಇನ್ನ.

**- ಶ್ರೀಮತಿ ಉಷಾ ಈ.**
ಕನ್ನಡ ಉಪನ್ಯಾಸಕರು, ದಾವಣಗೆರೆ.


## 13ರಂದು ನಗರಕ್ಕೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಗುಂಜನ್ ಕೃಷ್ಣ

ದಾವಣಗೆರೆ, ಜು.10- ಕೈಗಾರಿಕಾಭಿವೃದ್ಧಿ ಆಯುಕ್ತರು ಮತ್ತು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ನಿರ್ದೇಶಕರು ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಗುಂಜನ್ ಕೃಷ್ಣ ಅವರು ಇದೇ ದಿನಾಂಕ 13 ರಂದು ನಗರಕ್ಕೆ ಆಗಮಿಸಿ, ವಿವಿಧ ಸಭೆಗಳಲ್ಲಿ ಭಾಗವಹಿಸಲಿದ್ದಾರೆ.

## ಇಂದು ಸ್ಪರ್ಧಾ ವಿಜೇತರಿಗೆ ಸನ್ಮಾನ

ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತು ದಾವಣಗೆರೆ ದಕ್ಷಿಣ ವಲಯ ಹಾಗೂ ಸಾಕ್ಷರತಾ ಮತ್ತು ಶಾಲಾ ಶಿಕ್ಷಣ ಇಲಾಖೆ ಸಹಯೋಗದಲ್ಲಿ ಇಂದು ಮಧ್ಯಾಹ್ನ 3.30 ಕ್ಕೆ ಸೀತಮ್ಮ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ವಿಶ್ವ ಜನಸಂಖ್ಯಾ ದಿನಾಚರಣೆ ಹಾಗೂ ಪ್ರೌಢಶಾಲಾ ವಿಭಾಗದ ಸ್ಪರ್ಧಾ ವಿಜೇತರಿಗೆ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಎ.ಜೆ. ರವಿಕುಮಾರ್ ಅಧ್ಯಕ್ಷತೆ ವಹಿಸುವರು. ಕ್ಷೇತ್ರ ಶಿಕ್ಷಣಾಧಿಕಾರಿ ಬಿ.ಎಂ. ದಾರುಕೇಶ್, ಡಿವೈಎಸ್ಪಿ ಬಿ.ಎಸ್. ಬಸವರಾಜ್, ಉದ್ಯಮಿ ದೇವರಮನಿ ಶಿವ ಕುಮಾರ್, ಉಪ ಪ್ರಾಚಾರ್ಯ ಎ.ಆರ್. ಮಂಜಪ್ಪ, ಉಪನ್ಯಾಸಕ ಡಾ. ನವೀನ್ ಗಂಗಾಧರ್ ಕೂಡ್ಲಿಗಿ, ಕರಾಮಸಾ ಪರಿಷತ್ ಕಾರ್ಯದರ್ಶಿ ಡಾ. ಧನಂಜಯ ಮೂರ್ತಿ ಭಾಗವಹಿಸಲಿದ್ದಾರೆ.

## ವೈ. ವಸಂತಪ್ಪ ನಿವೃತ್ತಿ : ಶ್ರೀಮತ್ ಸಾಧು ಸದ್ಧರ್ಮ ವೀರಶೈವ ಸಂಘದಿಂದ ಸನ್ಮಾನ



ದಾವಣಗೆರೆ, ಜು. 10 - ನಗರದ ಶ್ರೀ ಶಾಮನೂರು ಶಿವಶಂಕರಪ್ಪ ಪಾರ್ವತಮ್ಮ ಸಮುದಾಯ ಭವನ ಹಾಗೂ ಶ್ರೀ ತರಳಬಾಳು ಸಭಾಭವನದಲ್ಲಿ 23 ವರ್ಷಗಳ ಕಾಲ ಸುದೀರ್ಘ ಸೇವೆ ಸಲ್ಲಿಸಿರುವ ವೈ. ವಸಂತಪ್ಪ ಅವರು ಇದೀಗ ವಿಶ್ರಾಂತ ಜೀವನಕ್ಕೆ ಕಾಲಿರಿಸಿದ್ದಾರೆ.

ವಸಂತಪ್ಪ ಅವರು ತರಳಬಾಳು ಜಗದ್ಗುರು ವಿದ್ಯಾ ಸಂಸ್ಥೆಯ ವಿವಿಧ ಪ್ರೌಢಶಾಲೆಗಳಲ್ಲಿ ಮುಖ್ಯೋಪಾಧ್ಯಾಯರಾಗಿ ಸೇವೆ ಸಲ್ಲಿಸಿದ್ದು, ನಿವೃತ್ತಿಯ ನಂತರ ಸೇವಾ ಮನೋಭಾವನೆಯಿಂದ ಕಲ್ಯಾಣ ಮಂಟಪಗಳಲ್ಲಿ ಸೇವೆ ಸಲ್ಲಿಸುತ್ತಿದ್ದರು.

ಶ್ರೀಮತ್ ಸಾಧು ಸದ್ಧರ್ಮ ವೀರಶೈವ ಸಂಘದ ಅಧ್ಯಕ್ಷ ಎಚ್. ಆರ್.ಬಸವರಾಜಪ್ಪ ಅವರು ತಮ್ಮ ಕಾರ್ಯಾಲಯದಲ್ಲಿ ವಸಂತಪ್ಪ ಅವರನ್ನು ಆತ್ಮೀಯವಾಗಿ ಸನ್ಮಾನಿಸಿ ಶುಭ ಹಾರೈಸಿ ಬೀಳ್ಕೊಡಲಾಯಿತು.

ವೈ ವಸಂತಪ್ಪ ಅವರು ಸನ್ಮಾನ ಸ್ವೀಕರಿಸಿ ಮಾತನಾಡಿ, ಕಲ್ಯಾಣ ಮಂಟಪದ 23 ವರ್ಷಗಳ ಸೇವಾ ಅವಧಿಯಲ್ಲಿ ಪೂಜ್ಯರು ಹಾಗೂ ಸಂಘದ ಅಧ್ಯಕ್ಷರುಗಳು ನೀಡಿದ ಜವಾಬ್ದಾರಿ ಕಾರ್ಯಗಳನ್ನು ಅತ್ಯಂತ ಯಶಸ್ವಿಯಾಗಿ ನಿರ್ವಹಿಸಿದ ತೃಪ್ತಿ ನನಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಉಪಸ್ಥಿತರಿದ್ದ ಸಂಘದ ಕಾರ್ಯದರ್ಶಿಗಳಾದ ಎಂ. ಬಿ. ಸಂಗಮೇಶ್ವರ ಗೌಡ, ಬಿ. ವಾಮದೇವಪ್ಪ ಮತ್ತಿತರರು ವಸಂತಪ್ಪನವರ ವಿಶ್ರಾಂತ ಜೀವನ ಸುಖಕರವಾಗಿರಲೆಂದು ಶುಭ ಕೋರಿದರು.

## ಗಿರಿಜಾರ ಪುಸ್ತಕ ಪ್ರಬಂಧ ಸ್ಪರ್ಧೆ

ದಾವಣಗೆರೆ, ಜು. 10 - ಹಿರಿಯ ಲೇಖಕಿ ಟಿ. ಗಿರಿಜಾ ಅವರ ನೆನಪಿನಲ್ಲಿ 'ಜಿಲ್ಲೆ ಸಮಾಚಾರ' ಪತ್ರಿಕಾ ಬಳಗವು ಪ್ರಬಂಧ ಸ್ಪರ್ಧೆಯೊಂದನ್ನು ಆಯೋಜಿಸಿದೆ. ಪ್ರಬಂಧವು 'ಟಿ. ಗಿರಿಜಾರ ಯಾವುದೇ ಪುಸ್ತಕ' ಕುರಿತ ನಿಮ್ಮ ಅನಿಸಿಕೆಯನ್ನು 3 ಪುಟಕ್ಕೆ ಮಿತಿಗೊಳಪಡಿಸಿ ಬರೆಯಬೇಕು. ಕೈಬರವಣಿಗೆಗೆ ಆದ್ಯತೆ. ಡಿಟಿಪಿ ಮಾಡಿ ಕಳುಹಿಸಿ ಕೊಡಬಹುದಾಗಿದೆ. ಪ್ರಬಂಧವನ್ನು ಇದೇ ದಿನಾಂಕ 12ರೊಳಗೆ ತಲುಪುವಂತೆ ಕಳುಹಿಸಬೇಕು. ವ್ಯವಸ್ಥಾಪಕರು, ಜಿಲ್ಲೆ ಸಮಾಚಾರ ದಿನ ಪತ್ರಿಕಾ ಬಳಗ, ನಂ : 12, ನಾಯಕ ಹಾಸ್ಟೆಲ್ ಕಾಂಪ್ಲೆಕ್ಸ್, ಪಿ.ಜೆ. ಬಡಾವಣೆ, ದಾವಣಗೆರೆ. ಮೊ: 9740112249, 9606568950.

# ಲಯನ್ಸ್ ಕ್ಲಬ್ ಕಣ್ಣು ಪರೀಕ್ಷೆ ಸ್ವಾಗತಾರ್ಹ




**ರಾಣೇಬೆನ್ನೂರು**

ರಾಣೇಬೆನ್ನೂರು, ಜು. 10- ಇಂದಿನ ಒತ್ತಡದ ಬದುಕಿನಲ್ಲಿ ಆರೋಗ್ಯದತ್ತ ಗಮನಹರಿಸುವುದು ಕಡಿಮೆಯಾಗುತ್ತಿದೆ. ಲಯನ್ಸ್ ಕ್ಲಬ್ ಆ ದಿಸೆಯಲ್ಲಿ ಇಂತಹ ಉಚಿತ ಶಿಬಿರಗಳ ಮೂಲಕ ಜನರ ಆರೋಗ್ಯದತ್ತ ಗಮನಹರಿಸುವುದು ಸ್ವಾಗತಾರ್ಹವಾದುದು. ಲಯನ್ಸ್ ಸಂಸ್ಥೆ ಇನ್ನು ಹೆಚ್ಚು ಶಿಬಿರಗಳನ್ನು ನಡೆಸಲಿ ಎಂದು ಶಾಸಕ ಪ್ರಕಾಶ ಕೋಳಿವಾಡ ಹೇಳಿದರು.

ಲಯನ್ಸ್, ಇನ್ನರ್ ವ್ಹೀಲ್, ಸ್ವಾಭಿಮಾನಿ ಕನ್ನಡ ಸಂಘ, ಶಂಕರ ಆಸ್ಪತ್ರೆ ಸಂಯುಕ್ತವಾಗಿ ನಡೆಸಿದ ಕಣ್ಣು ಪರೀಕ್ಷೆ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಲಯನ್ಸ್ ಕ್ಲಬ್ ಹಾಗೂ ಇತರೆ ಸೇವಾ ಸಂಸ್ಥೆಯವರು ನಡೆಸುವ ಇಂತಹ ಆರೋಗ್ಯ ಶಿಬಿರಗಳಲ್ಲಿ ಸಾರ್ವಜನಿಕರು ಭಾಗವಹಿಸಿ ತಮ್ಮ ಆರೋಗ್ಯ ಕಾಪಾಡಿಕೊಳ್ಳುವಂತೆ ಶಾಸಕ ಪ್ರಕಾಶ್ ಮನವಿ ಮಾಡಿದರು. ನಗರ ಹಾಗೂ ತಾಲ್ಲೂಕಿನ ಗ್ರಾಮಗಳ 360 ಜನರು ಕಣ್ಣು ಪರೀಕ್ಷಿಸಿಕೊಂಡಿದ್ದು, 218 ಜನರು ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದಾರೆ ಎಂದು ಲಯನ್ಸ್ ಅಧ್ಯಕ್ಷ ಪ್ರಭುಲಿಂಗಪ್ಪ ಹಲಗೇರಿ ತಿಳಿಸಿದರು. ಶಿಬಿರದಲ್ಲಿ ಕೊಟ್ರೇಶ್ ಎಮ್ಮಿ, ಎಂ.ಎಸ್.ಅರಕೇರಿ, ಲೋಕೇಶ್ ನರಸಗೊಂಡರ, ಬಸವರಾಜ ಬಡಿಗೇರ, ಬಸವರಾಜ ಪಾಟೀಲ, ಅಶೋಕ ಹೊಟ್ಟಿಗೌಡ್ರ, ಎನ್.ಎಸ್. ಕುಲ್ಕರ್ಣಿ ಮತ್ತಿತರರಿದ್ದರು. ನೂತನ ಶಾಸಕ ಪ್ರಕಾಶ ಕೋಳಿವಾಡ ಹಾಗೂ 6 ಜನ ವೈದ್ಯರನ್ನು ಗೌರವಿಸಲಾಯಿತು.

# ಜಿಗಳಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಜಯಮ್ಮ



ಮಲೇಬೆನ್ನೂರು, ಜು.10- ಜಿಗಳಿ ಗ್ರಾ.ಪಂ. ನೂತನ ಅಧ್ಯಕ್ಷರಾಗಿ ಜಿ. ಬೇವಿನಹಳ್ಳಿಯ ಶ್ರೀಮತಿ ಜಯಮ್ಮ ಕೋಂ ಬಿ.ಕೆ.ರಂಗನಾಥ್ ಅವರು ಉಳಿದ 1 ತಿಂಗಳ ಅವಧಿಗೆ ಸೋಮವಾರ ನಡೆದ ಚುನಾವಣೆಯಲ್ಲಿ ಆಯ್ಕೆಯಾಗಿದ್ದಾರೆ. ಅಧ್ಯಕ್ಷ ಸ್ಥಾನದ ಚುನಾವಣೆಯಲ್ಲಿ ಜಯಮ್ಮ ರಂಗನಾಥ್ ಅವರು 11 ಮತಗಳನ್ನು ಪಡೆದು ಆಯ್ಕೆಯಾದರೆ, ಪ್ರತಿಸ್ಪರ್ಧಿ ಜಿಗಳಿಯ ಶ್ರೀಮತಿ ಮಂಜುಳಾ ಕೋಂ ಸಿ.ಎನ್. ಪರಮೇಶ್ವರಪ್ಪ ಅವರು 7 ಮತಗಳನ್ನು ಪಡೆದು ಪರಾಭವಗೊಂಡರು. ಅಧ್ಯಕ್ಷ ಸ್ಥಾನ ಸಾಮಾನ್ಯ ಮಹಿಳೆಗೆ ಮೀಸಲಾಗಿತ್ತು. ಶ್ರೀಮತಿ ವಿನೋದ ಕೋಂ ಜಿ.ಆರ್. ಹಾಲೇಶ್ ಕುಮಾರ್ ಅವರ ರಾಜೀನಾಮೆಯಿಂದಾಗಿ ಅಧ್ಯಕ್ಷ ಸ್ಥಾನ ತೆರವಾಗಿತ್ತು.

ತೋಟಗಾರಿಕೆ ಇಲಾಖೆಯ ಸಹಾಯಕ ನಿರ್ದೇಶಕರಾದ ಶ್ರೀಮತಿ ರೇಖಾ ಅವರು ಚುನಾವಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದರು. ಪಿಡಿಓ ಉಮೇಶ್, ಕಾರ್ಯದರ್ಶಿ ಶ್ರೀಮತಿ ಸುಜಾತ ಮತ್ತಿತರರು ಹಾಜರಿದ್ದರು.


## ಕರಾವಳಿ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ.,

**# 2688/2, ಡಾ.ಶ್ಯಾಮಸುಂದರ್ ಶೆಟ್ಟಿ ಬಂಟರ ಭವನದ ಹತ್ತಿರ, ಕುಂದುವಾಡ ರೋಡ್, ದಾವಣಗೆರೆ-6.**

## ಸಾರ್ವಜನಿಕ ಪ್ರಕಟಣೆ

### ವಾಹನ ಮಾರಾಟದ ಬಹಿರಂಗ ಹರಾಜು ಪ್ರಕ್ರಿಯೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ **ಕರಾವಳಿ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., #2688/2, ಡಾ.ಶ್ಯಾಮಸುಂದರ್ ಶೆಟ್ಟಿ ಬಂಟರ ಭವನದ ಹತ್ತಿರ, ಕುಂದುವಾಡ ರೋಡ್, ದಾವಣಗೆರೆ-577006** ಇವರಿಂದ ಈ ಕೆಳಗೆ ತಿಳಿಸಿದ ಸದಸ್ಯರು ಪಡೆದುಕೊಂಡ ಸಾಲವನ್ನು ಮರುಪಾವತಿ ಮಾಡದೇ ಇರುವುದರಿಂದ ಸದರಿ ಸಾಲದ ವಸೂಲಾತಿಗಾಗಿ ಅಡಮಾನವಾಗಿ ಇಟ್ಟಿರುವ ವಾಹನವನ್ನು **'ಇದ್ದ ಸ್ಥಿತಿಯಲ್ಲಿ ಇದ್ದ ಹಾಗೆ'** ಬಹಿರಂಗ ಹರಾಜು ಮೂಲಕ ಮಾರಾಟ ಮಾಡಲಾಗುವುದು. ವಾಹನವನ್ನು ಕೊಳ್ಳಲಿಚ್ಚಿಸುವವರು **ಕರಾವಳಿ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಲಿ., #2688/2, ಡಾ.ಶ್ಯಾಮಸುಂದರ್ ಶೆಟ್ಟಿ ಬಂಟರ ಭವನದ ಹತ್ತಿರ, ಕುಂದುವಾಡ ರೋಡ್, ದಾವಣಗೆರೆ-577006,** ಇಲ್ಲಿ ಬಹಿರಂಗ ಹರಾಜಿನಲ್ಲಿ ಭಾಗವಹಿಸಬಹುದೆಂದು ಈ ಮೂಲಕ ತಿಳಿಸಲಾಗಿದೆ. ಸದರಿ ಹರಾಜು ಪ್ರಕ್ರಿಯೆ ದಿನಾಂಕ: **18/07/2023 ರ ಬೆಳಿಗ್ಗೆ 11.00 ಘಂಟೆಗೆ** ಪ್ರಾರಂಭವಾಗುವುದಿದ್ದು, ಈ ಕೆಳಗೆ ನಮೂದಿಸಿದ ವಾಹನವನ್ನು ಷರತ್ತಿಗೊಳಪಟ್ಟು ಬಿಡ್ ಮೂಲಕ ಪಡೆಯಬಹುದು.

| ಕ್ರ. ಸಂ. | ಬಾಕಿದಾರರ ಹೆಸರು ಮತ್ತು ವಿಳಾಸ | ಬಾಕಿಯಾಗಿರುವ ಸಾಲದ ಅಸಲು ಮತ್ತು ಬಡ್ಡಿ ಹಾಗೂ ಇತರೆ ಖರ್ಚು | ಹರಾಜಿಗೆ ಒಳಪಡಿಸಿರುವ ಸ್ವತ್ತಿನ ವಿವರ | ಹರಾಜು ದಿನಾಂಕ ಮತ್ತು ಸ್ಥಳ |
|---|---|---|---|---|
| 1 | **ಶ್ರೀ ಗುರುಪ್ರಸಾದ್.ಎಂ.ಎಸ್ ಬಿನ್ ಸೀತಾರಾಮ ರಾವ್ ಎಂ.** ಎ.ವಿ. ಬುಕ್ ಹೌಸ್, # 3300/3. ಬಾಪೂಜಿ ಹೈಸ್ಕೂಲ್ ಎದುರು, ಎಂ.ಸಿ.ಸಿ. ಬಿ.ಬ್ಲಾಕ್, ದಾವಣಗೆರೆ. | **ದಿನಾಂಕ 31/05/2023 ಕ್ಕೆ ರೂ. 92,995/-** ಹಾಗೂ ಮುಂದಿನ ಬಡ್ಡಿ + ಇತರೆ ಖರ್ಚು. | ರಿಜಿಸ್ಟರ್ ದಿನಾಂಕ : 26.07.2016<br>ರಿಜಿಸ್ಟರ್ ನಂ. : KA21 P 2346<br>ಚಾಸಿಸ್ ನಂ. : MDHFBACD0G6303107<br>ಇಂಜಿನ್ ನಂ. B4AA400E066452<br>ಮಾಡೆಲ್ : DATSUN REDI GO S(0)<br>ಬಾಡಿ : Hatch<br>ಮಾಡೆಲ್ : 06/2016<br>ಎಫ್.ಸಿ. ದಿನಾಂಕ : 25.07.2031<br>ಇಂಧನ : Petrol<br>ಬಣ್ಣ : RED | **ಕರಾವಳಿ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಲಿ.,** #2688/2. ಡಾ.ಶ್ಯಾಮಸುಂದರ್ ಶೆಟ್ಟಿ ಬಂಟರ ಭವನದ ಹತ್ತಿರ, ಕುಂದುವಾಡ ರೋಡ್, ದಾವಣಗೆರೆ-577006.<br>**ದಿನಾಂಕ : 18/07/2023**<br>**ಬೆಳಿಗ್ಗೆ : 11.00 ಘಂಟೆಗೆ.** |

**ಸೂಚನೆ :** **1)** ಹರಾಜಿನಲ್ಲಿ ಭಾಗವಹಿಸುವವರು ಹರಾಜಿಗೂ ಮುಂಚೆ ರೂ.25000/- ಗಳನ್ನು ಸಹಕಾರಿಯಲ್ಲಿ ಡಿಪಾಸಿಟ್ ಮಾಡತಕ್ಕದ್ದು. **2)** ಅಧಿಕೃತ ಬಿಡ್‌ದಾರರು ಮಾರಾಟಾಧಿಕಾರಿಗಳು ಹರಾಜನ್ನು ಒಪ್ಪಿದ ತಕ್ಷಣ ಹರಾಜು ಮೊಬಲಗಿನ ಶೇಕಡಾ 15 ರಷ್ಟು ಹಣವನ್ನು ಆ ಕೂಡಲೇ ಪಾವತಿ ಮಾಡತಕ್ಕದ್ದು. ಉಳಿದ ಹಣವನ್ನು ಮತ್ತು ಸ್ಟ್ಯಾಂಪ್ ಪೇಪರ್‌ಗೆ ಹಾಗೂ ನೋಂದಣಿಗೆ ತಗುಲುವ ವೆಚ್ಚವನ್ನು ಹರಾಜು ಆದ 7 ದಿವಸಗಳೊಳಗೆ ಪಾವತಿ ಮಾಡತಕ್ಕದ್ದು, ತಪ್ಪಿದ್ದಲ್ಲಿ ಡಿಪಾಸಿಟ್ ಮೊತ್ತವನ್ನು ಸಹಕಾರಿಗೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. **3)** ಮಾರಾಟಾಧಿಕಾರಿಗಳು ಹರಾಜನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಥವಾ ಯಾವುದೇ ಕಾರಣವನ್ನು ನೀಡದೇ ಮುಂದೂಡುವ ಇಲ್ಲವೇ ರದ್ದು ಪಡಿಸುವ ಅಧಿಕಾರವನ್ನು ಹೊಂದಿರುತ್ತಾರೆ. **4)** ಈ ವಾಹನವು ಹೇಗಿದೆಯೋ ಹಾಗೆ ಹರಾಜು ಮಾಡಲಾಗುವುದು. **5)** ಈ ಹರಾಜಿನಲ್ಲಿ ಭಾಗವಹಿಸುವವರು ತಮ್ಮ ಗುರುತಿನ ಚೀಟಿ ಹಾಗೂ ವಿಳಾಸ ದೃಢೀಕರಣ ಪತ್ರವನ್ನು ಒದಗಿಸತಕ್ಕದ್ದು. **6)** ಹೆಚ್ಚಿನ ಮಾಹಿತಿಗಾಗಿ ಮಾರಾಟಾಧಿಕಾರಿಗಳನ್ನು ಅಥವಾ ಸಹಕಾರಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರನ್ನು ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು. **ದೂರವಾಣಿ ಸಂಖ್ಯೆ : 08192-296516, 9844111334, 8147378885.**

ಸ್ಥ : ದಾವಣಗೆರೆ. ದಿನಾಂಕ : 10/07/2023

**ಸಹಿ/- ಮಾರಾಟಾಧಿಕಾರಿ,**
ಕ.ಸೌ.ಪ.ಸ.ನಿ., ದಾವಣಗೆರೆ

**ಸಹಿ/- ಮುಖ್ಯ ಕಾರ್ಯನಿರ್ವಹಣಾಧಿಕಾರಿ,**
ಕರಾವಳಿ ಸೌಹಾರ್ದ ಪತ್ತಿನ ಸಹಕಾರಿ ನಿ., ದಾವಣಗೆರೆ

# ಪಶುಸಂಗೋಪನಾ ವೈದ್ಯರ ನೇಮಕಾತಿಗೆ ಶೀಘ್ರ ಕ್ರಮ



ಬೆಂಗಳೂರು, ಜು.10- ಪಶುಸಂಗೋಪನೆ ಇಲಾಖೆಯಲ್ಲಿ ಖಾಲಿ ಹುದ್ದೆಗಳಿಗೆ ಅಗತ್ಯ ವೈದ್ಯರ ನೇಮಕಾತಿಗೆ ಕ್ರಮ ವಹಿಸಲಾಗಿದ್ದು, ಹೆಚ್ಚುವರಿ ಹುದ್ದೆಗಳಲ್ಲಿ ಕೆಲಸ ಮಾಡುತ್ತಿರುವವರನ್ನು ವರ್ಗಾವಣೆ ಮಾಡುವ ಮೂಲಕ ನಿರುದ್ಯೋಗ ನಿವಾರಿಸಲು ಕ್ರಮಕೈಗೊಳ್ಳುವ ಭರವಸೆಯನ್ನು ಪಶುಸಂಗೋಪನೆ ಸಚಿವ ಕೆ. ವೆಂಕಟೇಶ್ ತಿಳಿಸಿದ್ದಾರೆ.

ವಿಧಾನಸಭೆಯಲ್ಲಿ ಪ್ರಶ್ನೋತ್ತರ ವೇಳೆಯಲ್ಲಿ ಶಾಸಕರಾದ ಗುರುರಾಜ ಶೆಟ್ಟಿ, ಗಂಟಿಹೊಳೆ, ಭರತ್ ಶೆಟ್ಟಿ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಉ.ಕನ್ನಡ, ದ.ಕನ್ನಡ ಜಿಲ್ಲೆಗಳಲ್ಲಿ ಪಶುವೈದ್ಯರ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆ. 2-3 ತಿಂಗಳಲ್ಲಿ ಪಶುವೈದ್ಯರ ನೇಮಕಾತಿಗೆ ಕ್ರಮ ಕೈಗೊಳ್ಳಲಾಗುವುದು ಎಂದರು.

ಖಾಲಿ ಇರುವ ಪಶು ವೈದ್ಯ ಇನ್ಸ್‌ಪೆಕ್ಟರ್ 400 ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ನಡೆಯಲಿದ್ದು, ಡಿಸೆಂಬರ್ ವೇಳೆಗೆ ಪೂರ್ಣಗೊಳ್ಳಲಿದೆ. ಖಾಲಿ ಹುದ್ದೆಗಳಿಗೆ ವೈದ್ಯರನ್ನು ನಿಯೋಜನೆ ಮಾಡಲಾಗುವುದು ಎಂದರು. ವಿವಿಧ ತಾಲ್ಲೂಕುಗಳಲ್ಲಿ ಹೆಚ್ಚುವರಿ ವೈದ್ಯಾಧಿಕಾರಿಗಳನ್ನು ಕೊರತೆ ಇರುವ ಕಡೆ ವರ್ಗಾವಣೆ ಮಾಡಲಾಗುವುದು. ನಿಯಮದ ಪ್ರಕಾರ 5 ಸಾವಿರ ಜಾನುವಾರುಗಳಿಗೆ ಒಬ್ಬ ವೈದ್ಯರಿರಬೇಕಿದೆ. ಈ ಅನುಪಾತ ಕೆಲವು ಕಡೆ ಪಾಲನೆಯಾಗಿಲ್ಲ ಎಂದು ಹೇಳಿದರು.

ಸಭಾಧ್ಯಕ್ಷ ಯು.ಟಿ. ಖಾದರ್ ಅವರು ಮಧ್ಯೆ ಪ್ರವೇಶಿಸಿ, ಎಲ್ಲಾ ಕ್ಷೇತ್ರಗಳಲ್ಲೂ ಪಶುವೈದ್ಯರ ಕೊರತೆ ಸಮಸ್ಯೆ ಇದೆ. ನಾವು ಮನುಷ್ಯರ ರಕ್ಷಣೆಗಷ್ಟೇ ಅಲ್ಲ ಬಾಯಿ ಬಾರದ ಜಾನುವಾರು ರಕ್ಷಣೆಗೂ ಆದ್ಯತೆ ನೀಡಬೇಕು ಎಂದರು. ಪಶುವೈದ್ಯರ ಕೊರತೆ ನೀಗಿಸಲು ಖಾಸಗಿ ಪಶುವೈದ್ಯಕೀಯ ಕಾಲೇಜಿಗೆ ಅನುಮತಿ ನೀಡಬೇಕೆಂದು ಸಲಹೆ ನೀಡಿದರು. ಇದಕ್ಕೂ ಮೊದಲು ಗುರುರಾಜ ಶೆಟ್ಟಿ ಮಾತನಾಡಿ, ತಮ್ಮ ಬೈಂದೂರು ಕ್ಷೇತ್ರದಲ್ಲಿ 83 ಸಾವಿರ ಜಾನುವಾರುಗಳಿವೆ, ಇಬ್ಬರು ಮಾತ್ರ ಪಶುವೈದ್ಯರಿದ್ದಾರೆ. ಜಾನುವಾರು ವೈದ್ಯರ ಅನುಪಾತ 40 ಸಾವಿರ ಮತ್ತು 2 ಎಂಬಂತಾಗಿದೆ ಎಂದು ಹೇಳಿದರು.

ರಾಷ್ಟ್ರೀಯ ನಿಯಮಗಳ ಪ್ರಕಾರ 4 ಸಾವಿರ ಜಾನುವಾರುಗಳಿಗೆ ಒಬ್ಬ ವೈದ್ಯರಿರಬೇಕು. ಕ್ಷೇತ್ರದಲ್ಲಿ ಹಾಲು ಉತ್ಪಾದನೆ 3 ಲಕ್ಷ ಲೀ.ನಿಂದ ಒಂದೂವರೆ ಲಕ್ಷ ಲೀ.ಗೆ ಕುಸಿತವಾಗಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಪಶು ಆಸ್ಪತ್ರೆಗಳ ಔಷಧಿ ಖರೀದಿಗೆ ಬೆಳಗಾವಿ ಜಿಲ್ಲೆಗೆ 12 ಕೋಟಿ ನೀಡಲಾಗಿದೆ. ನಮ್ಮ ಉಡುಪಿ ಜಿಲ್ಲೆಗೆ 70 ಲಕ್ಷ ಮಾತ್ರ ನೀಡಲಾಗಿದೆ . ಈ ತಾರತಮ್ಯ ನಿವಾರಿಸಬೇಕು ಎಂದರು.

# ಸಚಿವ ಎಸ್.ಎಸ್. ಮಲ್ಲಿಕಾರ್ಜುನ್‌ಗೆ ಸಾಣೇಹಳ್ಳಿ ಶ್ರೀಗಳಿಂದ ಆಶೀರ್ವಾದ



ಸಾಣೇಹಳ್ಳಿ, ಜು.10- ಇಲ್ಲಿನ ಶ್ರೀ ಮಠಕ್ಕೆ ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳನ್ನು ಇಂದು ಭೇಟಿ ಮಾಡಿ ಆಶೀರ್ವಾದ ಪಡೆದರು.

ಈ ಸಂದರ್ಭದಲ್ಲಿ ಉಪಸ್ಥಿತರಿದ್ದ ಗ್ರಾಮಸ್ಥರು ರಾಗಿಯ ಹಣ ರೈತರಿಗೆ ಇನ್ನೂ ಬಾರದಿರುವ ಬಗ್ಗೆ, ತೆಂಗಿನ ಬೆಲೆ ಕುಸಿದಿರುವ ಬಗ್ಗೆ, ಶ್ರೀಗಂಧ ಬೆಳೆ ಕಟಾವಿಗೆ ಅನುಮತಿಯ ಬಗ್ಗೆ, ತೆಂಗಿಗೆ ತಗುಲಿರುವ ರೋಗದ ಬಗ್ಗೆ, ಭದ್ರಾ ಮೇಲ್ದಂಡೆ ಯೋಜನೆಯನ್ನು ತೀವ್ರಗೊಳಿಸುವ ಬಗ್ಗೆ ಸೇರಿದಂತೆ, ಅನೇಕ ಸಮಸ್ಯೆಗಳ ಬಗ್ಗೆ ಸಮಾಲೋಚಿಸಿದರು. ಇವುಗಳನ್ನು ಗಮನದಲ್ಲಿಟ್ಟುಕೊಂಡು ಸದನದಲ್ಲಿ ಚರ್ಚಿಸಿ, ಸೂಕ್ತ ಕ್ರಮ ಕೈಗೊಳ್ಳುವ ಭರವಸೆಯನ್ನು ಸಚಿವರು ನೀಡಿದರು. ಪಂಡಿತಾರಾಧ್ಯ ಶ್ರೀಗಳು, ಜನ ಮೆಚ್ಚುವ ರೀತಿಯಲ್ಲಿ ಆಡಳಿತ ನೀಡುವಂತೆ ಮಾರ್ಗದರ್ಶನ ನೀಡಿದರು.

# 9 ಐಎಎಸ್ ಅಧಿಕಾರಿಗಳ ವರ್ಗ

ಬೆಂಗಳೂರು, ಜು.10- ಕರ್ನಾಟಕ ಸರ್ಕಾರ ಸೋಮವಾರ ಒಟ್ಟು 9 ಐಎಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿದೆ. ವಿಜಯಪುರ ಜಿಲ್ಲಾಧಿಕಾರಿಯಾಗಿದ್ದ ವಿಜಯಮಹಾಂತೇಶ ಬಿ ದ್ಯಾಮಣ್ಣನವರ್ ಇವರನ್ನ ವರ್ಗಾಯಿಸಿ, ಯಾವುದೇ ಜಾಗ ತೋರಿಸದೇ ಇವರ ಜಾಗಕ್ಕೆ ಬಾಗಲಕೋಟೆ ಜಿಲ್ಲೆಯ ಜಿ.ಪಂ. ಸಿಇಒ ಬೂಬಾಲನ್ ಅವರನ್ನ ನೇಮಿಸಿದೆ.ಹಾಸನ ಜಿಲ್ಲಾಧಿಕಾರಿಯಾಗಿ ಸತ್ಯಭಾಮ ಸಿ, ಇವರನ್ನ ನೇಮಿಸಿದೆ, ಪದ್ಮಾ ಬಸವಂತಪ್ಪ ಇವರನ್ನ ಕೋಲಾರ ಜಿಲ್ಲಾಪಂಚಾಯತ್ ಸಿಇಒ ಆಗಿ ನೇಮಿಸಿದೆ, ನಂಗ್ಜಾಯಿ ಮೊಹಮದ್ ಆಲಿ ಅಕ್ರಮ್ ಶಾ ಇವರನ್ನ ಹೊಸಪೇಟೆ ಸಬ್ ಡಿವಿಷನ್ ಉಪವಿಭಾಗಾಧಿಕಾರಿಯಾಗಿ ಸರ್ಕಾರ ನೇಮಿಸಿ ಆದೇಶಿಸಿದೆ.

# ಮುಕ್ತ ಮಾರುಕಟ್ಟೆಗೆ ಅಕ್ಕಿ ಮಾರಾಟ ನಿಯಮ ಬದಲಿಸಲು ಕೇಂದ್ರ ಪರಿಶೀಲನೆ

ನವದೆಹಲಿ, ಜು. 10 – ಮುಕ್ತ ಮಾರುಕಟ್ಟೆಗೆ ಸಣ್ಣ ವರ್ತಕರ ಮೂಲಕ ಅಕ್ಕಿ ಮಾರುವ ಯೋಜನೆಗೆ ನೀರಸ ಪ್ರತಿಕ್ರಿಯೆ ದೊರೆತಿದೆ. ಈ ಹಿನ್ನೆಲೆಯಲ್ಲಿ ನಿಯಮಗಳನ್ನು ಬದಲಿಸಲು ಕೇಂದ್ರ ಸರ್ಕಾರ ಪರಿಶೀಲಿಸುತ್ತಿದೆ. ಕಳೆದ ಜುಲೈ 5ರಂದು ಭಾರತೀಯ ಆಹಾರ ನಿಗಮವು 3.88 ಲಕ್ಷ ಟನ್ ಅಕ್ಕಿ ಮಾರಲು ಮುಂದಾಗಿತ್ತು. ಆದರೆ, 170 ಟನ್ ಅಕ್ಕಿಯನ್ನು ಐವರು ಬಿಡ್ಡರ್‌ಗಳಿಗೆ ಮಾರಲು ಮಾತ್ರ ಸಾಧ್ಯವಾಗಿತ್ತು. ಜುಲೈ 12ರಂದು ಮುಂದಿನ ಹರಾಜು ನಡೆಯಲಿದೆ.

ಈ ಹರಾಜಿನಲ್ಲಿ ಪಾಲ್ಗೊಳ್ಳಲು ರಾಜ್ಯಗಳಿಗೆ ಅವಕಾಶ ಇರಲಿಲ್ಲ. ಮುಂದಿನ ಸುತ್ತುಗಳ ಪ್ರತಿಕ್ರಿಯೆ ಪರಿಗಣಿಸಿದ ನಂತರ ನಿಯಮಗಳಿಗೆ ಪರಿಷ್ಕರಣೆ ತರಲು ಕೇಂದ್ರ ಸರ್ಕಾರ ಯೋಚಿಸುತ್ತಿದೆ. ಈ ಬಗ್ಗೆ ಹೇಳಿಕೆ ನೀಡಿರುವ ಕೇಂದ್ರ ಆಹಾರ ಕಾರ್ಯದರ್ಶಿ ಸಂಜೀವ್ ಛೋಪ್ರ, ಎಷ್ಟು ಅಕ್ಕಿ ಮಾರಾಟವಾಗುತ್ತಿದೆ ಎಂಬುದು ಮುಖ್ಯವಲ್ಲ. ಕೃತಕವಾಗಿ ಬೆಲೆ ಏರಿಕೆಯಾಗುವುದನ್ನು ತಡೆಯಲು ಸರ್ಕಾರ ಮುಂದಾಗಲಿದೆ ಎಂಬ ಸಂಕೇತ ದೊರೆಯುವುದು ಮುಖ್ಯ. ಈಗ ಆ ಸಂಕೇತ ನೀಡಲಾಗಿದೆ ಎಂದರು.

# ಮಣಿಪುರ ಸಂಘರ್ಷ : ಅಗತ್ಯ ವಸ್ತು, ಔಷಧಗಳ ತೀವ್ರ ಕೊರತೆ

ಚುರಚಂದಪುರ, ಜು. 10 – ಮಣಿಪುರದಲ್ಲಿ ನಡೆಯುತ್ತಿರುವ ಸಂಘರ್ಷದ ಕಾರಣದಿಂದಾಗಿ ಅಗತ್ಯ ವಸ್ತುಗಳು ಹಾಗೂ ಔಷಧಿಗಳ ತೀವ್ರ ಕೊರತೆಯಾಗಿದೆ. ಇದು ರಾಜ್ಯದ ನಿವಾಸಿಗಳ ಸಮಸ್ಯೆ ಹೆಚ್ಚಿಸಿದೆ.

ಕೇಂದ್ರ ಸರ್ಕಾರದ ಕರೆಯ ಮೇಲೆ ಕುಕಿ ಸಮುದಾಯದವರು ರಾಷ್ಟ್ರೀಯ ಹೆದ್ದಾರಿ ತಡೆಯನ್ನು ತೆರವುಗೊಳಿಸಿದ್ದಾರೆ. ಇಲ್ಲಿನ ರಾಷ್ಟ್ರೀಯ ಹೆದ್ದಾರಿ 2, ಇಂಫಾಲ್ ಕಣಿವೆಯ ಜೀವನಾಡಿಯಾಗಿದೆ. ಆದರೆ, ಮೀಟಿ ಸಮುದಾಯದವರು ರಸ್ತೆ ತಡೆಯನ್ನು ಮುಂದುವರೆಸಿದ್ದಾರೆ.

ಚುರಚಂದಪುರದಿಂದ ಯಾವುದೇ ಸರಕುಗಳು ಈಗ ಇಂಫಾಲ್ ಕಣಿವೆಗೆ ತಲುಪುತ್ತಿಲ್ಲ. ಈ ಜಿಲ್ಲೆಯಲ್ಲಿ ಕುಕಿ ಸಮುದಾಯದವರು ಹೆಚ್ಚಾಗಿದ್ದಾರೆ. ಚುರಚಂದಪುರ ಸುಮಾರು ನಾಲ್ಕು ಲಕ್ಷ ಜನರನ್ನು ಹೊಂದಿದೆ. ಸಂಘರ್ಷದ ನಂತರ 10 ಸಾವಿರಕ್ಕೂ ಹೆಚ್ಚು ಜನರು ನಿರಾಶ್ರಿತರ ಶಿಬಿರಗಳಲ್ಲಿದ್ದಾರೆ.

ವೈದ್ಯರು ಅದರಲ್ಲೂ ಶಸ್ತ್ರಚಿಕಿತ್ಸಕರ ಕೊರತೆ ತೀವ್ರವಾಗಿದೆ. ಡಯಾಲಿಸಿಸ್ ರೀತಿಯ ಚಿಕಿತ್ಸೆ ಸಹ ಸಾಧ್ಯವಾಗುತ್ತಿಲ್ಲ. ಕ್ಯಾನ್ಸರ್, ಏಡ್ಸ್ ಮುಂತಾದ ಔಷಧಿಗಳೂ ಲಭ್ಯವಾಗುತ್ತಿಲ್ಲ.

ಗುಂಡೇಟು ಸೇರಿದಂತೆ, ಹಲವಾರು ತುರ್ತು ಸಮಸ್ಯೆ ಎದುರಿಸುತ್ತಿರುವ ಜನರಿಗಾದರೂ ನೆರವು ನೀಡಲು ವೈದ್ಯರ ಅಗತ್ಯವಿದೆ ಎಂದು ಚುರಚಂದಪುರ ಜಿಲ್ಲಾ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ಟಿಂಗ್ಲೊನ್ಲಿ ಹೇಳಿದ್ದಾರೆ.

ಆಸ್ಪತ್ರೆಯಲ್ಲಿ ಶನಿವಾರದವರೆಗೂ ಗುಂಡೇಟಿಗೆ ಸಿಲುಕಿದ 288 ಜನರಿಗೆ ಚಿಕಿತ್ಸೆ ನೀಡಲಾಗಿದೆ. ಡಯಾಲಿಸಿಸ್ ಸೌಲಭ್ಯ ಇಲ್ಲದ ಕಾರಣ ಸಾಮರ್ಥ್ಯ



**ಗುಂಡೇಟಿನಿಂದ ಗಾಯಗೊಂಡವರಿಗೆ ಚಿಕಿತ್ಸೆ ನೀಡಲು ವೈದ್ಯರಿಲ್ಲ**

ಇರುವವರು ಐಝ್ವಾಲ್‌ಗೆ ತೆರಳಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಬಡವರಿಗೆ ಯಾವುದೇ ದಾರಿ ತೋಚುತ್ತಿಲ್ಲ.

ಕೇಂದ್ರ ಸರ್ಕಾರ ವೈದ್ಯರ ಆರು ತಂಡಗಳನ್ನು ಮಣಿಪುರಕ್ಕೆ ರವಾನಿಸಿದೆ. ಆದರೆ, ತೀವ್ರ ರೋಗಗಳಿಂದ ಬಳಲುತ್ತಿರುವವರಿಗೆ ನೆರವು ನೀಡಲು ತಜ್ಞರ ಅಗತ್ಯವಿದೆ. ಆಸ್ಪತ್ರೆಗೆ ಔಷಧಿ ಹಾಗೂ ಶಸ್ತ್ರಚಿಕಿತ್ಸೆ ಉಪಕರಣಗಳ ಅಗತ್ಯವೂ ಇದೆ ಎಂದು ಡಾ. ಟಿಂಗ್ಲೊನ್ಲಿ ಹೇಳಿದ್ದಾರೆ.

ಪ್ರತಿದಿನ ಚುರಚಂದಪುರ – ಬಿಷ್ಣುಪುರ ವಲಯದಲ್ಲಿ ಗುಂಡಿನ ಚಕಮಕಿಯ ಘಟನೆಗಳು ನಡೆಯುತ್ತಲೇ ಇವೆ. ಇದರಿಂದಾಗಿ ಗಾಯಗೊಳ್ಳುವವರು ಹಾಗೂ ಸಾವನ್ನಪ್ಪುವವರ ಸಂಖ್ಯೆ ಹೆಚ್ಚಾಗುತ್ತಲೇ ಇದೆ. ಗುಂಡು ಪತ್ತೆ ಮಾಡುವ ಸಾಮರ್ಥ್ಯ ಇರುವ ಏಕೈಕ ಯಂತ್ರ ಕೆಟ್ಟು ನಿಂತಿದೆ ಎಂದವರು ವೈದ್ಯರು ವಿಷಾದಿಸಿದ್ದಾರೆ.

ಹೆದ್ದಾರಿಯಲ್ಲಿ ಸಂಚಾರ ಸಾಧ್ಯವಾಗದ ಕಾರಣ ಟೆಂಗ್ನೌಪಾಲ್ ಹಾಗೂ ಚಂಡೇಲ್ ಜಿಲ್ಲೆಗಳಲ್ಲಿ ಪರಿಸ್ಥಿತಿ ಇನ್ನಷ್ಟು ಹದಗೆಟ್ಟಿದೆ.

ನಮ್ಮ ಆಸ್ಪತ್ರೆಗಳಲ್ಲಿ ಔಷಧಗಳು ಖಾಲಿ ಆಗಿವೆ. ತಜ್ಞರು ಒತ್ತಟ್ಟಿಗಿರಲಿ, ಜ್ವರ ನೋಡುವ ವೈದ್ಯರೂ ಇಲ್ಲ. ಎಲ್ಲ ಅಗತ್ಯ ವಸ್ತುಗಳ ಬೆಲೆಗಳು ದುಪ್ಪಟ್ಟಾಗಿವೆ. ಹಣ ಕೊಡುತ್ತೇವೆ ಎಂದರೂ ಕೆಲ ವಸ್ತುಗಳು ಸಿಗುತ್ತಿಲ್ಲ ಎಂದು ನಗರದ ಮಹಿಳಾ ಹಕ್ಕುಗಳ ಸಂಘದ ಅಧ್ಯಕ್ಷರಾದ ಚಾಂಗ್ ಹೋಕಿಪ್ ಹೇಳಿದ್ದಾರೆ.

ರಸ್ತೆ ತಡೆಯಿಂದ ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರಿರುವುದರಿಂದ ಸ್ಥಳೀಯ ಜನರು ಹೈರಾಣಾಗಿದ್ದಾರೆ. ಮೇ ತಿಂಗಳ ನಂತರ ಬೆಲೆಗಳು ದುಪ್ಪಟ್ಟಾಗಿವೆ ಎಂದು ಚುರಚಂದಪುರ ಮಾರುಕಟ್ಟೆಯ ವರ್ತಕರು ಹೇಳಿದ್ದಾರೆ.

ಇಂಫಾಲ್ ಕಣಿವೆಯ ರಸ್ತೆ ತಡೆಯಲಾಗಿದೆ. ಹೀಗಾಗಿ ಮಿಜೋರಾಂ ಮೂಲಕವೇ ಸರಕುಗಳು ಬರಬೇಕಿದೆ. ಸಾರಿಗೆ ವೆಚ್ಚ ದುಬಾರಿಯಾಗಿದೆ. ಅಗತ್ಯ ವಸ್ತುಗಳು ಬರುವುದೂ ತಡವಾಗುತ್ತಿದೆ ಎಂದು ಇಲ್ಲಿನ ಅಂಗಡಿಯವರಾದ ಹಂಬೈ ಹೇಳಿದ್ದಾರೆ.

ಕುಕಿ ಸಮುದಾಯಗಳ ಜೊತೆ ಮಾತುಕತೆ ನಡೆಸುವ ಮೂಲಕ ಅವರು ರಸ್ತೆ ತಡೆ ತೆರವುಗೊಳಿಸಲು ಮನವೊಲಿಸಲಾಗಿದೆ. ಆದರೆ, ಚುರಚಂದಪುರ ಹಾಗೂ ಟೆಂಗ್ನೌಪಾಲ್ ಜಿಲ್ಲೆಗಳ ರಸ್ತೆ ತಡೆ ಮುಂದುವರೆದರೆ, ಕುಕಿಗಳು ಮತ್ತೆ ಹೋರಾಟಕ್ಕೆ ಮುಂದಾಗುವ ಸಾಧ್ಯತೆ ಇದೆ.

## ಸಂಯಮ ಕಾಯ್ದುಕೊಳ್ಳಿ

ನವದೆಹಲಿ, ಜು. 10 – ಮಣಿಪುರದಲ್ಲಿ ಉದ್ವಿಗ್ನತೆ ಹೆಚ್ಚಿಸಲು ತನ್ನನ್ನು ವೇದಿಕೆ ಮಾಡಿಕೊಳ್ಳಬಾರದು ಎಂದು ಹೇಳಿರುವ ಸುಪ್ರೀಂ ಕೋರ್ಟ್, ನ್ಯಾಯಿಕ ಪ್ರಕ್ರಿಯೆ ವೇಳೆ ಸಮುದಾಯ ಗಳು ಸಂಯಮ ಕಾಯ್ದುಕೊಳ್ಳಬೇಕು ಎಂದು ಹೇಳಿದೆ.

ಮಣಿಪುರದಲ್ಲಿ ನಡೆಯುತ್ತಿರುವ ಸಂಘರ್ಷ ತಡೆಯಲು ತಾನೇ ಕಾನೂನು - ಸುವ್ಯವಸ್ಥೆ ವಿಷಯವನ್ನು ಕೈಗೆತ್ತಿಕೊಳ್ಳಲು ಸಾಧ್ಯವಿಲ್ಲ. ಇದು ಕೇಂದ್ರ ಹಾಗೂ ರಾಜ್ಯಗಳ ಹೊಣೆ ಎಂದೂ ನ್ಯಾಯಾಲಯ ತಿಳಿಸಿದೆ.

**ಮಣಿಪುರ ಸಮುದಾಯಗಳಿಗೆ ಸುಪ್ರೀಂ ಕೋರ್ಟ್ ಸೂಚನೆ**

ಈ ನ್ಯಾಯಾಲಯದ ಕಲಾಪಗಳನ್ನು ಹಾಗೂ ನ್ಯಾಯಾಲಯದ ವೇದಿಕೆಯನ್ನು ಹಿಂಸಾಚಾರ, ಮತ್ತಿತರೆ ಸಮಸ್ಯೆಗಳಿಗೆ ವೇದಿಕೆ ಮಾಡಿಕೊಳ್ಳುವುದನ್ನು ನಾವು ಬಯಸುವುದಿಲ್ಲ. ಸಕಾರಾತ್ಮಕ ಸಲಹೆಗಳನ್ನು ನೀಡಿದಲ್ಲಿ ಅದನ್ನು ಕೇಂದ್ರ ಹಾಗೂ ರಾಜ್ಯಗಳಿಗೆ ಸೂಕ್ತ ಕ್ರಮಕ್ಕೆ ಕಳಿಸಲಾಗುವುದು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಮಣಿಪುರದಲ್ಲಿ ಕುಕಿ ಹಾಗೂ ಮೀಟಿ ಗುಂಪುಗಳು ತೀವ್ರ ಸಂಘರ್ಷದಲ್ಲಿ ತೊಡಗಿವೆ. ಈ ವಿಷಯ ಈಗ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದೆ. ಸಂಘರ್ಷದಲ್ಲಿ 150ಕ್ಕೂ ಹೆಚ್ಚು ಜನರು ಸಾವನ್ನಪ್ಪಿದ್ದಾರೆ.

# ಲೋಕಸಭೆ: ರಾಜ್ಯದಿಂದ ಪ್ರಿಯಾಂಕ ಗಾಂಧಿ ಸ್ಪರ್ಧೆ?

ಬೆಂಗಳೂರು, ಜು.10 - ವಿಧಾನಸಭಾ ಚುನಾವಣಾ ಫಲಿತಾಂಶವನ್ನೇ ಲೋಕಸಭಾ ಚುನಾವಣೆಯಲ್ಲೂ ಮುಂದುವರೆಸಿ, ಕನಿಷ್ಠ 20 ಕ್ಷೇತ್ರಗಳನ್ನು ಗೆಲ್ಲಲು ಕಾರ್ಯತಂತ್ರ ರೂಪಿಸಿರುವ ಪ್ರದೇಶ ಕಾಂಗ್ರೆಸ್, ತಮ್ಮ ನಾಯಕಿ ಪ್ರಿಯಾಂಕ ಗಾಂಧಿ ಅವರನ್ನು ಕರ್ನಾಟಕದಿಂದ ಕಣಕ್ಕಿಳಿಸುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಯದುವಂಶದ ಯುವರಾಜ ಯದುವೀರ್ ಅವರನ್ನು ರಾಜಕೀಯಕ್ಕೆ ಕರೆತಂದು ಮೈಸೂರು-ಕೊಡಗು ಕ್ಷೇತ್ರದಿಂದ ಕಣಕ್ಕಿಳಿಸಲು ಆಸಕ್ತಿ ತೋರಿದ್ದ ಕಾಂಗ್ರೆಸ್‌ಗೆ ಯುವರಾಜರು ಸಮ್ಮತಿ ನೀಡಿಲ್ಲ.

ಈ ಕ್ಷೇತ್ರದಿಂದ ಪ್ರಿಯಾಂಕ ಇಲ್ಲವೇ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪುತ್ರ ಯತೀಂದ್ರ, ಸಿದ್ದರಾಮಯ್ಯ ಅವರನ್ನು ಕಣಕ್ಕಿಳಿಸುವ ಬಗ್ಗೆಯೂ ಪರಿಶೀಲಿಸಲಾಗುತ್ತಿದೆ.

ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಅವರನ್ನು ಗುಲ್ಬರ್ಗ ಮೀಸಲು ಕ್ಷೇತ್ರದ ಬದಲಾಗಿ ಕೋಲಾರ ಮೀಸಲು ಲೋಕಸಭಾ ಕ್ಷೇತ್ರದಿಂದ ಕಣಕ್ಕಿಳಿಸುವ ಸಾಧ್ಯತೆಯೂ ಇದೆ. ಗುಲ್ಬರ್ಗದಲ್ಲಿ ನಿಂತರೂ ಖರ್ಗೆ ಅವರು ಲೋಕಸಭಾ ಪ್ರವೇಶ ಮಾಡುವ

**ಪ್ರಿಯಾಂಕ ಅವರನ್ನು ಮೈಸೂರು ಇಲ್ಲವೇ, ಉಡುಪಿ-ಚಿಕ್ಕಮಗಳೂರಿನಿಂದಲೂ, ಚಿತ್ರನಟಿ ರಮ್ಯ ಅವರನ್ನು ಮತ್ತೆ ಸಕ್ರಿಯ ರಾಜಕಾರಣಕ್ಕೆ ಕರೆತಂದು ಮಂಡ್ಯ ದಿಂದಲೂ ಕಣಕ್ಕಿಳಿಸುವ ಸಾಧ್ಯತೆಯೂ ಇದೆ.**



ವಿಶ್ವಾಸವಿದೆ. ಆದರೆ, ಕೋಲಾರ ಸ್ಪರ್ಧೆ ಮಾಡಿದರೆ ಗೆಲುವಿನ ದಡ ತಲುಪುವುದು ಸುಲಭ ಎಂಬುದು ಪಕ್ಷದಲ್ಲಿನ ಚಿಂತನೆಯಾಗಿದೆ.

ಅಲ್ಲದೆ, ಹಳೇ ಮೈಸೂರು ಭಾಗದ ಕ್ಷೇತ್ರಗಳ ಮೇಲೆ ಹೆಚ್ಚು ಪ್ರಭಾವ ಉಂಟಾಗಿ, ಇತರೆ ಅಭ್ಯರ್ಥಿಗಳಿಗೂ ಅನುಕೂಲವಾಗಲಿದೆ ಎಂಬ ಲೆಕ್ಕಾಚಾರ ಹಾಕಲಾಗಿದೆ.

ಲೋಕಸಭೆ ಚುನಾವಣೆಗೆ ಹತ್ತು ತಿಂಗಳಿಗೂ ಮುನ್ನವೇ ಕೆಪಿಸಿಸಿ ಚುನಾವಣಾ ಸಿದ್ಧತೆ ಆರಂಭಿಸಿದ್ದು, ಇದೇ ಸಂದರ್ಭದಲ್ಲಿ ಸಂಭವನೀಯ ಅಭ್ಯರ್ಥಿಗಳ ಪಟ್ಟಿ ಸಿದ್ಧಪಡಿಸಿದೆ. ಕಳೆದ ಶನಿವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ನಾಯಕತ್ವದಲ್ಲಿ ಲೋಕಸಭಾ ಚುನಾವಣೆ ಮತ್ತು ಅಭ್ಯರ್ಥಿಗಳ ಆಯ್ಕೆಗೆ ಸಂಬಂಧಿಸಿದಂತೆ ನಡೆದ ಉನ್ನತ ಮಟ್ಟದ ಸಭೆಯಲ್ಲಿ ಬಹುತೇಕ ಕ್ಷೇತ್ರಗಳಿಗೆ ಸಂಭವನೀಯ ಅಭ್ಯರ್ಥಿಗಳನ್ನು ಅಂತಿಮಗೊಳಿಸಲಾಗಿದೆ.

ವಿಧಾನಸಭಾ ಚುನಾವಣೆಯಲ್ಲಿ ಪಕ್ಷಕ್ಕೆ ದೊರೆತಿರುವ ಮತಗಳ ಆಧಾರದ ಮೇಲೆ 28 ಕ್ಷೇತ್ರಗಳ ಪೈಕಿ 20 ಕ್ಷೇತ್ರಗಳಲ್ಲಿ ಗೆಲ್ಲುವ ಪಣ ತೊಟ್ಟಿದ್ದಾರೆ. ಇಷ್ಟು ಕ್ಷೇತ್ರಗಳನ್ನು ಗೆಲ್ಲಲು ಏನೇನು ತಂತ್ರಗಾರಿಕೆ ಮಾಡಬೇಕು ಎಂಬುದಕ್ಕೆ ಚುನಾವಣಾ ಚಾಣಾಕ್ಷ ಸುನೀಲ್ ಕನ್ನಗೋಳ್ ಅವರಿಂದ ಮಾಹಿತಿ ಕೇಳಿದ್ದಾರೆ.

ಸಂಸದ ಡಿ.ಕೆ.ಸುರೇಶ್ ಅವರು ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಲು ಉತ್ಸುಕತೆ ತೋರದೆ ಇರುವ ಪರಿಣಾಮವಾಗಿ ಬೆಂಗಳೂರು ಗ್ರಾಮಾಂತರದ ಜತೆಗೆ ಬೆಂಗಳೂರು ದಕ್ಷಿಣ ಕ್ಷೇತ್ರದಿಂದಲೂ ಸ್ಪರ್ಧೆ ಮಾಡಲು ಅವಕಾಶ ನೀಡಲಾಗುತ್ತದೆ ಎಂಬುದು ಕಾಂಗ್ರೆಸ್ ಮೂಲಗಳ ಹೇಳಿಕೆ.

# ಕನ್ನಡ ಕಡ್ಡಾಯಗೊಳಿಸಲು ಕಾನೂನು ಜಾರಿಗೆ ಬರಲಿ

ರಾಣೇಬೆನ್ನೂರು, ಜು. 10- ಕನ್ನಡ ಕಡ್ಡಾಯಗೊಳಿಸಲು ಕಾನೂನು ಜಾರಿಗೆ ಬರಲಿ. ಭಾಷೆಯ ಪ್ರಾಚೀನತೆಯ ವೈಭವವನ್ನು ಯಾರೂ ಅಲ್ಲಗಳೆಯುಂತಿಲ್ಲ. ಜನಮಾನಸದಲ್ಲಿ ಶಾಶ್ವತವಾಗಿ ಉಳಿಯುವಂತೆ ಎಲ್ಲರೂ ಅನುಷ್ಠಾನಕ್ಕೆ ತರಬೇಕು ಎಂದು ಜೆ.ಎಂ.ಮಠದ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

**ರಾಣೇಬೆನ್ನೂರು**

ಸರ್ಕಾರ ಕೇವಲ ಕಾನೂನು ಮಾಡಿದರೆ ಸಾಲದು. ಎಲ್ಲಾ ವ್ಯವಹಾರಗಳಲ್ಲಿ ಎಲ್ಲರೂ ಅಂಕಿ-ಲಿಪಿ, ಬರಹ ಕಡ್ಡಾಯವಾಗಿ ಬಳಕೆ ಮಾಡಬೇಕು. ಬಳಸದೇ ಇರುವ ಭಾಷೆಗಳು ಹಾಗೂ ಲಿಪಿ ನಶಿಸುತ್ತದೆ. ಇದಕ್ಕೆ ಪೂರಕವಾಗಿ ಬಳಸದಿರುವ ವಸ್ತುಗಳು ಅವಸಾನಗೊಳ್ಳುವುದನ್ನು ಹಿರಿಯರು ನೆನಪಿಸಿಕೊಳ್ಳಬೇಕೆಂದರು.

ಕನ್ನಡದ ಬಗೆಗೆ ಘೋಷಣೆಗಳು ಕೇವಲ ನವೆಂಬರ್‌ಗೆ ಸೀಮಿತವಾಗಬಾರದು. ಪ್ರತಿಯೊಬ್ಬರೂ ನಿತ್ಯ ಅನುಷ್ಠಾನಗೊಳಿಸಬೇಕು. ನಾಡಿನ ಹಿರಿಯ ಸಾಹಿತಿಗಳು, ವಿದ್ವಾಂಸರು ಕನ್ನಡದ ತೇರನ್ನು ಇಲ್ಲಿಯವರೆಗೆ ಎಳೆದು ತಂದಿರುವ ಬಗ್ಗೆ ಕನ್ನಡ ಪ್ರಾಥಮಿಕ ಶಾಲಾ ಮಕ್ಕಳಿಗೆ ಮನದಟ್ಟು ಮಾಡಿಕೊಡಬೇಕು ಎಂದರು.

ಬ್ಯಾಂಕ್ ಮೊದಲುಗೊಂಡು ಎಲ್ಲಾ ಉದ್ಯೋಗಗಳಲ್ಲಿ ಪ್ರಾತಿನಿಧ್ಯವಿರಬೇಕು. ಅಂತರರಾಷ್ಟ್ರೀಯ ವ್ಯವಹಾರಕ್ಕೆ ಮಾತ್ರ ಅನ್ಯ ಭಾಷೆ ಬಳಸಬೇಕು. ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರ ಕೊರತೆಯಿಂದ ಗುಣಮಟ್ಟ ಕುಸಿದಿದ್ದು, ಶಿಕ್ಷಕರ ನೇಮಕಾತಿಗೆ ಮುಂದಾಗಬೇಕೆಂದು ಮನವಿ ಮಾಡಿದರು. ಪತ್ರಿಕಾಗೋಷ್ಠಿಯಲ್ಲಿ ಕೆ.ಹೆಚ್. ಮುಕ್ಕಣ್ಣನವರ, ಜಿ. ಬಿ. ಮಾಸಣಗಿ, ಹೆಚ್.ಹೆಚ್. ದೊಡ್ಡಮನಿ ಮತ್ತಿತರರಿದ್ದರು.

# 24 ಗಂಟೆಯೊಳಗೆ ಬಸ್ ವ್ಯವಸ್ಥೆ ಕಲ್ಪಿಸಿದ ಶಾಸಕ ಬಸವರಾಜು



ಚನ್ನಗಿರಿ, ಜು.10- ತಾಲ್ಲೂಕಿನ ಪುಟ್ಟಹಳ್ಳಿಗೆ ಶಾಸಕ ಬಸವರಾಜು ವಿ. ಶಿವಗಂಗಾ ಸರ್ಕಾರಿ ಬಸ್ ವ್ಯವಸ್ಥೆ ಕಲ್ಪಿಸಿದರು. ತಾಲ್ಲೂಕಿನ ಹೊನ್ನೇಮರದಹಳ್ಳಿ ಹಾಗೂ ಬೊಮ್ಮೇನಹಳ್ಳಿ ಗ್ರಾಮಕ್ಕೆ ನಿನ್ನೆ ಭೇಟಿ ನೀಡಿದ ಶಾಸಕ ಬಸವರಾಜು ವಿ. ಶಿವಗಂಗಾ ಅವರಿಗೆ ಗ್ರಾಮಸ್ಥರು ಸರ್ಕಾರಿ ಬಸ್ ವ್ಯವಸ್ಥೆ ಕಲ್ಪಿಸಬೇಕೆಂದು ಮನವಿ ಮಾಡಿದರು. ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿದ ಶಾಸಕರು, ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿದರು. ಬಳಿಕ ನಾಳೆಯೇ ಸರ್ಕಾರಿ ಬಸ್ ವ್ಯವಸ್ಥೆ ಮಾಡಬೇಕೆಂದು ಸೂಚಿಸಿದ್ದರು. ಶಾಸಕರ ಸೂಚನೆಯಂತೆ ಹೊನ್ನೇಮರದಹಳ್ಳಿ ಗ್ರಾಮಕ್ಕೆ ಸೋಮವಾರ ಮಧ್ಯಾಹ್ನ 3.30 ಕ್ಕೆ ಸರ್ಕಾರಿ ಬಸ್ ಆಗಮಿಸಿತು.

ಈ ವೇಳೆ ಗ್ರಾಮಸ್ಥರು ಸಂತೋಷದಿಂದ ಮೊದಲ ಬಾರಿಗೆ ಬಂದ ಸರ್ಕಾರಿ ಬಸ್‌ಗೆ ವಿಶೇಷ ಪೂಜೆ ಸಲ್ಲಿಸುವ ಮೂಲಕ ಬಸ್ ವ್ಯವಸ್ಥೆಗೆ ಚಾಲನೆ ನೀಡಿದರು. ಸ್ವಾತಂತ್ರ್ಯದ ಬಳಿಕ ಮೊಟ್ಟ ಮೊದಲ ಬಾರಿಗೆ ಹೊನ್ನೇಮರದಹಳ್ಳಿ ಹಾಗೂ ಬೊಮ್ಮೇನಹಳ್ಳಿ ಗ್ರಾಮಕ್ಕೆ ಸರ್ಕಾರಿ ಬಸ್ ಬಂದಂತಾಗಿದೆ. ಈ ಎರಡೂ ಗ್ರಾಮಗಳ ಜನರು ಸ್ವಂತ ವಾಹನ ಇಲ್ಲವೇ ನಡೆದುಕೊಂಡು ಹೋಗಬೇಕಿತ್ತು.

ಈ ನಡುವೆ ಶಾಲಾ-ಕಾಲೇಜ್‌ಗೆ ಹಾಗೂ ಜಿಲ್ಲಾ, ತಾಲ್ಲೂಕು ಕೇಂದ್ರಕ್ಕೆ ಹೋಗಲು ಸಮಸ್ಯೆ ಉಂಟಾಗುತ್ತಿತ್ತು. ಇದೀಗ ಶಾಸಕರ ಇಚ್ಛಾಶಕ್ತಿಯಿಂದ ಎರಡೂ ಗ್ರಾಮಗಳ ಜನರಿಗೆ ಸಾರಿಗೆ ವ್ಯವಸ್ಥೆ ಸಿಕ್ಕಂತಾಗಿದೆ.

# ಸೆಮಿಕಂಡಕ್ಟರ್ ಉದ್ಯಮದಿಂದ ಹಿಂದೆ ಸರಿದ ಫಾಕ್ಸ್‌ಕಾನ್

ನವದೆಹಲಿ, ಜು. 10 – ಭಾರತದ ವೇದಾಂತ ಜೊತೆಗೂಡಿ ಸ್ಥಾಪಿಸಲು ಉದ್ದೇಶಿಸಿದ್ದ ಸೆಮಿಕಂಡಕ್ಟರ್ ಉದ್ಯಮ ಯೋಜನೆಯಿಂದ ಹಿಂದೆ ಸರಿದಿರುವುದಾಗಿ ಫಾಕ್ಸ್‌ಕಾನ್ ತಿಳಿಸಿದೆ. ಜಾಗತಿಕ ಉದ್ಯಮವಾದ ಫಾಕ್ಸ್‌ಕಾನ್ ಹಾಗೂ ವೇದಾಂತಗಳು ಕಳೆದ ವರ್ಷ ಗುಜರಾತ್‌ನಲ್ಲಿ ಸೆಮಿಕಂಡಕ್ಟರ್ ಉದ್ಯಮ ಸ್ಥಾಪಿಸಲು ಒಪ್ಪಂದ ಮಾಡಿಕೊಂಡಿದ್ದವು. ಇದರಿಂದ 1.5 ಲಕ್ಷ ಕೋಟಿ ರೂ. ಹೂಡಿಕೆ ಬರುವ ನಿರೀಕ್ಷೆ ಇತ್ತು.

# ನಗರದಲ್ಲಿ ಸುದರ್ಶನ ಕ್ರಿಯೆ ಶಿಬಿರ



ಗುರುದೇವ ಶ್ರೀ ರವಿಶಂಕರ ಗುರೂಜಿಯವರ ಆರ್ಟ್ ಆಫ್ ಲಿವಿಂಗ್ ವತಿಯಿಂದ 18 ವರ್ಷ ಮೇಲ್ಪಟ್ಟವರಿಗೆ ಸಂತೋಷದ ಕಾರ್ಯಾಗಾರ (ಸುದರ್ಶನ ಕ್ರಿಯೆ) ದಾವಣಗೆರೆ ಪಿ.ಜೆ. ಬಡಾವಣೆಯ ಡಾ. ಬಾಣಾಪುರಮಠ ಮಕ್ಕಳ ಆಸ್ಪತ್ರೆಯ 2ನೇ ಮಹಡಿಯಲ್ಲಿ ಇಂದಿನಿಂದ ಇದೇ ದಿನಾಂಕ 16 ರವರೆಗೆ ನಡೆಯಲಿದೆ. ವಿವರಕ್ಕೆ ಸಂಪರ್ಕಿಸಿ : 99005-01877, 77601-55659.

# ಉತ್ತರ ಭಾರತದಲ್ಲಿ ಮತ್ತೆ ಅಬ್ಬರಿಸಿದ ಮಳೆರಾಯ

ನವದೆಹಲಿ, ಜು. 10 – ಉತ್ತರ ಭಾರತದಲ್ಲಿ ಸೋಮವಾರವೂ ಧಾರಾಕಾರ ಮಳೆ ಮುಂದುವರೆದಿದ್ದು, ಹಿಮಾಚಲ ಪ್ರದೇಶದಲ್ಲಿ ತೀವ್ರ ಹಾನಿಯಾಗಿದೆ. ನೆರವು ಹಾಗೂ ರಕ್ಷಣಾ ಕಾರ್ಯಾಚರಣೆಗಾಗಿ ಸೈನ್ಯ ಹಾಗೂ ಎನ್.ಡಿ.ಆರ್.ಎಫ್. ತಂಡಗಳನ್ನು ಕಳಿಸಲಾಗಿದೆ.

ಹಿಮಾಚಲ ಪ್ರದೇಶ ಹಾಗೂ ಉತ್ತರಾಖಂಡಗಳ ಮುಖ್ಯಮಂತ್ರಿಗಳ ಜೊತೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಮಾತನಾಡಿದ್ದು, ಕೇಂದ್ರದಿಂದ ನೆರವು ಕಲ್ಪಿಸುವ ಭರವಸೆ ನೀಡಿದ್ದಾರೆ.

ಹಿರಿಯ ಅಧಿಕಾರಿಗಳೊಂದಿಗೆ ಪ್ರಧಾನಿ ಮೋದಿ ಮಾತನಾಡಿದ್ದು, ಮಳೆಯಿಂದ ಆಗಿರುವ ಹಾನಿ ವಿವರ ಪಡೆದಿದ್ದಾರೆ. ರಾಜಧಾನಿ ದೆಹಲಿ ಸೇರಿದಂತೆ ಹಲವಾರು ನಗರಗಳು ಕುಂಭದ್ರೋಣ ಮಳೆಯಿಂದ ತತ್ತರಿಸಿವೆ.

ಪಂಜಾಬ್, ಹಿಮಾಚಲ ಪ್ರದೇಶ, ಉತ್ತರಾಖಂಡ ಹಾಗೂ ಹರಿಯಾಣಗಳಿಗೆ 39 ವಿಕೋಪ ನಿರ್ವಹಣಾ ತಂಡಗಳನ್ನು ಕಳಿಸಲಾಗಿದೆ. ಕಳೆದ ಎರಡು ದಿನಗಳಲ್ಲಿ ಮಳೆ ಸಂಬಂಧದ ಘಟನೆಗಳಿಂದ 16 ಜನ ಸಾವನ್ನಪ್ಪಿದ್ದಾರೆ.



# ಸ್ತ್ರೀಯರು ಮತ್ತು ಸಾಮಾಜಿಕ ಮೌಲ್ಯಗಳು

ದಾವಣಗೆರೆ, ಜು. 10- ನಗರದ ವಿನೂತನ ಮಹಿಳಾ ಸಮಾಜದಲ್ಲಿ ಶ್ರೀಮತಿ ಚಂದ್ರಿಕಾ ಮಂಜುನಾಥ ಅವರ ಅಧ್ಯಕ್ಷತೆಯಲ್ಲಿ ಸಾಧಾನಾಶ್ರಮದ ಮಾತಾ ಯೋಗಾನಂದಮಯಿ ಸ್ತ್ರೀಯರು ಮತ್ತು ಸಾಮಾಜಿಕ ಮೌಲ್ಯಗಳು ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಿದರು.ಹೇಮಾ ಗಣೇಶ್, ಇಂದಿರಾ ರೆಡ್ಡಿ, ಸುಧಾ ಪಾಟೀಲ್, ಗೀತಾ ರೆಡ್ಡಿ, ಭುವನ ಚಂದ್ರಶೇಖರ್, ಮಮತಾ ನಾಗರಾಜ್, ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಚೈತ್ರ ಜಗದೀಶ್, ಮಮತಾ ಶ್ರೀಧರ್ ಪ್ರಾರ್ಥಿಸಿದರು. ಸುಕನ್ಯಾ ಬಸವರಾಜ್ ಸ್ವಾಗತಿಸಿದರು. ಪುಷ್ಪಾ ಬಸವರಾಜ್ ಅತಿಥಿ ಪರಿಚಯ ನಡೆಸಿಕೊಟ್ಟರು. ಲತಾ ಸತೀಶ್ ಕಾರ್ಯಕ್ರಮ ನಿರೂಪಿಸಿದರು.

# ಲಂಬಾಣಿ ಮಹಿಳೆಯರ ಕಸೂತಿ ಗಿನ್ನಿಸ್ ದಾಖಲೆಗೆ

ಹಂಪಿ, ಜು. 10 – ಲಂಬಾಣಿ ಸಮುದಾಯದ ಮಹಿಳೆಯರು ಹಂಪಿಯಲ್ಲಿ ಕಸೂತಿ ಕಲೆಗಾರಿಕೆ ಮೂಲಕ ಹೊಸ ಗಿನ್ನಿಸ್ ದಾಖಲೆ ಬರೆದಿದ್ದಾರೆ.

ಜಿ20 ಸಂಸ್ಕೃತಿ ಕಾರ್ಯಕಾರಿ ಗುಂಪಿನ ಸಭೆಯ ಸಂದರ್ಭದಲ್ಲಿ ಲಂಬಾಣಿ ಮಹಿಳೆಯರು ರೂಪಿಸಿದ ಕಸೂತಿ ಬಟ್ಟೆಗಳನ್ನು ಪ್ರದರ್ಶಿಸಲಾಯಿತು. ಸಂಡೂರಿನ ಕಲಾ ಕೇಂದ್ರದ 450 ಮಹಿಳೆಯರು ರೂಪಿಸಿರುವ ಈ ಕಸೂತಿ ಬಟ್ಟೆಗಳು ಗಿನ್ನಿಸ್ ದಾಖಲೆಗೆ ಸೇರ್ಪಡೆಯಾಗಿವೆ.


## ಹೃದಯ ಪೂರ್ವಕ ಕೃತಜ್ಞತೆಗಳು



ನಿಂಬಕ್ಕ ಚಂದಪೂರ್
ಅಧ್ಯಕ್ಷರು ನಗರಸಭೆ ಹರಿಹರ.
ಹರಿಹರ ನಗರಸಭೆಗೆ ನೂತನ ಅಧ್ಯಕ್ಷರಾಗಿ ಆಯ್ಕೆಯಾಗುವುದಕ್ಕೆ ಸಹಕಾರ ನೀಡಿರುವ ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಮತ್ತು ಜೆಡಿಸ್ ಪಕ್ಷದ ಜಿಲ್ಲಾ ಅಧ್ಯಕ್ಷ ಬಿ. ಚಿದಾನಂದಪ್ಪ ಹಾಗೂ ನಗರಸಭೆಯ ಎಲ್ಲಾ ಸರ್ವ ಸದಸ್ಯರಿಗೂ, ಅಧಿಕಾರಿಗಳಿಗೂ, ಸಿಬ್ಬಂದಿಗಳಿಗೂ, ವಾರ್ಡಿನ ಮತದಾರರಿಗೆ ಹಾಗೂ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಸಹಕರಿಸಿದವರಿಗೂ
ಹೃದಯ ಪೂರ್ವಕ ಕೃತಜ್ಞತೆಗಳು...







ನಿಂಬಕ್ಕ ಚಂದಪೂರ್
ಅಧ್ಯಕ್ಷರು ನಗರಸಭೆ ಹರಿಹರ.
ಸುರೇಶ್ ಚಂದಪೂರ್
ಜೆಡಿಸ್ ಪಕ್ಷದ ಮುಖಂಡರು ಹರಿಹರ.

